

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 20 ಶನಿವಾರ 2022

ಸಂಪುಟ: 43 | ಸಂಚಿಕೆ: 125 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರು ನಗರದಲ್ಲಿ ಈ ಬಾರಿ 110 ಕಿ.ಮೀ. ವಿದ್ಯುತ್ ದೀಪಾಲಂಕಾರ

ದಸರೆಯಲ್ಲಿ ಪುನೀತ್ ಪ್ರತಿಕೃತಿ ಸೇರಿ ಅತ್ಯಾಕರ್ಷಕ ಆಕೃತಿಗಳು ಝುಗಮಗಿಸಲಿವೆ



ಮೈಸೂರು, ಆ. 19(ಆರ್‌ಕೆ)– ಪ್ರಸಕ್ತ ಸಾಲಿನ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿರುವ ಸರ್ಕಾರ, ಸಾಂಸ್ಕೃತಿಕ ನಗರಿ ಮೈಸೂರು ನಗರದಾದ್ಯಂತ ರಸ್ತೆ, ಸರ್ಕಲ್, ಜಂಕ್ಷನ್, ಉದ್ಯಾನವನ ಸೇರಿದಂತೆ 110 ಕಿ.ಮೀ. ವಿದ್ಯುತ್ ದೀಪಾಲಂಕಾರಕ್ಕೆ ತಯಾರಿ ನಡೆಸಿದೆ.

ದೇಶ–ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸಿ, ಇಲ್ಲಿನ ಪ್ರತಿಯೊಂದು ಉದ್ದಿಮೆಯ ಬೆಳವಣಿಗೆಗೆ ದಸರಾ ಮಹೋತ್ಸವವನ್ನು ಬಳಸಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ (ಚೆಸ್ಕಾಂ) ಅಧಿಕಾರಿಗಳು ವಿದ್ಯುದ್ದೀಪಾಲಂಕಾರವನ್ನು ಈ ಬಾರಿ ಅತ್ಯಾಕರ್ಷಕವಾಗಿ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಕೊರೊನಾ ಸಂಕಷ್ಟ ಪರಿಸ್ಥಿತಿಯಿಂದಾಗಿ ಕಳೆದ ಎರಡು ವರ್ಷಗಳ ಕಾಲ ಸರಳ ಹಾಗೂ ಸಾಂಪ್ರದಾಯಿಕವಾಗಿ ದಸರಾ ಆಚರಿಸಿದಾಗಲೂ, ವಿದ್ಯುದ್ದೀಪಾಲಂಕಾರವನ್ನು ವಿಶೇಷ ರೀತಿಯಲ್ಲಿ ಮಾಡಿ ಜನ ಮೆಚ್ಚುಗೆಗೆ ಪಾತ್ರರಾಗಿದ್ದ ಚೆಸ್ಕಾಂ ಅಧಿಕಾರಿಗಳು, ಸರ್ಕಾರದ ನಿರ್ದೇಶನದಂತೆ ಈ ಬಾರಿ ಪಶ್ಚಿಮ ಬಂಗಾಳ ರಾಜ್ಯದಿಂದ ವಿಶೇಷವಾದ ಎಲ್‌ಇಡಿ ವಿದ್ಯುತ್ ದೀಪಗಳನ್ನು ತರಿಸಿ ಆಕರ್ಷಕ ದೀಪಾಲಂಕಾರಕ್ಕೆ ಸದ್ದಿಲ್ಲದೇ ತಯಾರಿ ನಡೆಸಿದ್ದಾರೆ.

ಅರಮನೆ, ಸುತ್ತಲಿನ ರಸ್ತೆ, ಸರ್ಕಲ್, ರಾಜಮಾರ್ಗ, ಬನ್ನಿಮಂಟಪದ ಪಂಜಿನ ಕವಾಯತು ಮೈದಾನ, ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ, ಬಿಎನ್ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಅಶೋಕ ರಸ್ತೆ, ಇರ್ವಿನ್ ರೋಡ್, ಜೆಎಲ್‌ಬಿ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಕೆಆರ್‌ಎಸ್ ರಸ್ತೆ, ಹುಣಸೂರು ರಸ್ತೆ, ಚಾಮರಾಜ ಜೋಡಿ ರಸ್ತೆ, ಮಹಾತ್ಮಗಾಂಧಿ ರಸ್ತೆ, ಲಲಿತ ಮಹಲ್ ರಸ್ತೆ, ಪ್ರಮುಖ ಸರ್ಕಲ್‌ಗಳಲ್ಲಿ ಹಾಗೂ ಚಾಮುಂಡಿಬೆಟ್ಟದ ಮಾರ್ಗ, ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲೂ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲು ಯೋಜನೆ ರೂಪಿಸಲಾಗಿದೆ. ಮೈಸೂರಿನ ಪ್ರಮುಖ ಜಂಕ್ಷನ್‌ಗಳಲ್ಲಿ ಪುನೀತ್ ರಾಜ್‌ಕುಮಾರ್ ಪ್ರತಿಕೃತಿ ಸೇರಿದಂತೆ ವಿಶಿಷ್ಟ ಆಕೃತಿಗಳಿಗೆ ವಿಶಿಷ್ಟ ರೀತಿಯಲ್ಲಿ ಈ ಬಾರಿ ವಿದ್ಯುದ್ದೀಪಾಲಂಕಾರ ▶ 8ನೇ ಪುಟಕ್ಕೆ

ಕೆಹೆಚ್‌ಬಿಯಿಂದ ವರ್ಷಾಂತ್ಯಕ್ಕೆ

ಐವತ್ತು ಸಾವಿರ ನಿವೇಶನ ಹಂಚಿಕೆ

- ವಸತಿ ಸಚಿವ ಸೋಮಣ್ಣ ಘೋಷಣೆ
- ಕೋರ್ಟ್‌ಗಳಲ್ಲಿ ಇದ್ದ ಭೂ ವಿವಾದ ಸಂಪೂರ್ಣ ನಿವಾರಣೆ





(ಸಾಂದರ್ಭಿಕ ಚಿತ್ರ)

ಬೆಂಗಳೂರು, ಆ.19 (ಕೆಎಂಶಿ)–ಕರ್ನಾಟಕ ಗೃಹ ಮಂಡಳಿ, ವರ್ಷಾಂತ್ಯಕ್ಕೆ 50 ಸಾವಿರ ನಿವೇಶನಗಳನ್ನು ಹಂಚಲಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ಪ್ರಕಟಿಸಿದ್ದಾರೆ.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರ ಸೇರಿದಂತೆ ರಾಜ್ಯದ ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ಹೊಸ ಬಡಾವಣೆಗಳ ನಿರ್ಮಾಣ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಡಿಸೆಂಬರ್ ತಿಂಗಳಲ್ಲಿ ಈ ಪ್ರಮಾಣದ ನಿವೇಶನಗಳು ಗ್ರಾಹಕರಿಗೆ ಲಭ್ಯವಾಗಲಿದೆ. ಈಗಾಗಲೇ ರಾಜ್ಯಾದ್ಯಂತ ಆರು ಸಾವಿರ ನಿವೇಶನಗಳನ್ನು ಹಂಚಿದ್ದೇವೆ. ಯಾರು ಅರ್ಜಿ ಸಲ್ಲಿಸಿರುತ್ತಾರೋ ಅಂತಹ ಅರ್ಜಿದಾರರನ್ನು ಚೀಟಿ ಮೂಲಕ ಆಯ್ಕೆ ಮಾಡಿ, ಅವರಿಗೆ ಹಕ್ಕುಪತ್ರ ನೀಡಲಾಗುತ್ತಿದೆ ಎಂದರು.

ಮೈಸೂರು, ಮಂಡ್ಯ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ 600 ಎಕರೆ ಭೂಮಿಯ ವಿವಾದವನ್ನು ನ್ಯಾಯಾಲಯ ಬಗೆಹರಿಸಿದ್ದು, ಇದರಿಂದ ಏಳು ಸಾವಿರ ನಿವೇಶನಗಳು ಹೆಚ್ಚುವರಿಯಾಗಿ ಲಭ್ಯವಾಗಲಿವೆ. ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಭೂ ವ್ಯಾಜ್ಯದ ಪ್ರಕರಣಗಳಿಗೆ ಸುಪ್ರೀಂಕೋರ್ಟ್ ಮುಕ್ತಿ ನೀಡಿರುವುದರಿಂದ ಈ ನಿವೇಶನಗಳು ಲಭ್ಯವಾಗಿವೆ. ಅಂದು ರೈತರಿಂದ ಕಡಿಮೆ ಬೆಲೆಗೆ ಭೂ ಸ್ವಾಧೀನ ಮಾಡಿಕೊಳ್ಳಲಾಗಿತ್ತು. ಆದರೆ ಇಂದು ಭೂಮಿಯ ಬೆಲೆ ಗಗನಕ್ಕೇರಿದೆ. ರೈತರಿಗೆ ಅನ್ಯಾಯ ಮಾಡಬಾರದೆಂದು ನಿರ್ಮಾಣಗೊಂಡ ▶ 8ನೇ ಪುಟಕ್ಕೆ

ದಸರಾ ವೇಳೆಗೆ ಮೈಸೂರು–ಬೇಲೂರು–ಹಳೇಬೀಡು ಪ್ರವಾಸೋದ್ಯಮ ಸರ್ಕ್ಯೂಟ್ ಉದ್ಘಾಟನೆಗೆ ಸಿಎಂ ಸೂಚನೆ



- ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಪ್ರಗತಿ ಪರಿಶೀಲನೆ
- ಕಬಿನಿ, ಗೊರೂರು ಜಲಾಶಯಗಳ ಉದ್ಯಾನ ಅಭಿವೃದ್ಧಿಗೂ ಸಲಹೆ
- ಕಾರ್ಪೋರೇಟ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪತ್ರ
- ಕಾವೇರಿ ಸೇರಿದಂತೆ ಪ್ರಮುಖ ನದಿಗಳಲ್ಲಿ ಜಲಮಾರ್ಗ ರೂಪಿಸಲು ಸಿಎಂ ಸೂಚನೆ



ಬೆಂಗಳೂರು, ಆ.19(ಕೆಎಂಶಿ)– ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಬೇಕು. ಈ ದೃಷ್ಟಿಯಿಂದ ಪರಿಣಾಮಕಾರಿ ಪ್ರಚಾರ ಹಾಗೂ ಪ್ರವಾಸಿ ತಾಣಗಳಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಲು ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು. ಪ್ರವಾಸೋದ್ಯಮ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ರಾಜ್ಯದ ಆರ್ಥಿಕ ಪ್ರಗತಿ ಹಾಗೂ ಸಾಂಸ್ಕೃತಿಕವಾಗಿಯೂ ಪ್ರವಾಸೋದ್ಯಮ ಮಹತ್ವದ ಪಾತ್ರ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ ಎಂದು ತಿಳಿಸಿದರು. ಆಯವ್ಯಯದಲ್ಲಿ ಘೋಷಿಸಿದಂತೆ ಮೈಸೂರು– ಬೇಲೂರು– ಹಳೇಬೀಡು ಹಾಗೂ ಹಂಪಿ– ಬಾದಾಮಿ– ಐಹೊಳೆ–ಪಟ್ಟದಕಲ್ಲು ಪ್ರವಾಸೋದ್ಯಮ ಸರ್ಕ್ಯೂಟ್‌ಗಳನ್ನು ಶೀಘ್ರವೇ ಅಭಿವೃದ್ಧಿಪಡಿಸಿ, ದಸರಾ ವೇಳೆಗೆ ಮೈಸೂರು ಸರ್ಕ್ಯೂಟ್ ಹಾಗೂ ದೀಪಾವಳಿ ವೇಳೆಗೆ ಹಂಪಿ ಸರ್ಕ್ಯೂಟ್ ಉದ್ಘಾಟನೆಗೆ ಸಿದ್ಧವಾಗಬೇಕೆಂದು ಸೂಚಿಸಿದರು. ಈ ಸರ್ಕ್ಯೂಟ್‌ನಲ್ಲಿ ▶ 8ನೇ ಪುಟಕ್ಕೆ



ಜಂಬೂ ಸವಾರಿಯಲ್ಲಿ ಭಾಗವಹಿಸಲು ಕಲಾತಂಡಗಳಿಂದ ಅರ್ಜಿ ಆಹ್ವಾನ



ಮೈಸೂರು, ಆ.19(ಎಸ್‌ಬಿಡಿ)–ಮೈಸೂರು ದಸರಾ ಮಹೋತ್ಸವದ ಅತ್ಯಾಕರ್ಷಕ ಜಂಬೂ ಸವಾರಿಯಲ್ಲಿ ಭಾಗವಹಿಸಲು ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಬಾರಿ ಅತ್ಯಂತ ವೈಭವದಿಂದ ದಸರಾ ಮಹೋತ್ಸವ ಆಚರಿಸಲು ಸರ್ಕಾರ ನಿರ್ಧರಿಸಿದ್ದು, ಈ ನಿಟ್ಟಿನಲ್ಲಿ ಚಟುವಟಿಕೆಗಳು ಗರಿಗೆದರಿವೆ. ಮುಖ್ಯವಾಗಿ ನವರಾತ್ರಿ ನಂತರ ವಿಜಯ ದಶಮಿಯಂದು ನೆರವೇರುವ ಜಂಬೂಸವಾರಿ ▶ 8ನೇ ಪುಟಕ್ಕೆ

ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ

ಒಂಭತ್ತು ಮಂದಿ ಬಿಜೆಪಿ ಕಾರ್ಯಕರ್ತರ ಬಂಧನ

ರಾತ್ರಿಯೇ ಜಾಮೀನಿನ ಮೇಲೆ ಬಿಡುಗಡೆ

ಕುಶಾಲನಗರ, ಆ.19– ಕೊಡಗು ಜಿಲ್ಲೆಯಲ್ಲಿನ ಮಳೆಹಾನಿ ಪ್ರದೇಶಗಳ ವೀಕ್ಷಣೆ ಮುಗಿಸಿ ಹಿಂತಿರುಗುತ್ತಿದ್ದ ವಿಪಕ್ಷ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರು ತಡೆದು ಘೇರಾವ್ ಹಾಕಲು ಯತ್ನಿಸಿದ ಮತ್ತು ಕಾರಿಗೆ ಕೋಳಿ ಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಬಂಧಿಸಿದ್ದ ಒಂಭತ್ತು ಮಂದಿ ಬಿಜೆಪಿ ಕಾರ್ಯಕರ್ತರಿಗೆ ಇಲ್ಲಿನ ಹೆಚ್ಚುವರಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಸಮೀಪದ ಗುಡ್ಡೆಹೊಸೂರು ಸಿದ್ದಗಂಗಾ ಶ್ರೀ ವೃತ್ತದಲ್ಲಿ ಅರ್ಧ ಗಂಟೆ ಮುಂಚಿತವಾಗಿ ಬಿಜೆಪಿ ಕಾರ್ಯಕರ್ತರು ರಸ್ತೆಯ ಎರಡು ಬದಿಯಲ್ಲಿ ನಿಂತು ಸಿದ್ದರಾಮಯ್ಯ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ಭದ್ರತೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಸಿದ್ದರಾಮಯ್ಯ ಅವರ ಕಾರು ಬರುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ದಿಕ್ಕಾರದ ▶ 8ನೇ ಪುಟಕ್ಕೆ





ಭಾರ ಹೊರುವ ತಾಲೀಮು: 550 ಕೆಜಿ ಭಾರ ಹೊತ್ತು

ಸರಾಗವಾಗಿ ಸಾಗಿದ ಗೋಪಾಲಸ್ವಾಮಿ



ಮೈಸೂರು, ಆ.19(ಎಂಟಿವೈ)– ನಾಡಹಬ್ಬ ದಸರಾ ಗಜಪಡೆಗೆ ಭಾರ ಹೊರುವ ತಾಲೀಮಿನ ಎರಡನೇ ದಿನವಾದ ಶುಕ್ರವಾರ ಗೋಪಾಲಸ್ವಾಮಿ 550 ಕೆಜಿ ತೂಕದ ಭಾರವನ್ನು ಹೊತ್ತು ಸರಾಗವಾಗಿ ಗಾಂಭೀರ್ಯದಿಂದ ಸಾಗುವ ಮೂಲಕ ಭಾರೀ ವಿಶ್ವಾಸ ಮೂಡಿಸಿದ್ದಾನೆ.

ಅರಮನೆ ಆವರಣದಿಂದ ಇಂದು ಬೆಳಗ್ಗೆ 300 ಕೆಜಿ ತೂಕದ ಮರಳಿನ ಮೂಟೆಯೊಂದಿಗೆ 250 ಕೆಜಿ ತೂಕದ ಗಾದಿ, ನಮ್ದಾ ಹೊತ್ತು ತಾಲೀಮಿನಲ್ಲಿ ಹೆಜ್ಜೆ ಹಾಕಿತು. ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ, ಹೈವೆ ವೃತ್ತದ ಮೂಲಕ ಸುರಕ್ಷಿತವಾಗಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿತು. ಅರಮನೆಯಿಂದ ಬನ್ನಿಮಂಟಪದಲ್ಲಿರುವ ಪಂಜಿನ ಕವಾಯತು ಮೈದಾನ–5 ಕಿ.ಮೀ. ದೂರವನ್ನು ಕೇವಲ 1.10 ಗಂಟೆಯಲ್ಲೇ ತಲುಪಿ ಭರವಸೆ ಮೂಡಿಸಿತು.

ಕಳೆದ ವರ್ಷ ಶ್ರೀರಂಗಪಟ್ಟಣ ದಸರೆಯಲ್ಲಿ ಪಟಾಕಿ ಶಬ್ದಕ್ಕೆ ಬೆದರಿ ಅವಾಂತರ ಸೃಷ್ಟಿಸಿದ್ದ ಗೋಪಾಲಸ್ವಾಮಿ, ಇಂದು ಭಾರ ಹೊತ್ತು ಸರಾಗವಾಗಿ ಹೆಜ್ಜೆ ಹಾಕುವ ಮೂಲಕ ಹಳೆಯ ಕಹಿ ನೆನಪನ್ನು ಮರೆಸಿದ್ದಾನೆ. ಗೋಪಾಲಸ್ವಾಮಿ ಅಜಾನುಬಾಹು ದೇಹ ಸಂಪತ್ತು ಭಾರ ಹೊತ್ತು ಸರಾಗವಾಗಿ ಸಾಗಲು ಸಹಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಅಭಿಮನ್ಯುಗಿಂತ 5 ನಿಮಿಷ ಬೇಗ ಪಂಜಿನ ಕವಾಯತು ಮೈದಾನ ತಲುಪಿದ್ದಾನೆ. ನಂತರ ಕೆಲಕಾಲ ವಿಶ್ರಾಂತಿ ಪಡೆದು ಕೇವಲ 1 ಗಂಟೆಯಲ್ಲೇ ಅರಮನೆಗೆ ವಾಪಸ್ಸಾಗಿದ್ದಾನೆ.

ಭಲೇ ಗೋಪಾಲಸ್ವಾಮಿ

“ ಭಾರ ಹೊರುವ ಎರಡನೇ ದಿನದ ತಾಲೀಮಿನಲ್ಲಿ ಗೋಪಾಲಸ್ವಾಮಿ, 300 ಕೆಜಿ ಮರಳಿನ ಮೂಟೆ ಸೇರಿದಂತೆ 550 ಕೆಜಿ ತೂಕದ ಭಾರ ಹೊತ್ತು ಸರಾಗವಾಗಿ ಸಾಗಿದೆ. 5 ಕಿ.ಮೀ. ಅಂತರವನ್ನು 1.10 ನಿಮಿಷದಲ್ಲೇ ತಲುಪಿದ. ಮುಂಬರುವ ದಿನಗಳಲ್ಲಿ ಹೊಸ ಅಂಬಾರಿ ಆನೆಯಾಗಿ ಅಭಿಮನ್ಯುವಿಗೆ ಪರ್ಯಾಯವಾಗಲು ಇವನಿಗೂ ಭಾರದ ತಾಲೀಮು ನಡೆಸಲಾಗುತ್ತಿದೆ.

– ಡಾ.ವಿ.ಕರಿಕಾಳನ್, ಡಿಸಿಎಫ್

ಮೈಸೂರಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ



ಮೈಸೂರು, ಆ.19 (ಆರ್‌ಕೆ)– ಮೈಸೂರು ನಗರದಾದ್ಯಂತ ಶುಕ್ರವಾರ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಕೃಷ್ಣ ಜಯಂತ್ಯೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಶಾಸಕ ಎಲ್. ನಾಗೇಂದ್ರ ಅವರು ಶ್ರೀ ಕೃಷ್ಣ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ದೇಶ, ನ್ಯಾಯ, ನೀತಿ, ಧರ್ಮದ ಹಾದಿಯಲ್ಲಿ ಸಾಗಲು ಶ್ರೀ ಕೃಷ್ಣನ ಅನುಗ್ರಹ ಸಾಕಾರವಾಗಿದೆ. ಇಸ್ಕಾನ್‌ನಿಂದ ದೇಶಾದ್ಯಂತ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸುವುದರ ಜೊತೆಗೆ ಅಮೆರಿಕಾದಲ್ಲೂ ಶ್ರೀ ಕೃಷ್ಣನ ಲೀಲೆಗಳನ್ನು ಪ್ರಚಾರ ಮಾಡಲಾಗುತ್ತಿದೆ ಶ್ರೇಷ್ಠಯಾದವ ಕುಲದಲ್ಲಿ ವಾಸುದೇವ–ದೇವಕಿಯ ಮಗನಾಗಿ ಜನಿಸಿದ ಶ್ರೀ ಕೃಷ್ಣನು, ಮುಂದೆ ಕಂಸನ ವಧೆಗೈದು ಶಕ್ತಿಯೋಗಿಯಾಗಿ ಬೆಳೆದ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಮಾತನಾಡಿ, ಶ್ರೀ ಕೃಷ್ಣ ಮತ್ತು ಗೀತಸಾರ ಭಾರತದ ಸಂಸ್ಕೃತಿಯ ಹೆಗ್ಗಳಿಕೆಯಾಗಿದ್ದು, ಧರ್ಮದ ಉಳಿವಿಗಾಗಿ ಮನುಕುಲದ ಏಳ್ಗೆಗಾಗಿ ಅಪಾರ ಕೊಡುಗೆ ನೀಡಿರುವ ಶ್ರೀ ಕೃಷ್ಣ ಒಬ್ಬ ವ್ಯಕ್ತಿಯಲ್ಲ, ಜಗತ್ತಿನ ಶಕ್ತಿ ಎಂದರು.

ಯಾದವ ಕುಲದಲ್ಲಿ ಹುಟ್ಟಿ ಆ ಸಮಾಜಕ್ಕೆ ಸಿಗಬೇಕಾದ ಸೌಲಭ್ಯಗಳಿಗೆ ಪೂರಕವಾಗಿದ್ದ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಒಂದು ಶ್ರೇಷ್ಠ ಕೃತಿಯಲ್ಲಿರಬೇಕಾದ ಅಂಶಗಳನ್ನು ನಿರೂಪಿಸಿ ಕೊಟ್ಟಿದ್ದಾರೆ. ಆದರೆ ಯಾದವ ಸಮುದಾಯದವರು ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ನೆಲೆ ಸಿಗದೇ ನಿರ್ಲಕ್ಷ್ಯಕ್ಕೊಳಗಾಗುತ್ತಿರುವುದು ವಿಪರ್ಯಾಸದ ಸಂಗತಿ ಎಂದು ಅವರು ನುಡಿದರು.

ವಾಣಿ ವಿಲಾಸ ಅರಸು ಬಾಲಕಿಯರ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಎಸ್.ಎನ್. ಅನ್ನಪೂರ್ಣ ಅವರು ಮಾತನಾಡಿ, ಭಗವಾನ್ ಕೃಷ್ಣನು ತನ್ನ ಲೀಲೆಯನ್ನು ಜಗತ್ತಿಗೆ ತೋರಿಸಿದನು. ಗೋವಿಂದ, ನಾರಾಯಣ, ಜಗದೋದ್ಧಾರಕ, ಶ್ರೀ ಹರಿ, ಮುಕುಂದ ಹೀಗೆ ಅನೇಕ ಹೆಸರುಗಳಿಂದ ಕರೆಯಲ್ಪಡುವ ಶ್ರೀ ಕೃಷ್ಣನನ್ನು ಜನ ಭಕ್ತಿಯಿಂದ ಇಂದು ಆರಾಧಿಸುತ್ತಿದ್ದಾರೆ ಎಂದರು.ನಗರ ಪಾಲಿಕೆ ಸದಸ್ಯೆ ಗೀತಾ, ಯೋಗಾನಂದ, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಮೈಸೂರು ಯಾದವ ಸಂಘದ ಅಧ್ಯಕ್ಷ ಜವರೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ರತ್ಯೇಕ ಲಿಂಗಾಯತ ಧರ್ಮದ ವಿಚಾರದಲ್ಲಿ

ಸಿದ್ದರಾಮಯ್ಯಗೆ ಪಶ್ಚಾತ್ತಾಪ

ರಂಭಾಪುರಿ ಶ್ರೀಗಳಿಂದ ಮಾಧ್ಯಮಗಳಿಗೆ ಮಾಹಿತಿ



ಚಿಕ್ಕಮಗಳೂರು: ಪ್ರತ್ಯೇಕ ಲಿಂಗಾಯತ ಧರ್ಮದ ವಿಚಾರದಲ್ಲಿ ಸಿದ್ದರಾಮಯ್ಯನವರಿಗೆ ಪಶ್ಚಾತ್ತಾಪವಾಗಿದೆ. ಲಿಂಗಾಯತ ಧರ್ಮದ ವಿಚಾರದಲ್ಲಿ ನನ್ನನ್ನು ಕೆಲವರು ದಾರಿ ತಪ್ಪಿಸಿದ್ದರು. ಈಗ ನನಗೆ ಪಶ್ಚಾತ್ತಾಪವಾಗಿದೆ ಎಂದು ಸಿದ್ದರಾಮಯ್ಯ ಒಪ್ಪಿಕೊಂಡಿದ್ದಾರೆ ಎಂದು ಬಾಳೆಹೊನ್ನೂರು ಮಠದ ರಂಭಾಪುರಿ ಶ್ರೀಗಳು ಹೇಳಿದ್ದಾರೆ.

ಬಾಳೆಹೊನ್ನೂರು ಮಠಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೊಟ್ಟಮೊದಲ ಬಾರಿಗೆ ಇಂದು ಭೇಟಿ ನೀಡಿದ್ದರು. ಸಿದ್ದರಾಮಯ್ಯನವರು ಬಂದು ಹೋದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶ್ರೀಗಳು, ಪೀಠಕ್ಕೆ ಬಂದು ಆಶೀರ್ವಾದ ಪಡೆಯುವುದು ಅವರ ಬಯಕೆಯಾಗಿತ್ತು. ವೀರಶೈವ ಲಿಂಗಾಯತ ಧರ್ಮ ಒಡೆಯಲು ನಾನಾಗಿ ಪ್ರಯತ್ನಿಸಿರಲಿಲ್ಲ. ಆದರೆ, ಕೆಲವರು ನನ್ನನ್ನು ದಾರಿ ತಪ್ಪಿಸಿದರು. ಆ ವಿಚಾರದಲ್ಲಿ ಖಂಡಿತವಾಗಿಯೂ ಪಶ್ಚಾತ್ತಾಪವಾಗಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ ಎಂದರು.

ಕೊಡಗಿನಲ್ಲಿ ತಮಗೆ ಎದುರಾದ ವಿರೋಧದಿಂದ ಆಕ್ರೋಶಿತರಾಗಿರುವ ಸಿದ್ದರಾಮಯ್ಯನವರು, ಇಂದು ಚಿಕ್ಕಮಗಳೂರು ಜಿಲ್ಲೆ ಪ್ರವಾಸ ಕೈಗೊಂಡಿದ್ದರು. ಇದೇ ಮೊಟ್ಟ ಮೊದಲು ತಮ್ಮ ಆಶ್ರಮಕ್ಕೆ ಆಗಮಿಸಿದ ರಂಭಾಪುರಿ ಶ್ರೀಗಳು ಸಿದ್ದರಾಮಯ್ಯ ಅವರಿಗೆ ರುದ್ರಾಕ್ಷಿ ಮಾಲೆ ಹಾಕಿ ಆಶೀರ್ವದಿಸಿದರು. ಅಲ್ಲದೇ, ಮುಂದಿನ ಚುನಾವಣೆತನಕ ಈ ಮಾಲೆಯನ್ನು ಧರಿಸಿರಿ. ಮುಂದೆ ನಿಮಗೆ ಎಲ್ಲವೂ ಒಳ್ಳೆಯದಾಗುತ್ತದೆ ಎಂದು ರಂಭಾಪುರಿ ಶ್ರೀಗಳು ತಿಳಿಸಿದ್ದಾರೆ. ಇದಕ್ಕೂ ಮುನ್ನ ವಿಪಕ್ಷ ನಾಯಕ ಸಿದ್ದರಾಮಯ್ಯನವರು ಶೃಂಗೇರಿಗೆ ತೆರಳಿ ಶಾರದಾಂಬೆಯ ದರ್ಶನ ಪಡೆದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಪ್ರಕರಣ

● ರಾಜ್ಯ ರಾಜಕಾರಣದಲ್ಲಿ ಭಾರೀ ಚರ್ಚೆಗೆ ಗ್ರಾಸ ● ಕೊಡಗು ಎಸ್‌ಪಿ ಅಮಾನತಿಗೆ ಆಗ್ರಹ ● ಸಚಿವದ್ವಯರಿಂದ ಸಿದ್ದುಗೆ ಗುದ್ದು

ಬೆಂಗಳೂರು, ಆ. 19(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಕಾರಿನ ಮೇಲೆ ಬಿಜೆಪಿ ಕಾರ್ಯಕರ್ತರು ಮೊಟ್ಟೆ ಎಸೆದ ಘಟನೆ ರಾಜ್ಯ ರಾಜಕಾರಣದಲ್ಲಿ ಭಾರೀ ಚರ್ಚೆಗೆ ಎಡೆಮಾಡಿದೆ.

ಈ ವಿಚಾರವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಆರೋಪ ಪ್ರತ್ಯಾರೋಪ ಮಾಡುತ್ತಿದ್ದರೆ, ಮತ್ತೊಂದೆಡೆ ಪ್ರತಿಪಕ್ಷದ ನಾಯಕರಿಗೆ ರಕ್ಷಣೆ ನೀಡಲು ವಿಫಲರಾಗಿರುವ ಕೊಡಗು ಜಿಲ್ಲಾ ಎಸ್‌ಪಿ ಅವರನ್ನು ತಕ್ಷಣವೇ ಅಮಾನತು ಮಾಡಬೇಕು ಎಂದು ಒತ್ತಾಯಿಸಿದೆ. ಅಷ್ಟೇ ಅಲ್ಲ ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಕೆಪಿಸಿಸಿ, ಸಿದ್ದರಾಮಯ್ಯ ಅವರ ರಕ್ಷಣೆ ಸರ್ಕಾರದ ಮುಖ್ಯ ಜವಾಬ್ದಾರಿ, ಅತೀವೃಷ್ಟಿ ಹಾನಿ ವೀಕ್ಷಣೆಗೆ ತೆರಳಿದ್ದ ಪ್ರತಿಪಕ್ಷದ ನಾಯಕರಿಗೆ ರಕ್ಷಣೆ ಇಲ್ಲ ಎಂದಾದರೆ ಜನಸಾಮಾನ್ಯರ ರಕ್ಷಣೆ ಈ ಸರ್ಕಾರದಿಂದ ಸಾಧ್ಯವೇ ಎಂದು ಪ್ರಶ್ನಿಸಿದೆ. ಗೃಹ ಸಚಿವರು ಈ ಹುದ್ದೆಯಲ್ಲಿ ಇರಲು ಅರ್ಹರೇ, ಮುಖ್ಯಮಂತ್ರಿಗಳು ಜನಕ್ಕೆ ಉತ್ತರಿಸಬೇಕು. ಕೊಡಗಿನಲ್ಲಿ ಅಷ್ಟೇ ಅಲ್ಲ, ಚಿಕ್ಕಮಗಳೂರಿನಲ್ಲಿಂದು ಸಿದ್ದರಾಮಯ್ಯನವರಿಗೆ ಕಪ್ಪು ಬಾವುಟ ಪ್ರದರ್ಶನ ಮುಂದುವರೆದಿದೆ.

ಕೊಡಗಿನಲ್ಲಾದ ಘಟನೆಯನ್ನು ಚಿಕ್ಕಮಗಳೂರಿನಲ್ಲೂ ಮುಂದುವರೆ ಸಲು ಬಿಟ್ಟಿದ್ದೇಕೆ ಎಂದು ಗೃಹ ಸಚಿವರನ್ನು ಪ್ರಶ್ನೆ ಮಾಡಿದೆ. ಸಿದ್ದರಾಮಯ್ಯ ತೆರಳುವ ದಾರಿಯಲ್ಲಿ ಬಿಜೆಪಿಯ ಗೂಂಡಾಗಳು ಜಮಾಯಿಸಿದ್ದರೂ, ಇದರ ಬಗ್ಗೆ ಮುನ್ಸೂಚನೆ ಇದ್ದರೂ, ಪೊಲೀಸರು ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನೆ ಮಾಡಿದೆ.

ಈ ಗೂಂಡಾ ಪಡೆಯನ್ನು ಪೋಷಿಸುತ್ತಿರುವ ಬೊಮ್ಮಾಯಿ ಅವರೇ, ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆದರು, ಇದೇ ಪಡೆ ನಳೀನ್‌ಕುಮಾರ್ ಕಟೀಲ್ ಅವರ ಕಾರನ್ನು ಉರುಳಿಸಲು ಹೊರಟಿದ್ದರು. ಮುಂದಿನ ಸರದಿ ನಿಮ್ಮದೇ ಇರಬಹುದೆಂದು ಮುಖ್ಯಮಂತ್ರಿಯವರಿಗೆ ಕಾಂಗ್ರೆಸ್ ಎಚ್ಚರಿಸಿದೆ.

ಸಿದ್ದುಗೆ ಗುದ್ದು: ಈ ಮಧ್ಯೆ ಸಚಿವರಾದ ಮುನಿರತ್ನ ಹಾಗೂ ಅಶ್ವತ್ಥ್‌ನಾರಾಯಣ್, ಪ್ರತ್ಯೇಕ ಹೇಳಿಕೆ ನೀಡಿ, ಚುನಾವಣೆ ಹತ್ತಿರ ಬರುತ್ತಿರುವುದರಿಂದ ಸಿದ್ದರಾಮಯ್ಯನವರ ಕಡೆಯವರೇ ಕೋಳಿ ಮೊಟ್ಟೆ ಎಸೆದಿರಬಹುದು. ಯಾರಿಗೆ ಗೊತ್ತು ಎಂದು ಪ್ರಶ್ನೆ ಮಾಡಿದ್ದಾರೆ. ಸರ್ಕಾರದ ವಿರುದ್ಧ ಮಾತನಾಡಲು ಯಾವುದೇ ವಿಷಯ ಸಿಕ್ಕಿದರೂ ಪ್ರತಿಭಟನೆ ನಡೆಸುತ್ತಾರೆ, ಈಗ ಮೊಟ್ಟೆ ಸಿಕ್ಕಿದೆ ಎಂದು ವ್ಯಂಗ್ಯವಾಡಿದ್ದಾರೆ. ಮುಂದುವರೆದು ಸಿದ್ದರಾಮಯ್ಯ ಅವರು ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರ ನಡುವೆ ತಂದಿಟ್ಟು ತಮಾಷೆ ನೋಡುತ್ತಿದ್ದಾರೆ. ಪ್ರಚೋದನಾಕಾರಿ ಹೇಳಿಕೆ ನೀಡುವಲ್ಲಿ ನಿಸ್ಸೀಮರಾದ ಸಿದ್ದರಾಮಯ್ಯನವರು, ಮುಸ್ಲಿಂ ಏರಿಯಾದಲ್ಲಿ ವೀರ ಸಾರ್ವರ್ಕರ್ ಫೋಟೋ ಯಾಕೆ ಎಂದು ಕೇಳಿ ದೇಶಭಕ್ತರನ್ನು ಕೆರಳಿಸಿದ್ದಾರೆ.

ಈಗ ತಮಗೂ ಎಸೆಯಲು ಬರಲ್ವಾ ಎಂದು ಕೇಳುವ ಮೂಲಕ ಉಭಯ ಪಕ್ಷಗಳ ಕಾರ್ಯಕರ್ತರ ನಡುವೆ ತಂದಿಟ್ಟು ತಮಾಷೆ ನೋಡುತ್ತಿದ್ದಾರೆ ಎಂದು ದೂರಿದ್ದಾರೆ.

ವಿಪಕ್ಷ ನಾಯಕನಿಗೆ ಸೂಕ್ತ ಭದ್ರತೆ ಕೊಡುವುದು ಸರ್ಕಾರದ ಕರ್ತವ್ಯ

ಸಿದ್ದರಾಮಯ್ಯ ಗುಡುಗು

ಚಿಕ್ಕಮಗಳೂರು: ರಾಜ್ಯದಲ್ಲಿ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಹತಾಶೆಯಾಗಿ ಹೋಗಿದೆ, ರಾಜ್ಯದಲ್ಲಿ ಅಧಿಕಾರ ಕಳೆದುಕೊಳ್ಳುವ ಭೀತಿ ಬಂದುಬಿಟ್ಟಿದೆ. ಹೀಗಾಗಿ ರಾಜ್ಯದ ಜನತೆಯ ಭಾವನೆಯನ್ನು ಬೇರೆಡೆಗೆ ಸೆಳೆಯಲು ಮೊಟ್ಟೆ ಎಸೆತದಂತಹ ನೀಚ ಕೃತ್ಯ ಮಾಡುತ್ತಾರೆ. ಸಚಿವ ಮಾಧುಸ್ವಾಮಿ ಹೇಳಿಕೆ ಇದಕ್ಕೆ ಕನ್ನಡಿ, ನನ್ನ ವಿರುದ್ಧದ ಪ್ರತಿಭಟನೆ ಸರ್ಕಾರದ ಪ್ರಾಯೋಜಿತ ಎಂದು ಸಿದ್ದರಾಮಯ್ಯ ಕಿಡಿಕಾರಿದರು.



ನಾನು ವಿರೋಧ ಪಕ್ಷದ ನಾಯಕ, ಶ್ಯಾಡೋ ಚೀಫ್ ಮಿನಿಸ್ಟರ್, ನನಗೆ ಭದ್ರತೆ ಕೊಡುವುದು ಸರ್ಕಾರದ ಕರ್ತವ್ಯ. ಪೊಲೀಸರು ಸರಿಯಾದ ಭದ್ರತೆ ಕೊಡಬೇಕು. ನಿನ್ನೆಯ ಘಟನೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದರು.

ಗೋ ಬ್ಯಾಕ್ ಅಂದರೆ ನಾನು ಎಲ್ಲಿಗೆ ಹೋಗಲಿ, ಸರ್ಕಾರ ಸತ್ತು ಹೋಗಿದೆ, ಮಾಧುಸ್ವಾಮಿ ಹೇಳಿಕೆ ಇದಕ್ಕೆ ಕನ್ನಡಿ, ನನ್ನ ವಿರುದ್ಧದ ಪ್ರತಿಭಟನೆ ಸರ್ಕಾರದ ಪ್ರಾಯೋಜಿತ, ಅಧಿಕಾರ ಕಳೆದುಕೊಳ್ಳುವ ಭೀತಿಯಲ್ಲಿ ಬಿಜೆಪಿ ಇದೆ. ಮಡಿಕೇರಿ ನಂತ್ರ 4 ಕಡೆ ಪ್ರತಿಭಟನೆಗೆ ಸಿದ್ಧತೆ ನಡೆದಿತ್ತು. ಗೋ ಬ್ಯಾಕ್ ಅನ್ನಲು ಇಡೀ ರಾಜ್ಯ ಇವರದ್ದೇ, ನಮಗೂ ಹತ್ತು ಜನರನ್ನು ಸೇರಿಸಿ ಗೋ ಬ್ಯಾಕ್ ಸಿಎಂ ಬೊಮ್ಮಾಯಿ ಎನ್ನಬಹುದಲ್ಲವೇ ಎಂದು ಕೇಳಿದರು.

ಈ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ, ಲೂಟಿ ಹೊಡೆಯಲು ಬಂದಿದ್ದಾರೆ. ಇತಿಹಾಸದಲ್ಲೇ 40% ಸರ್ಕಾರ ಬಂದಿರಲಿಲ್ಲ. ಈ ಸರ್ಕಾರ ಕಮ್ಯುನಲ್ ಸರ್ಕಾರ ಎಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಲೆಯಾದಾಗ ಕೇವಲ ಪ್ರವೀಣ್ ಮನೆಗೆ ಹೋಗಿ ಮುಖ್ಯಮಂತ್ರಿ ಬಂದರು. ಫಾಝಿಲ್, ಮಸೂದ್ ಮನೆಗೆ ಹೋಗಲಿಲ್ಲ. ಪರಿಹಾರವನ್ನು ಕೇವಲ ಪ್ರವೀಣ್ ಕುಟುಂಬಸ್ಥರಿಗೆ ಮಾತ್ರ ಕೊಟ್ಟರು. ಇವರ ಸ್ವಂತ ಜೇಬಿನಿಂದ ಏನು ಕೊಟ್ರಾ ಪರಿಹಾರ ಕೊಟ್ಟದ್ದು ಜನ ಸಾಮಾನ್ಯರ ತೆರಿಗೆ ಹಣದಿಂದ. ಪ್ರಜಾಪ್ರಭುತ್ವ, ಜನರ ಸರ್ಕಾರ ಸತ್ತು ಹೋಗಿದೆ ಎಂದು ವಾಗ್ದಾಳಿ ನಡೆಸಿದರು.

26ಕ್ಕೆ ಬರುತ್ತೇನೆ ಎಸ್ಪಿ ಕಚೇರಿಗೆ ಮುತ್ತಿಗೆ ಹಾಕುತ್ತೇವೆ: ಇನ್ನು ನಿನ್ನೆ ಮಡಿಕೇರಿಯಲ್ಲಿ ಮೊಟ್ಟೆ ಎಸೆತ ಘಟನೆ ಬಳಿಕ ಗುಡುಗಿದ್ದ ಸಿದ್ದರಾಮಯ್ಯ, ಆಗಸ್ಟ್ 26ರಂದು ಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಬೇಕು, ಅಂದು ನಾನು ಜಿಲ್ಲೆಗೆ ಬರುತ್ತೇನೆ, ನನ್ನ ನೇತೃತ್ವದಲ್ಲೇ ಬೃಹತ್ ಪ್ರತಿಭಟನೆ ನಡೆಯಲಿದೆ. ಈ ಘಟನೆ ರಾಜ್ಯ ಸರ್ಕಾರವೇ ಮಾಡಿಸಿದೆ ಎಂದು ನೇರ ಆರೋಪ ಮಾಡಿದ್ದರು.

ಮುಂದಿನ ಆರೇಳು ತಿಂಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ. ಈ ಬಾರಿ ಕೊಡಗಿನಲ್ಲಿ ಕಾಂಗ್ರೆಸ್ 2 ಸ್ಥಾನ ಗೆಲ್ಲುವ ಸಾಧ್ಯತೆ ಇದೆ. ಹೀಗಾಗಿ ಹತಾಶೆಯಿಂದ ನನ್ನ ವಿರುದ್ಧ ಪ್ರತಿಭಟನೆ ಮಾಡಿಸಲಾಗಿದೆ. ಗೋಬ್ಯಾಕ್ ಅಂದರೆ ಎಲ್ಲಿಗೆ ಹೋಗಲಿ ನಮ್ಮ ಕಾರ್ಯಕರ್ತರೂ ಗೋ ಬ್ಯಾಕ್ ಎಂದು ಹೇಳುತ್ತಾರೆ, ಆದರೆ ಭದ್ರತೆ ನೀಡುವುದು ಪೊಲೀಸ್ ಅಧಿಕಾರಿಗಳ ಜವಾಬ್ದಾರಿ. ಮೂರ್ನಾಲ್ಕು ಕಡೆಗಳಲ್ಲಿ ಪ್ರತಿಭಟನೆ ಮಾಡುವುದು ಗೊತ್ತಿದ್ದರೂ ಪೊಲೀಸರು ಸುಮ್ಮನಿದ್ದಾರೆ. ಮುಖ್ಯಮಂತ್ರಿಯವರು ಬರುತ್ತಿದ್ದರೆ ಈ ರೀತಿ ಪೊಲೀಸರು ಮಾಡುತ್ತಿದ್ದರಾ ಎಂದು ಎಸ್‌ಪಿ ಅವರನ್ನು ಪ್ರಶ್ನಿಸಿದರು.

ಶಾಸಕ ಕೆ.ಜಿ.ಬೋಪಯ್ಯ ಹೇಳಿಕೆ: ವಿಪಕ್ಷ ನಾಯಕರಾಗಿ ಮಳೆಹಾನಿ ಪ್ರದೇಶಕ್ಕೆ ಭೇಟಿ ಕೊಟ್ಟದ್ದು ತಕರಾರಿಲ್ಲ, ಬರಲಿ ಸಮಸ್ಯೆಯಿಲ್ಲ. ಆದರೆ ವೀರ ಸಾವರ್ಕರ್ ಪ್ರತಿಕ್ರಿಯೆ ನೀಡಿದ್ದು ತಪ್ಪು, ಹಿಂದೂ, ಬಿಜೆಪಿ ಕಾರ್ಯಕರ್ತರ ಆಕ್ರೋಶಕ್ಕೆ ಅದುವೇ ಕಾರಣವಾಗಿದೆ ಎಂದು ಮಡಿಕೇರಿಯಲ್ಲಿ ಶಾಸಕ ಕೆ.ಜಿ.ಬೋಪಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೊಡಗಿನ ಜನರಲ್ಲಿ ಟಿಪ್ಪು ಜಯಂತಿ ಆಚರಣೆ ಸಂದರ್ಭದಲ್ಲಿ ಎರಡು ಅಮಾಯಕ ಜೀವಗಳು ಹೋಗಿದೆ. ಆ ಆಕ್ರೋಶ ಇಲ್ಲಿನ ಜನರಲ್ಲಿದೆ. ಟಿಪ್ಪು ಆಡಳಿತದಲ್ಲಿ ಮತಾಂಧತೆ, ಹಿಂದೂ ಜನರ ಮಾರಣಹೋಮ ಬಗ್ಗೆ ಚರಿತ್ರೆಯಲ್ಲಿದ್ದು, ಅದುವೇ ಕೊಡಗಿನ ಹಿಂದೂ ಜನರ, ಹಿಂದೂಪರ ಸಂಘಟನೆಗಳಲ್ಲಿ ಅಸಮಾಧಾನ, ಆಕ್ರೋಶ ಸಹಜವಾಗಿ ಬಂದಿದೆ. ಅದಕ್ಕೆ ಮೂಲ ಕಾರಣ ಸಿದ್ದರಾಮಯ್ಯನಂತವರ ಬೇಜವಾಬ್ದಾರಿ ಹೇಳಿಕೆ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಗೆ ಅವಕಾಶವಿದೆ, ನಿನ್ನೆ ತಿತಿಮತಿಯಲ್ಲಿ ಅದನ್ನು ಕಾರ್ಯಕರ್ತರು ತೋರಿಸಿದ್ದಾರೆ ಎಂದು ಸಮರ್ಥಿಸಿಕೊಂಡರು.

ಗಾಂಧಿಯನ್ನೇ ಕೊಂದವರು ಇನ್ನು ನನ್ನನ್ನು ಬಿಡುತ್ತಾರೆಯೇ...

ಚಿಕ್ಕಮಗಳೂರು: ದೇಶದ ಪಿತಾಮಹ ಮಹಾತ್ಮಾ ಗಾಂಧೀಜಿಯನ್ನೇ ಕೊಂದವರು ನನ್ನನ್ನು ಬಿಡುತ್ತಾರಾ ಎಂದು ಮಾಜಿ ಮುಖ್ಯಮಂತ್ರಿ ವಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಇಂದು ಚಿಕ್ಕಮಗಳೂರು ತಾಲೂಕಿನ ಬಾಸಾಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ನಾನು ಸತ್ಯ ಹೇಳುವುದನ್ನು ಕೆಲವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಸಾವರ್ಕರ್ ಬ್ರಿಟಿಷರಿಗೆ ಕ್ಷಮಾಪಣೆ ಪತ್ರ ಬರೆದುಕೊಟ್ಟು ಜೈಲಿನಿಂದ ಹೊರ ಬಂದವರು. ವಿ.ಡಿ. ಸಾವರ್ಕರ್ ಆಗಿದ್ದ ಅವರ ಫೋಟೋ ಹಿಡಿದುಕೊಂಡು ಇಂದು ವೀರ ಸಾವರ್ಕರ್ ಎಂದು ಪೂಜಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ. ನಿನ್ನೆ ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಮೊಟ್ಟೆ ಎಸೆದ ಘಟನೆಯನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ. ರಾಜ್ಯ ಪೊಲೀಸ್ ಇಲಾಖೆ ಸಂಘಪರಿವಾರದ ಕೈಗೊಂಬೆಯಾಗಿದೆ. ಪಕ್ಷದ ಪುಂಡರ ಗೂಂಡಾಗಿರಿಗೆ ಅವಕಾಶ ನೀಡಿ, ಕೈಕಟ್ಟಿಕೊಂಡು ತಮಾಷೆ ನೋಡುವ ಪೊಲೀಸರ ಕರ್ತವ್ಯ ಲೋಪ ಖಂಡಿಸಿ ಈ ತಿಂಗಳ 26 ರಂದು ಕೊಡಗಿನ ಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕುತ್ತೇವೆ. ಬಿಜೆಪಿಯ ಗೂಂಡಾಗಿರಿಗೆ ಹೋರಾಟದ ಮೂಲಕವೇ ತಕ್ಕ ಉತ್ತರ ಕೊಡುತ್ತೇವೆ ಎಂದು ಗುಡುಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.08.2022 ಶನಿವಾರ, ಮಳೆ ನಕ್ಷತ್ರ : ಮಖೆ 17.08.2022 ರಿಂದ 30.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ : ರೋಹಿಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಎಸ್‌ಎಲ್‌ಡಿ ಎಕ್ಸಲೆಂಟ್ ಪಬ್ಲಿಕ್ ಸ್ಕೂಲ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ :** ಇಲವಾಲ ಹೋಬಳಿ ಮಟ್ಟದ ಕ್ರೀಡಾಕೂಟ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ಹೆಚ್.ಪಿ. ಮಂಜುನಾಥ್, ಅನಿಲ್ ಚಿಕ್ಕಮಾದು, ಯತೀಂದ್ರ ಸಿದ್ದರಾಮಯ್ಯ, ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಮಾಜಿ ಸಂಸದ ಆರ್. ಧ್ರುವನಾರಾಯಣ್, ಸ್ಥಳ: ಎಸ್‌ಎಲ್‌ಡಿ ಎಕ್ಸಲೆಂಟ್ ಪಬ್ಲಿಕ್ ಸ್ಕೂಲ್ ಆವರಣ, ಬೆಳಗ್ಗೆ 9.30ಕ್ಕೆ.

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಯುವ ನಿಸರ್ಗ ಚಿತ್ರ ಕಲಾವಿದರಿಂದ ವರ್ಷಧಾರೆ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರಾವಣ ಶನಿವಾರದ ಪೂಜೆಗಳು, ಶ್ರೀ ದತ್ತ ವೆಂಕಟೇಶ್ವರಸ್ವಾಮಿ ಕಲ್ಯಾಣ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮೈಸೂರು ಫೋಟೋಗ್ರಫಿ ಅಸೋಸಿಯೇಷನ್ :** ವಿಶ್ವ ಛಾಯಾಗ್ರಾಹಣ ದಿನಾಚರಣೆ ಪ್ರಯುಕ್ತ ಛಾಯಾಚಿತ್ರ ಪ್ರದರ್ಶನ, ಸ್ಥಳ:ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ:** ಡಿ. ದೇವರಾಜ ಅರಸು ಹಾಗೂ ರಾಜೀವ್ ಗಾಂಧಿ ಜಯಂತಿ ಆಚರಣೆ, ಉದ್ಘಾಟನೆ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಪುಷ್ಪಾರ್ಚನೆ: ಮಾಜಿ ಸಭಾಪತಿ ರಮೇಶ್‌ಕುಮಾರ್, ಅಧ್ಯಕ್ಷತೆ: ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಉಪಸ್ಥಿತರು: ಸಮಿತಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ರೈಲ್ವೆ ನಿಲ್ದಾಣದ ಸಮೀಪ, ಬೆಳಗ್ಗೆ 10.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು :** ಡಾ.ಎಸ್.ಎಲ್. ಭೈರಪ್ಪನವರ 92ನೇ ವರ್ಷದ ಜನ್ಮದಿನದ ಸಂಭ್ರಮ ಮತ್ತು ಅಭಿವಂದನೆ, ಅಭಿವಂದಿಸುವವರು: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆ.ನರಹರಿಬಾಬು, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದನಾ ನುಡಿ: ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ. ಎಂ.ಎಸ್. ವಿಜಯಾ ಹರನ್, ಮುಖ್ಯ ಅತಿಥಿಗಳು : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಸ್ಥಳ: ವಿವೇಕಾನಂದ ಸಭಾಂಗಣ, ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಬೆಳಗ್ಗೆ 11.15ಕ್ಕೆ.

■ **ಶ್ರೀನಿವಾಸಮೂರ್ತಿ ಅಭಿನಂದನಾ ಸಮಿತಿ :** ಸಾವಯವ ಕೃಷಿಕ ಮತ್ತು ಸಮಾಜ ಸೇವಕ ಎಸ್.ಆರ್. ಶ್ರೀನಿವಾಸಮೂರ್ತಿ ಅವರಿಗೆ ಅಭಿನಂದನಾ ಕಾರ್ಯಕ್ರಮ, ಉದ್ಘಾಟನೆ : ಸಾವಯವ ಕೃಷಿಕ ಶಿವಳ್ಳಿ ಬೋರೇಗೌಡ, ಅಧ್ಯಕ್ಷತೆ : ಸಾವಯವ ಕೃಷಿಕ ಕೃಷ್ಣಪ್ರಸಾದ್, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಪ್ರೊ. ಹೆಚ್. ಗೋವಿಂದಯ್ಯ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಎನ್.ಸಿ. ವೆಂಕಟರಾಜು, ವಿಜ್ಞಾನಿ ಹೆಚ್.ವಿ. ದಿವ್ಯ, ಉಪಸ್ಥಿತರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಾವಯವ ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ, ಅಭಿನಂದನಾ ಸಮಿತಿ ಅಧ್ಯಕ್ಷ ಕೆ.ಎನ್. ಶ್ರೀನಿವಾಸ, ಸ್ಥಳ: ಐಡಿಯಲ್ ಜಾವ ರೋಟರಿ ಸ್ಕೂಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಪಾಲಿ ಇನ್‌ಸ್ಟಿಟ್ಯೂಟ್, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ :** ಪಾಲಿ ಭಾಷಾ ಕಾರ್ಯಾಗಾರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜ ರಾವ್, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ಶಿವಪ್ಪ, ಉಪಸ್ಥಿತರು : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ. ವಿಜಯಕುಮಾರಿ ಎಸ್. ಕರಿಕಲ್, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮಧ್ಯಾಹ್ನ 3.30 ರಿಂದ.

■ **ಮೈಸೂರು ನಗರ ಮತ್ತು ಜಿಲ್ಲಾ ಯಾದವ ಯುವಕ ಸಂಘ, ಶ್ರೀ ಪ್ರಸನ್ನ ನಂಜುಂಡೇಶ್ವರ ಮತ್ತು ಶ್ರೀ ಕೃಷ್ಣ ದೇವಾಲಯ ಆಡಳಿತ ಸಮಿತಿ :** ಶ್ರೀ ಕೃಷ್ಣ ಜಯಂತಿ, ಸಂಜೆ 7ಕ್ಕೆ ಶ್ರೀ ಮಹಾಗಣಪತಿಗೆ ಬೆಣ್ಣೆ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ರಾತ್ರಿ 10ಕ್ಕೆ ಶ್ರೀ ಕೃಷ್ಣದೇವರ ಪ್ರತಿಷ್ಠಾಪನೆ, ಪಂಚಾಮೃತ ಅಭಿಷೇಕ, ಶ್ರೀಕೃಷ್ಣ ಸಹಸ್ರನಾಮಾವಳಿ, ಡೋಲೋತ್ಸವ, ನಾದಸ್ವರ ಕಾರ್ಯಕ್ರಮ, ಮಹಾಮಂಗಳಾರತಿ, ಪ್ರಸಾದ ವಿತರಣೆ, ಸ್ಥಳ: ಶ್ರೀ ನಂಜುಂಡೇಶ್ವರ ದೇವಸ್ಥಾನ, ಗೊಲ್ಲಗೇರಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು–ರಚನೆ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಲೇಖನ– ಡಾ.ಡಿ. ಸತೀಶ್ಚಂದ್ರ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳುವಳಿಯ ಪಯಣ ಆಕಾಶವಾಣಿಯೊಂದಿಗೆ, 10.00 ಎಂಆರ್. ಸುಧಾ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ –ಬಸವರಾಜಯ್ಯ ಮತ್ತು ತಂಡ, 1.00 ಸುಕನ್ಯಾ ಸಮೃದ್ಧಿ ಯೋಜನೆ ಕುರಿತು ಮಾತನಾಡುತ್ತಾರೆ ಶೀಲಾ ಖಾನೆ, 1.20 ಭಾವಗೀತೆ, 3.35ಮಕ್ಕಳ ಮಂಟಪ– ಅಕ್ಷಯ ಸಂಸ್ಕೃತಿ ಕೇಂದ್ರದ ಮಕ್ಕಳಿಂದ ಕಾರ್ಯಕ್ರಮ, 4.00 ನಾಟಕ “ಸಾಲವನು ಕೊಂಬಾಗ”, ರಚನೆ– ಬೇಲೂರು ರಾಮಮೂರ್ತಿ, ನಿರ್ಮಾಣ–ಉಮೇಶ್ ಎಸ್.ಎಸ್., 4.30 ನೆನಪಿನಂಗಳ–ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಐ.ಎನ್.ಎ.ರಾಮರಾವ್ ಅವರೊಂದಿಗೆ ಹೆಚ್.ಎಸ್. ವೇಣುಗೋಪಾಲ್ ನಡೆಸಿದ್ದ ಸಂವಾದ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್ ಕಥಾ ನಾಟಕ “ಸಂಬಂಧ ಬೆಸೆದ ಕೊರೋನಾ”, ಮೂಲಕಥೆ– ಜಿ. ಚಂದ್ರಕಲಾ ಕುಮಾರ್, ಬಾನುಲಿ ರೂಪ – ಉಷಾ ನರಸಿಂಹನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 9.15 ಪುಸ್ತಕ ಪ್ರಕಾಶನದ ಹೊಸ ಸಾಧ್ಯತೆಗಳು–ಡಿ.ಎನ್. ಲೋಕಪ್ಪ ಅವರೊಂದಿಗೆ ಸಂದರ್ಶನ ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಸುಮನಾ ಗುಪ್ತ– ದ್ರುಪದ್ / ದಮಾರ್, ಮುಂಜಲ್ ಶೈಲೇಶ್ ಬಾಯ್ ಮೆಹ್ತಾ – ತಬಲ, 11.00 ಸವಿನೆನಪು

■ **ಭಾವಸಾರ ಕ್ಷತ್ರಿಯ ಮಂಡಳಿ :** ಶ್ರೀ ಕೃಷ್ಣ ಜನ್ಮಾಷ್ಟಮಿ, ಬೆಳಗ್ಗೆ 10 ಗಂಟೆಗೆ ದೇವರ ಉತ್ಸವ, ದಿಂಡಿ ಭಜನೆ, ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಶ್ರೀ ಪಾಂಡುರಂಗ ವಿಠ್ಠಲಸ್ವಾಮಿ ದೇವಸ್ಥಾನ, ಕೊತ್ವಾಲ್ ರಾಮಯ್ಯ ರಸ್ತೆ.

■ **ಮೈಸೂರು ಕನ್ನಡ ವೇದಿಕೆ :** ಗಜಪಡೆಗಳಿಗೆ ಕಬ್ಬು ವಿತರಣೆ ಕಾರ್ಯಕ್ರಮ, ಉದ್ಘಾಟನೆ : ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ವಿ. ಕರಿಕಾಳನ್, ಸನ್ಮಾನಿಸುವವರು : ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಸ್ಥಳ: ಅರಮನೆ ಆವರಣ, ಬೆಳಗ್ಗೆ 11ಕ್ಕೆ.

■ **ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ:** ಡಿ. ದೇವರಾಜ ಅರಸು ಜನ್ಮ ದಿನೋತ್ಸವ ಹಾಗೂ ಅರಸು ಆದರ್ಶ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಅರಸು ಕುರಿತು: ಮಾಜಿ ಸಭಾಪತಿ ಕೆ.ಆರ್.ರಮೇಶ್ ಕುಮಾರ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಅರಸು ಆದರ್ಶ ಭೂಷಣ ಪ್ರಶಸ್ತಿ ಪುರಸ್ಕೃತರು: ಶಾಸಕರಾದ ಹೆಚ್. ವಿಶ್ವನಾಥ್, ತನ್ವೀರ್ ಸೇಠ್, ಮೈಲ್ಯಾಕ್ ಅಧ್ಯಕ್ಷ ರಘು ಆರ್. ಕೌಟಿಲ್ಯ, ಅಭಿನಂದನಾ ನುಡಿ : ಸಮಿತಿ ಸಲಹೆಗಾರ ಡಾ. ವೈ.ಡಿ. ರಾಜಣ್ಣ, ಪ್ರಾಸ್ತಾವಿಕ ನುಡಿ: ಸಮಿತಿ ಗೌರವಾಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಬೆಳಗ್ಗೆ 11.30ಕ್ಕೆ.

■ **ಗ್ರಾಮ್ :** ಅಂತಾರಾಷ್ಟ್ರೀಯ ಯುವ ದಿನಾಚರಣೆ, ಮುಖ್ಯ ಅತಿಥಿಗಳು: ಜಿಪಂ ಸಿಇಓ ಪೂರ್ಣಿಮಾ, ಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ. ರೂಪ, ಗೌರವ ಅತಿಥಿಗಳು: ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ. ಜ್ಯೋತಿ, ಗ್ರಾಮ್ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಬಸವರಾಜು ಆರ್. ಶ್ರೇಷ್ಠ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 12 ರಿಂದ.

■ **ಮಹಾರಾಜ ಕಾಲೇಜು :** ಡಾ. ಸಿ. ಶಿವಕುಮಾರ್ ಅವರಿಂದ ಪಂಪನಲ್ಲಿ ಭವ್ಯತೆ ಕುರಿತು ಉಪನ್ಯಾಸ, ಸ್ಥಳ: ಕೊಠಡಿ ಸಂಖ್ಯೆ 2, ಮಹಾರಾಜ ಕಾಲೇಜು, ಮಧ್ಯಾಹ್ನ 2ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ಸುಶಿರ ಶ್ರೀ ದೇಶಿಕಾಚಾರ್ಯ ಸಂಗೀತ ಅಕಾಡೆಮಿ:** 20ನೇ ವಾರ್ಷಿಕ ಸಂಗೀತೋತ್ಸವ, ವೈ.ಜಿ. ಶ್ರೀಲತಾ ಅವರಿಂದ ವೀಣಾವಾದನ, ನಿಕ್ಷಿತ್ ಪುತ್ತೂರ್–ಮೃದಂಗ, ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಗೀತ ಕಲಾನಿಧಿ ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6ಕ್ಕೆ.

■ **ಸಂಸ್ಕೃತಿ:** ನಾದ–ನೃತ್ಯ ಭಾರತೀಯ ಶಾಸ್ತ್ರೀಯ ಕಲೆಗಳ ಉತ್ಸವ, ಉದ್ಘಾಟನೆ : ಕಲಾಪೋಷಕ ಟಿ.ಆರ್. ಹರೀಶ್, ಮುಖ್ಯ ಅತಿಥಿಗಳು: ಪ್ರೊ. ರಾಮಮೂರ್ತಿರಾವ್, ಸಂಜೆ 6.30 ರಿಂದ ಡಾ. ಮಂಜುಳಾ ಮರಾಠೆ ಅವರಿಂದ ಗಮಕ ವಾಚನ, ವ್ಯಾಖ್ಯಾನ: ಅಕ್ಷಯ ಮರಾಠೆ, ಸಂಜೆ 7.30 ರಿಂದ ‘ಇಳೆ–ಮಳೆ’ ಏಕವ್ಯಕ್ತಿ ನಾಟಕ ಪ್ರದರ್ಶನ, ಅಭಿನಯ: ವಿದುಷಿ ಡಾ.ಕೃಪಾ ಫಡ್ಕೆ, ರಚನೆ: ಪ್ರೊ. ಎಂ.ಎಸ್.ವೇಣುಗೋಪಾಲ್, ನಿರ್ದೇಶನ: ನಾ. ಶ್ರೀನಿವಾಸ್, ಸಂಗೀತ: ಪ್ರಭುರಾವ್ ಮತ್ತು ಮೃತ್ಯುಂಜಯ ಹಿರೇಮಠ, ತಬಲ : ರಮೇಶ್ ಧನ್ನೂರ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಕುವೆಂಪುನಗರ.

ಸುತ್ತೂರಿನಲ್ಲಿಂದು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ.ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ.ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಮೈಸೂರು ಮಿತ್ರ ಶನಿವಾರ 20 ಆಗಸ್ಟ್ 2022

ಮೈಸೂರಿಗೆ ಆಗಮಿಸಿದ್ದ ತನಿಖಾಧಿಕಾರಿ ವಸತಿ ಇಲಾಖೆ ಕಾರ್ಯದರ್ಶಿ ಡಾ.ಜೆ.ರವಿಶಂಕರ್‌ಗೆ

ರೋಹಿಣಿ ಸಿಂಧೂರಿ ವಿರುದ್ಧ 1200 ಪುಟಗಳ ಲಿಖಿತ ಸಾಕ್ಷ್ಯ ಸಲ್ಲಿಸಿದ ಶಾಸಕ ಸಾ.ರಾ.ಮಹೇಶ್

ಪ್ರಮುಖ ಆರೋಪಗಳು

- ಬಟ್ಟೆ ಬ್ಯಾಗ್ ಖರೀದಿಯಲ್ಲಿ ಭಾರೀ ಅಕ್ರಮ
- ಡಿಸಿ ಅಧಿಕೃತ ನಿವಾಸದಲ್ಲಿ ದುರ್ವಿನಿಯೋಗ
- ಡಿಸಿ ಅಧಿಕೃತ ನಿವಾಸದಲ್ಲಿ ಪಾರಂಪರಿಕ ನಿಯಮಗಳ ಉಲ್ಲಂಘನೆ
- ಕೋವಿಡ್ ಸಂದರ್ಭ ಮೈಸೂರಲ್ಲಿ ಸಾವಿನ ಸಂಖ್ಯೆ ತಪ್ಪು ನಮೂದು
- ಆಕ್ಸಿಜನ್ ಪೂರೈಕೆಯಲ್ಲಿ ವ್ಯತ್ಯಯದಿಂದಾಗಿ ಚಾ.ನಗರದಲ್ಲಿ ಭಾರೀ ಸಾವು ನೋವು



ಮೈಸೂರು, ಆ.19(ಆರ್‌ಕೆಬಿ)–ರೋಹಿಣಿ ಸಿಂಧೂರಿ ಅವರು ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಎಸಗಿರುವ ಅಕ್ರಮ, ಭ್ರಷ್ಟಾಚಾರ, ಕರ್ತವ್ಯ ಲೋಪಗಳ ಕುರಿತಂತೆ ತನಿಖೆ ನಡೆಸಲು ತನಿಖಾಧಿಕಾರಿಯಾಗಿ ನೇಮಕಗೊಂಡಿರುವ ವಸತಿ ಇಲಾಖೆಯ ಕಾರ್ಯದರ್ಶಿ ಡಾ.ಜೆ. ರವಿಶಂಕರ್ ಅವರಿಗೆ ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್ ಶುಕ್ರವಾರ 1200 ಪುಟಗಳ ದಾಖಲೆಗಳನ್ನು ಸಲ್ಲಿಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಸತಿ ಇಲಾಖೆ ಕಾರ್ಯದರ್ಶಿ ಡಾ.ಜೆ.ರವಿಶಂಕರ್ ಅವರಿಗೆ ತಾವು ರೋಹಿಣಿ ಸಿಂಧೂರಿ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿದ ಮಾಹಿತಿಗಳ ದಾಖಲೆಗಳನ್ನು ಮಹೇಶ್ ನೀಡಿದರು. ರೋಹಿಣಿ ಸಿಂಧೂರಿ ಅವರು ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್ ಮುಕ್ತ ಮಾರುಕಟ್ಟೆಗಿಂತ ಹೆಚ್ಚಿನ ಬೆಲೆಗೆ ಖರೀದಿ, ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸದಲ್ಲಿ ಕಾನೂನು ಬಾಹಿರವಾಗಿ ಈಜುಕೊಳ ನಿರ್ಮಾಣ, ಪಾರಂಪರಿಕ ಕಟ್ಟಡದ ದುರಸ್ಥಿ, ಕೋವಿಡ್ ಸಂದರ್ಭದಲ್ಲಿ ಆಕ್ಸಿಜನ್ ಪೂರೈಕೆ ವಿಚಾರದಲ್ಲಿ ಕೈಗೊಂಡ ತಪ್ಪು ನಿರ್ಧಾರದಿಂದ ಚಾಮರಾಜನಗರದಲ್ಲಿ 28ಕ್ಕೂ ಹೆಚ್ಚು ಮಂದಿ ಸಾವಿಗೀಡಾದ ವಿಚಾರ ಹಾಗೂ ಪಾಸಿಟಿವಿಟಿ ದರ ಕಡಿಮೆ ಮಾಡಿರುವುದಾಗಿ ಸುಳ್ಳು ಮಾಹಿತಿ ನೀಡಿ, ಮೃತಪಟ್ಟವರ ಸಂಖ್ಯೆಯನ್ನು ಮರೆ ಮಾಚಿದ ವಿಚಾರ ಸೇರಿದಂತೆ ಐದು ಪ್ರಮುಖ ಆರೋಪಗಳಿಗೆ ಸಂಬಂಧಿಸಿದ ಮಾಹಿತಿ, ದಾಖಲೆಗಳನ್ನು ತನಿಖಾಧಿಕಾರಿಗೆ ಸಾ.ರಾ.ಮಹೇಶ್ ನೀಡಿದರು.

ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳ ಮುಖಾಂತರ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್‌ಗಳನ್ನು ಖರೀದಿಸುವ ಸಂಬಂಧ ಕಾರ್ಯಾದೇಶ ಹೊರಡಿಸಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್‌ಗಳನ್ನು ಸರಬರಾಜು ಮಾಡುವ ಸಂಬಂಧ 4 ಹೆಚ್ ವಿನಾಯಿತಿ ಅಡಿಯಲ್ಲಿ ದರಪಟ್ಟಿಗಳನ್ನು ಪಡೆದಿದ್ದರು. ಅದರಂತೆ 5 ಕೆಜಿ ಮತ್ತು 10 ಕೆಜಿ ಸಾಮರ್ಥ್ಯದ ಬಟ್ಟೆ ಬ್ಯಾಗ್‌ಗಳಿಗೆ ರೂ.52 (ಜಿಎಸ್‌ಟಿ ಒಳಗೊಂಡಂತೆ) ನಿಗದಿಪಡಿಸಿ, ಒಟ್ಟು 14,71,458 ಬಟ್ಟೆ ಬ್ಯಾಗ್‌ಗಳನ್ನು ಖರೀದಿಸಲು ಅನುಮೋದನೆ ನೀಡಿದ್ದರು. ಈ ಬಟ್ಟೆ ಬ್ಯಾಗ್‌ಗಳ ವಿತರಣೆಗೆ ಮೈಸೂರು ಮಹಾನಗರಪಾಲಿಕೆ, ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಪಂಗಳ, ಪುರಸಭೆಗಳ ಸಾಮಾನ್ಯ ಸಭೆಯಲ್ಲಿ ಯಾವುದೇ ವಿಧವಾದ ಅನುಮೋದನೆ ಪಡೆದಿಲ್ಲ. ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳು ಸ್ವಯಂ ಪರಿಪೂರ್ಣ ಸಂಸ್ಥೆಗಳಾಗಿದ್ದು, ಸಂವಿಧಾನದ ಆಶಯಕ್ಕೆ ಭಂಗವಾಗುವುದರ ಜೊತೆಗೆ ನಿಯಮಾವಳಿ ಉಲ್ಲಂಘನೆಯಾಗಿದೆ. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಅಧಿಕಾರವನ್ನು ಮೊಟಕುಗೊಳಿಸುವ ಉದ್ದೇಶದಿಂದ ಈ ರೀತಿ ಕಾರ್ಯಾದೇಶ ನೀಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ತಮ್ಮ ದೂರಿನಲ್ಲಿ ಸಾ.ರಾ.ಮಹೇಶ್ ತಿಳಿಸಿದ್ದಾರೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದವರು ಸರಬರಾಜು ಮಾಡಿರುವ ಬಟ್ಟೆ ಬ್ಯಾಗ್‌ಗಳಷ್ಟೇ ಗುಣಮಟ್ಟ ಮತ್ತು ಗಾತ್ರ ಹೊಂದಿರುವ ಬ್ಯಾಗ್‌ಗಳು ಮುಕ್ತ ಮಾರುಕಟ್ಟೆಯಲ್ಲಿ ಜಿಎಸ್‌ಟಿ ಸೇರಿದಂತೆ 10ರಿಂದ 13 ರೂ.ಗಳಿಗೆ ಮಾರಾಟವಾಗುತ್ತಿವೆ. ಆದರೆ ಈ ಬಗ್ಗೆ ಬ್ಯಾಗ್‌ಗಳಿಗೆ ಹೋಲ್‌ಸೇಲ್ ದರದಲ್ಲಿ 52 ರೂ. ನಿಗದಿಪಡಿಸಿ, ಅನುಮೋದನೆ ನೀಡಿರುವುದು ಸಾರ್ವಜನಿಕ ಹಣದ ಅಪವ್ಯಯವಾಗಿದೆ. ಅಲ್ಲದೆ ಬಟ್ಟೆ ಬ್ಯಾಗ್‌ಗಳನ್ನು ನಿಗಮದ ವತಿಯಿಂದಲೇ ತಯಾರಿಸಿ ಸರಬರಾಜು ಮಾಡುವ ಬದಲು ಬೇರೊಬ್ಬ ಮಧ್ಯವರ್ತಿಯಿಂದ ಖರೀದಿಸಿ ಸರಬರಾಜು ಮಾಡಲಾಗಿದೆ. ಈ ಪ್ರಕ್ರಿಯೆಯನ್ನು ಕೂಲಂಕುಶ ತನಿಖೆ ನಡೆಸಿ, ಸತ್ಯಸಂಗತಿ ಸರ್ಕಾರಕ್ಕೆ ವರದಿ ಮಾಡುವಂತೆ ಮಹೇಶ್ ಮನವಿ ಮಾಡಿದರು.

ಮೈಸೂರಿಗೆ ವರ್ಗಾವಣೆಯಾಗಿ ಬಂದ ರೋಹಿಣಿ ಸಿಂಧೂರಿ 6 ತಿಂಗಳ ಅವಧಿಯಲ್ಲಿ ಜಿಲ್ಲಾಧಿಕಾರಿಗಳ ಸರ್ಕಾರಿ ಅಧಿಕೃತ ನಿವಾಸದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಒಳಾಂಗಣ ಈಜುಕೊಳ, ಜಿಮ್ ನಿರ್ಮಾಣ ಕಾಮಗಾರಿಯನ್ನು ಸರ್ಕಾರಿ ಹಣದಲ್ಲಿ ನಿರ್ವಹಿಸಿದ್ದಾರೆ. ಜಿಲ್ಲಾಧಿಕಾರಿಗಳ ಸರ್ಕಾರಿ ಅಧಿಕೃತ ನಿವಾಸವು ಪಾರಂಪರಿಕ ಕಟ್ಟಡವಾಗಿದೆ. ಯಾವುದೇ ಹೊಸ ಕಾಮಗಾರಿ ಅಲ್ಲಿ ಕೈಗೊಳ್ಳಲು ಅವಕಾಶವಿಲ್ಲ. ಪಾರಂಪರಿಕ ಕಟ್ಟಡಗಳ ನಿರ್ವಹಣಾ ಸಮಿತಿಯ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಗಳೇ ಸರ್ಕಾರದ ಯಾವುದೇ ಪೂರ್ವಾನುಮತಿ ಇಲ್ಲದೆ ಕಾಮಗಾರಿ ಕೈಗೊಂಡು, ಹಣ ದುರುಪಯೋಗ ಮಾಡಿದ್ದಾರೆ. ಅಲ್ಲದೆ ಜಿಲ್ಲಾಧಿಕಾರಿ ಅಧಿಕೃತ ನಿವಾಸದ ವಿದ್ಯುತ್ ಬಿಲ್ ಮಾಹೆಯಾನ 5ರಿಂದ 6 ಸಾವಿರ ಆಗುತ್ತಿತ್ತು. ಇವರು ಡಿಸಿಯಾಗಿ ಬಂದ ನಂತರ 55,000ಕ್ಕೂ ಹೆಚ್ಚಾಗಿದೆ. ಸರ್ಕಾರಿ ಹಣದಲ್ಲಿ ಜಿಲ್ಲಾದಿಕಾರಿಗಳು ಈ ರೀತಿ ಐಷಾರಾಮಿ ಜೀವನ ನಡೆಸಿರುವುದು ಸರ್ಕಾರಿ ದುರ್ವಿನಿಯೋಗ ಎಂದು ಸಾ.ರಾ.ಮಹೇಶ್ ದೂರಿದರು.

ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸ ಜನಸನ್ನಿಧಿಯು ಮೈಸೂರಿನ ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿ ಸೇರಿದ್ದು, ಈ ಕಟ್ಟಡದ ದುರಸ್ಥಿ ಮಾಡಲು ಹೆರಿಟೇಜ್ ರೆಗ್ಯುಲೇಶನ್ ಅನ್ವಯ ಪಾರಂಪರಿಕ ಸಂರಕ್ಷಣಾ ಸಮಿತಿ ಅನುಮೋದನೆ ಪಡೆಯುವುದು ಕಡ್ಡಾಯ. ಆದರೆ ಅವರೇ ಆ ಸಮಿತಿಯ ಅಧ್ಯಕ್ಷರಾಗಿದ್ದು, ಪಾರಂಪರಿಕ ಕಾಯ್ದೆಯ ಉಲ್ಲಂಘನೆ ಮಾಡಿ ದುರಸ್ಥಿ ಕಾಮಗಾರಿ ಕೈಗೊಂಡಿದ್ದಾರೆ. ಈ ಸಂಬಂಧ ಮೈಸೂರು ಪ್ರಾದೇಶಿಕ ಆಯುಕ್ತರು ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. 16.35 ಲಕ್ಷ ರೂ. ದುಂದು ವೆಚ್ಚಕ್ಕೆ ಕೈ ಹಾಕಿರುವುದು ಆಕ್ಷೇಪಣೀಯ ಎಂದು ದೂರಿದರು.

ಕೋವಿಡ್ ಸಂದರ್ಭದಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಪಾಸಿಟಿವಿಟಿ ಸಂಖ್ಯೆ ಹೆಚ್ಚಿದ್ದರೂ, ಸಾವಿನ ಸಂಖ್ಯೆ ಇಳಿದಿದೆ ಎಂದು ತೋರಿಸಿದ್ದಾರೆ. ವಾಸ್ತವವಾಗಿ ಸಾವಿನ ಸಂಖ್ಯೆ ಇವರು ಸರ್ಕಾರಕ್ಕೆ ವರದಿ ಮಾಡಿರುವ ಸಂಖ್ಯೆಗಿಂತ ಹೆಚ್ಚಾಗಿರುತ್ತದೆ. ಇವರ ಬೇಜವಾಬ್ದಾರಿಯಿಂದ ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಸಾವು ಸಂಭವಿಸಿವೆ. ಆದರೆ ದಕ್ಷ ಅಧಿಕಾರಿ ಎಂದು ಬಿಂಬಿಸಿಕೊಳ್ಳಲು ಅವರು ಸರ್ಕಾರಕ್ಕೆ ದಾರಿ ತಪ್ಪಿಸುವ ವರದಿ ನೀಡಿದ್ದಾರೆ. 2021ರ ಮೇ ತಿಂಗಳಲ್ಲಿ ಮೈಸೂರು ನಗರದಲ್ಲಿ ಕೋವಿಡ್–19ನಿಂದ ಸಾವನ್ನಪ್ಪಿರುವವರ ಸಂಖ್ಯೆ 219 ಎಂದು ಹಿಂದಿನ ಜಿಲ್ಲಾಧಿಕಾರಿ ಸರ್ಕಾರಕ್ಕೆ ವರದಿ ನೀಡಿದ್ದಾರೆ. ನಂತರ ಆ ಸಂಖ್ಯೆಯನ್ನು 280ಕ್ಕೆ ಹೆಚ್ಚಿಸಿ ವರದಿ ನೀಡಿದ್ದಾರೆ. ಆದರೆ ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸ್ಮಶಾನಗಳಿಂದ ಪಡೆದ ವರದಿಯ ಪ್ರಕಾರ ಆ ಒಂದು ತಿಂಗಳ ಅವಧಿಯಲ್ಲಿ ಮೈಸೂರು ನಗರದಲ್ಲಿ ಸಂಭವಿಸಿರುವ ಮರಣ ಸಂಖ್ಯೆ 969 ಆಗಿದೆ ಎಂದು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಾ.ರಾ.ಮಹೇಶ್ ಸಲ್ಲಿಸಿದರು. ಕೋವಿಡ್ ಸಂದರ್ಭದಲ್ಲಿ 2021ರ ಮೇ 3ರಂದು ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ 28ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದರು. ಈ ದುರಂತಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ಜಿಲ್ಲಾಧಿಕಾರಿ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ಜಿಲ್ಲಾಡಳಿತ ಆಕ್ಸಿಜನ್ ಪೂರೈಕೆ ತಡೆಹಿಡಿದಿದ್ದರಿಂದ ಈ ದುರಂತ ನಡೆಯಲು ಕಾರಣ ಎಂದು ಆರೋಪಿಸಿದ್ದರು. ಅಲ್ಲದೆ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಆಕ್ಸಿಜನ್ ಪೂರೈಕೆಯ ತಡೆಗೆ ಮೈಸೂರಿನ ನಿರ್ಗಮಿತ ಜಿಲ್ಲಾಧಿಕಾರಿ ಕಾರಣ ಎಂದು ಅಧಿಕಾರಿಗಳನ್ನಷ್ಟೇ ಒಳಗೊಂಡ ವಾಟ್ಸಾಪ್ ಗ್ರೂಪ್‌ನ ಚಾಟ್‌ಗಳಿಂದ ಬೆಳಕಿಗೆ ಬಂದವು. ನಂತರ ರೋಹಿಣಿ ಸಿಂಧೂರಿ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಆಕ್ಸಿಜನ್ ಪೂರೈಕೆ ತಡೆಗೆ ಮೌಖಿಕ ಆದೇಶ ನೀಡಿದ ಆಡಿಯೋ ಬಿಡುಗಡೆಯಾಯಿತು. ಅವರ ಮೌಖಿಕ ಆದೇಶದಿಂದ 28 ಕ್ಕೂ ಹೆಚ್ಚು ಮಂದಿ ಕೋವಿಡ್ ಸೋಂಕಿತರ ಸಾವಿಗೆ ಕಾರಣವಾಯಿತು ಎಂದು ಮಹೇಶ್ ದೂರಿದರು. ಈ ಎಲ್ಲಾ ಆರೋಪಗಳಬಗ್ಗೆ ಸೂಕ್ತ ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಅವರು ತನಿಖಾಧಿಕಾರಿಯಾಗಿ ಆಗಮಿಸಿದ್ದ ವಸತಿ ಇಲಾಖೆ ಕಾರ್ಯದರ್ಶಿ ಡಾ.ಜೆ.ರವಿಶಂಕರ್ ಅವರಿಗೆ 1200 ಪುಟಗಳ ಮಾಹಿತಿಗಳನ್ನು ನೀಡಿದರು.



ಕೊಡಗಿನಲ್ಲಿ ಬಿಜೆಪಿ ಕಾರ್ಯಕರ್ತರು ವಿಪಕ್ಷ ನಾಯಕ ಸಿದ್ಧರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದಿದ್ದನ್ನು ಖಂಡಿಸಿ ಕಾರ್ಪೋರೇಟರ್ ಲೋಕೇಶ್ ಪಿಯಾ ನೇತೃತ್ವದಲ್ಲಿ ಸಿದ್ಧರಾಮಯ್ಯ ಅಭಿಮಾನಿಗಳು ಮೈಸೂರಿನ ಜಿಲ್ಲಾ ಪಂಚಾಯತ್ ಕಛೇರಿ ಮುಂಭಾಗ ಶುಕ್ರವಾರ ಪ್ರತಿಭಟನೆ ನಡೆಸಿದರು. ಈ ವೇಳೆ ಪ್ರಶಾಂತ್ ಆರ್ಯ, ರಾಕೇಶ್, ಸತೀಶ್, ಶೇಖರ್, ರಾಜು, ಮಂಜು, ರಾಜೇಂದ್ರ, ಪವನ್ ಇನ್ನಿತರರಿದ್ದರು.

ಪುರಸಭಾ ಕಾರ್ಯಾಲಯ, ಬನ್ನೂರು

ಮೈಸೂರು ಮಳವಳ್ಳಿ ರಸ್ತೆ, ಬನ್ನೂರು – 571101. ತಿ.ನರಸೀಪುರ ತಾ॥ ಮೈಸೂರು ಜಿಲ್ಲೆ. ಫೋನ್:08227–276058, 08227–276111,
ಇಮೇಲ್: www.bannurtown.mrc.gov.in ವೆಬ್‌ಸೈಟ್: www.bannurtown.mrc.gov.in

ಸಂ.: ಪುಸಬ/ಶೇ.24.10, ಶೇ.7.25, ಶೆ.5 ಶಾಖೆ–ಸಿಆರ್–01/2022–23 ದಿನಾಂಕ:16.08.2022

ಸಾರ್ವಜನಿಕ ಪ್ರಕಟಣೆ

ಬನ್ನೂರು ಪುರಸಭಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ 2022–23ನೇ ಸಾಲಿನ ಶೇ.24.10, ಶೇ.7.25, ಮತ್ತು ಶೇ.5 ಎಸ್ ಎಫ್ ಸಿ ಮುಕ್ತನಿಧಿ ಮತ್ತು ಸಾಮಾನ್ಯನಿಧಿ ಅನುದಾನದಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳ, ಮತ್ತು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಡಿ, ವೈಯಕ್ತಿಕ ಕಾರ್ಯಕ್ರಮಕ್ಕಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು. **ದಿನಾಂಕ:20.09.2022ರ ಸಂಜೆ 4.00 ಗಂಟೆಯೊಳಗೆ** ಈ ಕಛೇರಿಗೆ ಕೆಳಕಂಡ ಕಾರ್ಯಕ್ರಮಗಳಿಗೆ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳ ಸಹಿತ ಅರ್ಜಿ ಸಲ್ಲಿಸಬಹುದಾಗಿದೆ. ಕಛೇರಿ ವೇಳೆಯಲ್ಲಿ ನಿಗಧಿತ ಅರ್ಜಿನಮೂನೆ ಪಡೆದು ಈ ಕೆಳಕಂಡ ದಾಖಲಾತಿಯೊಂದಿಗೆ ಅರ್ಜಿ ಸಲ್ಲಿಸುವುದು

ಕ್ರ.ಸಂ.	ಕಲ್ಯಾಣ ಕಾರ್ಯಕ್ರಮ	ಅರ್ಜಿ ಜೊತೆ ಸಲ್ಲಿಸಬೇಕಾಗಿರುವ ದಾಖಲೆಗಳು
		ಪರಿಶಿಷ್ಟ ಜಾತಿಯವರ ವೈಯಕ್ತಿಕ ಕಾರ್ಯಕ್ರಮ
1	ಬಿಇ/ಎಂಬಿಬಿಎಸ್ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ಸಹಾಯಧನ ನೀಡಲು.	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿ ಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 3) ಆಧಾರ್ ಕಾರ್ಡ್/ ನಕಲು ಪ್ರತಿ 4) 2022–23ನೇ ಸಾಲಿನ ಕಾಲೇಜಿನಲ್ಲಿ ವ್ಯಾಸಾಂಗ ಮಾಡುತ್ತಿರುವ ಪ್ರಸಕ್ತ ಸಾಲಿನ ವ್ಯಾಸಾಂಗ ಧೃಡೀಕರಣ ಪತ್ರ 5) ಹಿಂದಿನ ವರ್ಷದ ಅಂಕಪಟ್ಟಿಯ ನಕಲು ಪ್ರತಿ 6) ಸಮಾಜ ಕಲ್ಯಾಣ ಇಲಾಖೆ ಮತ್ತು ವ್ಯಾಸಾಂಗ ಮಾಡುತ್ತಿರುವ ಕಾಲೇಜಿನಿಂದ ಲ್ಯಾಪ್‌ಟಾಪ್ ಪಡೆದಿಲ್ಲದಿರುವ ಧೃಡೀಕರಣ ಪತ್ರ. 7) ಇತ್ತೀಚಿನ ಎರಡು ಭಾವಚಿತ್ರ
2	ಬನ್ನೂರು ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ/ ಯುವತಿಯರಿಗೆ ಕೌಶಲ್ಯಾಭಿವೃದ್ಧಿಯಡಿ ಕಂಪ್ಯೂಟರ್ ತರಬೇತಿ ಕಾರ್ಯಕ್ರಮ	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣ ಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 3) ಆಧಾರ್ ಕಾರ್ಡ್ ನಕಲು ಪ್ರತಿ 4) ಎಸ್ ಎಸ್ ಎಲ್ ಸಿ ಪ್ರಮಾಣ ಪತ್ರ. ಕಡ್ಡಾಯ 5) ಪುರಸಭೆಯಿಂದ ಈ ಹಿಂದಿನ ವರ್ಷಗಳಲ್ಲಿ ಯಾವುದೇ ತರಬೇತಿ ಪಡೆಯಲಾಗಿರುವುದಿಲ್ಲವೆಂದು ನೋಟರಿ ಪ್ರಮಾಣ ಪತ್ರ. 6) ಅಭ್ಯರ್ಥಿಯ ಇತ್ತೀಚಿನ 2 ಭಾವಚಿತ್ರ.
		ಪರಿಶಿಷ್ಟ ಪಂಗಡದವರ ವೈಯಕ್ತಿಕ ಕಾರ್ಯಕ್ರಮ
1	ಬಿಇ/ಎಂಬಿಬಿಎಸ್ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ಪಂಗಡದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ಸಹಾಯಧನ ನೀಡುವುದು.	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 3) ಆಧಾರ್ ಕಾರ್ಡ್ ನಕಲು ಪ್ರತಿ 4) 2021–22ನೇ ಸಾಲಿನ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಸಕ್ತ ಸಾಲಿನ ವ್ಯಾಸಂಗ ಧೃಡೀಕರಣ ಪತ್ರ 5) ಹಿಂದಿನ ವರ್ಷದ ಅಂಕಪಟ್ಟಿಯ ನಕಲು ಪ್ರತಿ 6) ಸಮಾಜ ಕಲ್ಯಾಣ ಇಲಾಖೆ ಮತ್ತು ವ್ಯಾಸಂಗ ಮಾಡುತ್ತಿರುವ ಕಾಲೇಜಿನಿಂದ ಲ್ಯಾಪ್‌ಟಾಪ್ ಪಡೆದಿಲ್ಲದಿರುವ ಧೃಡೀಕರಣ ಪತ್ರ. 7) ಇತ್ತೀಚಿನ ಎರಡು ಭಾವಚಿತ್ರ
2	ಬನ್ನೂರು ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ ಯುವತಿಯರಿಗೆ ಕೌಶಲ್ಯಾಭಿವೃದ್ಧಿಯಡಿ ಕಂಪ್ಯೂಟರ್ ತರಬೇತಿ ಕಾರ್ಯಕ್ರಮ	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 3) ಆಧಾರ್ ಕಾರ್ಡ್ ನಕಲು ಪ್ರತಿ 4) ಎಸ್ ಎಸ್ ಎಲ್ ಸಿ ಪ್ರಮಾಣ ಪತ್ರ. ಕಡ್ಡಾಯ 5) ಪುರಸಭೆಯಿಂದ ಈ ಹಿಂದಿನ ವರ್ಷಗಳಲ್ಲಿ ಯಾವುದೇ ತರಬೇತಿ ಪಡೆಯಲಾಗಿರುವುದಿಲ್ಲವೆಂದು ನೋಟರಿ ಪ್ರಮಾಣ ಪತ್ರ. 6) ಅಭ್ಯರ್ಥಿಯ ಇತ್ತೀಚಿನ 2 ಭಾವಚಿತ್ರ.
		ಪೌರಕಾರ್ಮಿಕರ ಕಲ್ಯಾಣ ಕಾರ್ಯಕ್ರಮದಡಿ ವೈಯಕ್ತಿಕ ಕಾರ್ಯಕ್ರಮ
1	ಪೌರಕಾರ್ಮಿಕರು ಮತ್ತು ಇತರೆ ಸ್ವಚ್ಚತಾ ಸಿಬ್ಬಂದಿಗಳ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಸಹಾಯಧನ	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 3) ಆಧಾರ್ ಕಾರ್ಡ್ ನಕಲು ಪ್ರತಿ 4) 2022–23ನೇ ಸಾಲಿನ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಸಕ್ತ ಸಾಲಿನ ವ್ಯಾಸಂಗ ಧೃಢೀಕರಣ ಪತ್ರ 5) ಹಿಂದಿನ ವರ್ಷದ ಅಂಕಪಟ್ಟಿಯ ನಕಲು ಪ್ರತಿ 6) ಇತ್ತೀಚಿನ ಎರಡು ಭಾವಚಿತ್ರ
2	ಪೌರಕಾರ್ಮಿಕರು ಮತ್ತು ಇತರೆ ಸ್ವಚ್ಚತಾ ಸಿಬ್ಬಂದಿಗಳ ಅವಲಂಭಿತರಿಗೆ ಉದ್ಯೋಗ ವೃತ್ತಿ ತರಬೇತಿ ನೀಡುವುದು.	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 3) ಆಧಾರ್ ಕಾರ್ಡ್ ನಕಲು ಪ್ರತಿ 5) ವಿದ್ಯಾರ್ಹತೆ ಪ್ರಮಾಣ ಪತ್ರ. 6) ಅಭ್ಯರ್ಥಿಯ ಇತ್ತೀಚಿನ 2 ಭಾವಚಿತ್ರ.
		ಇತರೆ ಹಿಂದುಳಿದ ವರ್ಗಗಳ ವೈಯಕ್ತಿಕ ಕಾರ್ಯಕ್ರಮ
1	ಬನ್ನೂರು ಪುರಸಭಾ ವ್ಯಾಪ್ತಿಯ ಇತರೆ ಹಿಂದುಳಿದ ವರ್ಗಗಳ ನಿರುದ್ಯೋಗಿ ಯುವತಿಯರಿಗೆ ಕೌಶಲ್ಯಾಭಿವೃದ್ಧಿಯಡಿ ಹೊಲಿಗೆ ಯಂತ್ರ ಖರೀದಿಗಾಗಿ ಸಹಾಯಧನ ನೀಡುವುದು.	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 3) ಆಧಾರ್ ಕಾರ್ಡ್ ನಕಲು ಪ್ರತಿ 4) ಅಭ್ಯರ್ಥಿಯು 40 ವರ್ಷದೊಳಗಿರಬೇಕು 5) ನಿರುದ್ಯೋಗಿ ಪ್ರಮಾಣ ಪತ್ರ. 6) ಎಸ್ ಎಸ್ ಎಲ್ ಸಿ ಪ್ರಮಾಣ ಪತ್ರ. ಕಡ್ಡಾಯ 7) ಅಭ್ಯರ್ಥಿಯ ಇತ್ತೀಚಿನ 4 ಭಾವಚಿತ್ರ. 8) ಸರ್ಕಾರಿ/ಅರೆಸರ್ಕಾರಿ/ಖಾಸಗಿ ಸಂಸ್ಥೆಗಳಿಂದ ಹೊಲಿಗೆ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ.
		ವಿಕಲಚೇತನರ ವೈಯಕ್ತಿಕ ಕಾರ್ಯಕ್ರಮ
1	ಬನ್ನೂರು ಪುರಸಭಾ ವ್ಯಾಪ್ತಿಯಲ್ಲಿ ದೃಷ್ಟಿ ದೋಷ ಇರುವವರಿಗೆ ಮಡಿಸುವ ಬ್ರೈಲ್ ಕೇನ್ ಸ್ಟೀಕ್ ಮತ್ತು ಬ್ರೈಲ್ ಕಿಟ್ ಖರೀದಿಸಿ ನೀಡುವುದು.	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ವಿಕಲಚೇತನರ ಯುಡಿಐಡಿ ಕಾರ್ಡ್ 3) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 4) ಆಧಾರ್ ಕಾರ್ಡ್ ನಕಲು ಪ್ರತಿ 5) ವೈದ್ಯಾಧಿಕಾರಿಗಳಿಂದ ಧೃಢೀಕರಣ ಪತ್ರ 6) ಇತ್ತೀಚಿನ ಎರಡು ಭಾವಚಿತ್ರ.
2	ಬನ್ನೂರು ಪುರಸಭಾ ವ್ಯಾಪ್ತಿಯಲ್ಲಿ ಮಡಿಸುವ ಚಕ್ರ ಕುರ್ಚಿ ಖರೀದಿಸಿ ನೀಡುವುದು.	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ವಿಕಲಚೇತನರ ಯುಡಿಐಡಿ ಕಾರ್ಡ್ 3) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 4) ಆಧಾರ್ ಕಾರ್ಡ್ ನಕಲು ಪ್ರತಿ 5) ವೈದ್ಯಾಧಿಕಾರಿಗಳಿಂದ ಧೃಢೀಕರಣ ಪತ್ರ 6) ಇತ್ತೀಚಿನ ಎರಡು ಭಾವಚಿತ್ರ.
3	ವಿಕಲಚೇತನರಿಗೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಖರೀದಿಸಿ ನೀಡುವುದು.	1) ತಹಸಿಲ್ದಾರ್‌ರಿಂದ ಪಡೆದಿರುವ ಜಾತಿಪ್ರಮಾಣಪತ್ರ ಮತ್ತು ಪ್ರಸ್ತುತ ಸಾಲಿನ ಆದಾಯ ಪ್ರಮಾಣ ಪತ್ರದ ನಕಲು 2) ವಿಕಲಚೇತನರ ಯುಡಿಐಡಿ ಕಾರ್ಡ್ 3) ರೇಷನ್ ಕಾರ್ಡ್/ಚುನಾವಣಾ ಗುರುತಿನ ದಾಖಲೆ 4) ಆಧಾರ್ ಕಾರ್ಡ್ ನಕಲು ಪ್ರತಿ 5) ವೈದ್ಯಾಧಿಕಾರಿಗಳಿಂದ ಧೃಢೀಕರಣ ಪತ್ರ 6) ಇತ್ತೀಚಿನ ಎರಡು ಭಾವಚಿತ್ರ.

ಸಹಿ/–ಅಧ್ಯಕ್ಷರು ಪುರಸಭೆ, ಬನ್ನೂರು | ಸಹಿ/–ಉಪಾಧ್ಯಕ್ಷರು ಪುರಸಭೆ, ಬನ್ನೂರು | ಸಹಿ/–ಮುಖ್ಯಾಧಿಕಾರಿ ಪುರಸಭೆ, ಬನ್ನೂರು

DIPR/MYS/KAVITA/387/2022-23

ನಕ್ಕರೆ ಅದೇ ಸ್ವರ್ಗ

ಅವರು : ನನ್ನ ಹತ್ತಿರ ಮೂರು ಕನ್ನಡಕಗಳಿವೆ
ಇವರು : ಮೂರು ಕನ್ನಡಕ ಏತಕ್ಕೆ
ಅವರು : ಒಂದು ದೂರದೃಷ್ಟಿಗೆ, ಮತ್ತೊಂದು ಓದುವುದಕ್ಕೆ
ಇವರು : ಮೂರನೆಯದು ಎರಡು ಕನ್ನಡಕ ಹುಡುಕಲು!

ಮೈಸೂರು ಮಿತ್ರ

ಶನಿವಾರ, 20 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಮಗೆ ನಷ್ಟವಿಲ್ಲದೆಯೇ ನಾವು ಮತ್ತೊಬ್ಬರಿಗೆ ಕೊಡಬಹುದಾದಂತಹ ಸಂಪತ್ತೆಂದರೆ ಒಳ್ಳೆಯ ಮಾತು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ

ನಿಮ್ಮ ಪತ್ರಗಳು

ಮೂಗೂರಿನ ನಾಲಾ ರಸ್ತೆ ಅಭಿವೃದ್ಧಿಗೆ ಮನವಿ



ಮಾನ್ಯರೆ,

ತಿ. ನರಸೀಪುರ ತಾಲೂಕು ಮೂಗೂರು ಗ್ರಾಮದ ನೀರಾವರಿ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಬರುವ 38, 39 ರ ವಿತರಣಾ ನಾಲೆಯ ರಸ್ತೆ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದು, 39ರ ನಾಲಾ ವ್ಯಾಪ್ತಿಯ ಉಪ ಸೇವಾ ರಸ್ತೆಯನ್ನು ಅಭಿವೃದ್ಧಿ ಪಡಿಸದೇ ಕೈ ಬಿಡಲಾಗಿದೆ. ಈ ರಸ್ತೆಯು ಬಾಗಳಿ, ಹೊಸಹಳ್ಳಿ, ಹೊಸಹಳ್ಳಿ ಮೋಳೆ ಗ್ರಾಮಗಳಿಂದ ರಾಷ್ಟ್ರೀಯ ಹೆದ್ದಾರಿಯ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಮಾರ್ಗದ ರಸ್ತೆಯಾಗಿದೆ. ರೈತರು ತಮ್ಮ ಜಮೀನುಗಳಿಗೆ ತೆರಳಲು ಅಗತ್ಯವಿರುವ ರಸ್ತೆಯನ್ನು ಅಭಿವೃದ್ಧಿಪಡಿಸದೇ ಇರುವುದರಿಂದ ತುಂಬಾ ತೊಂದರೆಯಾಗಿದೆ. ಹೊಸಳ್ಳಿ ಸಮೀಪದ ನಾಲೆಯ ರಸ್ತೆಗಳನ್ನು ಮಾತ್ರ ಅಭಿವೃದ್ಧಿಪಡಿಸಲಾಗಿದ್ದು, ಈ ರಸ್ತೆಯ ಅಭಿವೃದ್ಧಿಯನ್ನು ಕೈಬಿಡಲಾಗಿದೆ. ಮಳೆಗಾಲದಲ್ಲಿ ಈ ರಸ್ತೆ ವ್ಯಾಪ್ತಿಯ ರೈತರು ನಾಟಿ ಮಾಡುವ ಸಂದರ್ಭದಲ್ಲಿ ತಮ್ಮ ಗದ್ದೆಗೆ ತೆರಳಲು ಹಳ್ಳ ಕೊಳ್ಳದಿಂದ ಕೂಡಿದ್ದು ಕೆಸರು ಗದ್ದೆಯಂತಾಗಿದೆ. ರೈತರು ಸಾರ್ವಜನಿಕರು ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದ್ದು, ಹರಸಾಹಸ ಮಾಡುವಂತಾಗಿದೆ. ರಸ್ತೆಯನ್ನು ಅಭಿವೃದ್ಧಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಈ ಮೂಲಕ ಮನವಿ.

– ಮೂಗೂರು ಗ್ರಾಮಸ್ಥರು, ತಿ. ನರಸೀಪುರ ತಾಲೂಕು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೊಟ್ಟೆ ಎಸೆದಿದ್ದು ಅಗೌರವದ ನಡೆ

ಮಾನ್ಯರೆ,

ಮಡಿಕೇರಿಯಲ್ಲಿ ನೆರೆ ಪ್ರವಾಹದಿಂದ ಹಾನಿಗೀಡಾದ ಪ್ರದೇಶಗಳಿಗೆ ಮಾಜಿ ಮುಖ್ಯಮಂತ್ರಿ, ವಿಪಕ್ಷ ನಾಯಕ ಸಿದ್ದರಾಮಯ್ಯನವರು ವೀಕ್ಷಣೆಗಾಗಿ ತೆರಳಿದ್ದ ಸಂದರ್ಭದಲ್ಲಿ ಕಾರಿನ ಮೇಲೆ ಮೊಟ್ಟೆ ಎಸೆದಿದ್ದು ಪ್ರಜಾಪ್ರಭುತ್ವ ವ್ಯವಸ್ಥೆ ಒಪ್ಪುವಂತದಲ್ಲ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಅವರ ಆಡಳಿತ ಕಛೇರಿಯ ಮುಂದೆ ಆಕ್ರೋಶ ವ್ಯಕ್ತಪಡಿಸಲಿ ಹಾಗೂ ಪ್ರತಿಭಟನೆ, ಹೋರಾಟದ ಮೂಲಕ ತಮ್ಮ ವಿರೋಧ ವ್ಯಕ್ತಪಡಿಸುವ ಸ್ವತಂತ್ರ ಇರುವ ವ್ಯವಸ್ಥೆಯಲ್ಲಿ ಸರ್ಕಾರದ ವಿಪಕ್ಷ ನಾಯಕ ಹಾಗೂ ಆ ಸ್ಥಾನಕ್ಕೆ ತನ್ನದೇ ಆದ ಗೌರವ ಇರುತ್ತದೆ. ಜನರಿಂದ ಆಯ್ಕೆಯಾದ ಜನಪ್ರತಿನಿಧಿ ಹಾಗೂ ಹದಿನಾಲ್ಕು ಬಾರಿ ರಾಜ್ಯದ ಬಜೆಟ್ ಮಂಡನೆ, ಎರಡು ಬಾರಿ ಉಪ ಮುಖ್ಯ ಮಂತ್ರಿ, ಹಾಲಿ ವಿರೋಧ ಪಕ್ಷದ ನಾಯಕನ ಕಾರಿನ ಮೇಲೆ ಮೊಟ್ಟೆ ಎಸೆದಿದ್ದು ಒಳ್ಳೆಯ ಸಂಸ್ಕತಿಯಲ್ಲ.

– ಕಂಗಾಣಿ ಸೋಮು ಪಿ.ಸಿ., ಕ್ಯಾತಮಾರನಹಳ್ಳಿ ಮೈಸೂರು

ಮುತ್ತಿನ ಮುಳಸೋಗೆ ಶಾಲೆ ಅವ್ಯವಸ್ಥೆ ಆಗರ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದ ಪುರ ಸಮೀಪದ ಮುತ್ತಿನ ಮುಳಸೋಗೆ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ಇದ್ದು, ಇಲ್ಲಿ ಸುಮಾರು ಐವತ್ತು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿ 3 ಕೊಠಡಿಗಳಿದ್ದು, 1 ಕೊಠಡಿ ಸಂಪೂರ್ಣ ಶಿಥಿಲಾವಸ್ಥೆ ತಲುಪಿ, ಕುಸಿಯುವ ಹಂತದಲ್ಲಿದೆ. ಮೇಲ್ಛಾವಣಿ ಸಹ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದು, ಮಕ್ಕಳು ಭಯದಲ್ಲಿ ಪಾಠ ಕೇಳುವಂತಾಗಿದೆ. ಅಲ್ಲದೆ ಶಾಲೆಯಲ್ಲಿ ಶೌಚಾಲಯವು ಸಹ ಅವ್ಯವಸ್ಥೆಯಿಂದ ಕೂಡಿದ್ದು, ಮಕ್ಕಳು ಶೌಚಾಲಯಕ್ಕೆ ಹೋಗಬೇಕಾದರೆ ಬಹಳ ತೊಂದರೆಯಾಗದೆ. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಶೌಚಾಲಯ, ಹೆಚ್ಚುವರಿ ಕೊಠಡಿ ನಿರ್ಮಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ಶಿವಕುಮಾರ್, ಮುತ್ತಿನ ಮುಳುಸೋಗೆ ಗ್ರಾಪಂ ಸದಸ್ಯ ಹಾಗೂ ಗ್ರಾಮಸ್ಥರು

ಪ್ರಜಾಪ್ರಭುತ್ವ ವಿರೋಧಿ ಹೇಳಿಕೆ

ಮಾನ್ಯರೆ,

ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭಾರತೀಯ ಜನತಾ ಪಕ್ಷದ ಸಂಸದೀಯ ಮಂಡಳಿಯ ಹಾಗೂ ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಅದಕ್ಕಾಗಿ ಬಿಎಸ್‌ವೈ ಅವರನ್ನು ಅಭಿನಂದಿಸೋಣ. ಆದರೆ, ಈ ಸಂಧರ್ಭದಲ್ಲಿ ಅವರು ಮಾತನಾಡುತ್ತಾ, "ರಾಜ್ಯದಲ್ಲಿ ಬೇರೆ ಪಕ್ಷ ಅಧಿಕಾರಕ್ಕೆ ಬರಲು ಬಿಡುವುದಿಲ್ಲ" ಎಂದು ಹೇಳಿರುವುದು ಖಂಡನಾರ್ಹವಾಗಿದ್ದು, ಪ್ರಜಾಪ್ರಭುತ್ವ ವಿರೋಧಿ ಹೇಳಿಕೆಯಾಗಿದೆ. ಇದು ಜನರ ಆಯ್ಕೆಯ ಹಕ್ಕಿಗೆ ಚ್ಯುತಿ ತರುವ ಕೆಲಸವಾಗಿದೆ. ರಾಜ್ಯದ ಜನತೆ ತಮಗೆ ಇಷ್ಟವಾದ ಪಕ್ಷಕ್ಕೆ ಅಧಿಕಾರ ನೀಡುವುದಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಕಾಶವಿದೆ. ಬೇರೆ ಪಕ್ಷಗಳನ್ನು ಅಧಿಕಾರಕ್ಕೆ ಬರದಂತೆ ತಡೆಯುವ ಹಕ್ಕು ಮತದಾರರಿಗೆ ಮಾತ್ರವಲ್ಲದೇ ಬೇರೆಯವರಿಗೆ ಇಲ್ಲ. ಅವರು ತಮ್ಮ ಪಕ್ಷದ ಪರವಾಗಿ ಪ್ರಚಾರ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರಲಿ, ಅದು ಬೇರೆ ಮಾತು. ಆದರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬರುವುದು ಬೇಡ ಎನ್ನುವುದು ಉದ್ದಟತನದ ಮಾತು. ಈ ಸತ್ಯವನ್ನು ಹಿರಿಯ ರಾಜಕೀಯ ಮುತ್ಸದ್ದಿ ಬಿಎಸ್‌ವೈ ಅರ್ಥ ಮಾಡಿಕೊಳ್ಳುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ದಿಕ್ಕುದೆಸೆ



ಕಾರ್ಕಳ ಆನಂದಭಟ್
ಮೊ.7676554198

ಭ್ರಷ್ಟಾಚಾರ; ಭಾರತಕ್ಕೆ ಅಂಟಿರುವ ಶಾಪ



ಸ್ವಾತಂತ್ರ್ಯೋತ್ಸವ ಅಮೃತ ವರ್ಷದಲ್ಲಿ ಸಿಂಹಾವಲೋಕನ ಮಾಡಿದಲ್ಲಿ ದೇಶವು ಅನೇಕ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಳ ಬಗ್ಗೆ ಹೆಮ್ಮೆ ಪಡಬಹುದು. ಈ ಎಲ್ಲಾ ಸಾಧನೆಗಳಿಗೆ ಕಳಸವಿಟ್ಟಂತೆ ಭಾರತವು ಜಗತ್ತಿನಲ್ಲಿ ಅತಿ ದೊಡ್ಡ ಯಶಸ್ವಿ ಪ್ರಜಾಸತ್ತಾತ್ಮಕ ದೇಶವೆಂಬ ಗೌರವಕ್ಕೆ ಪಾತ್ರವಾಗಿದೆ. ಆದರೆ ಸಾರ್ವಜನಿಕ ವಲಯದಲ್ಲಿ ವಿಶೇಷವಾಗಿ ರಾಜಕೀಯ ರಂಗದಲ್ಲಿ ನೈತಿಕ ಮೌಲ್ಯಗಳು ಪತನಗೊಂಡಿರುವುದು ದೇಶವಾಸಿಗಳನ್ನು ಚಿಂತೆಗೀಡು ಮಾಡಿದೆ. ಉನ್ನತ ಮಟ್ಟದಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರ ದೇಶವನ್ನು ನೈತಿಕವಾಗಿ ಕುಗ್ಗಿಸಿದೆ. ರಾಜಕಾರಣಿಗಳು ಸರಕಾರಿ ಯೋಜನೆಗಳನ್ನು ಹಣ ಲೂಟಿ ಹೊಡೆಯಲಿಕ್ಕೆ ರೂಪಿಸುತ್ತಿದ್ದಾರೆ ಎಂಬ ಭಾವನೆ ದೇಶದಲ್ಲಿ ವ್ಯಾಪಕವಾಗಿದೆ. ಪ್ರಜ್ಞಾವಂತರು, ವಿದ್ಯಾವಂತರೆನಿಸಿದವರೆ ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾರೀ ಸಂಖ್ಯೆಯಲ್ಲಿದ್ದಾರೆ. ಭ್ರಷ್ಟಾಚಾರ ದೇಶದ ಪ್ರಾಮಾಣಿಕ ತೆರಿಗೆದಾರರಿಗೆ ಮಾಡುತ್ತಿರುವ ದ್ರೋಹವಾಗಿದೆ. ನೆಹರು ಸಂಪುಟದಲ್ಲಿ ಕೃಷ್ಣ ಮೆನನ್ ರಕ್ಷಣಾ ಸಚಿವರಾಗಿದ್ದಾಗ ನಡೆದ ಜೀಪು ಹಗರಣದೊಂದಿಗೆ ದೇಶದಲ್ಲಿ ಭ್ರಷ್ಟಾಚಾರದ ಯುಗ ಪ್ರಾರಂಭವಾಯಿತೆನ್ನಬಹುದು. ಈ ಪ್ರಕರಣದಲ್ಲಿ ಮೆನನ್‌ರನ್ನು ರಕ್ಷಿಸಲು ನೆಹರೂರವರು ಪ್ರಯತ್ನಿಸಿದ್ದರು ಎಂಬ ಆಪಾದನೆಯು ಕೇಳಿ ಬಂದಿತ್ತು. ಇಂದಿರಾ ಗಾಂಧಿಯವರು ಭ್ರಷ್ಟಾಚಾರವನ್ನು ಸಾಮಾನ್ಯ ವಿಚಾರ ಎಂದಿದ್ದರು. ಇಂದಿರಾಜಿ ಕಾಲದಲ್ಲಿ ಭ್ರಷ್ಟಾಚಾರ ಸಾಂಸ್ಥಿಕರಣಗೊಂಡಿತು ಎನ್ನಲಾಗಿದೆ. ರಾಜೀವ್ ಗಾಂಧಿಯವರು ಕೇಂದ್ರ ಸರಕಾರ ಅಭಿವೃದ್ಧಿ ಯೋಜನೆಗಳಿಗೆ ನೀಡುವ ಪ್ರತಿ ಒಂದು ನೂರು ರೂ.ನಲ್ಲಿ ಫಲಾನುಭವಿಗಳಿಗೆ ಕೇವಲ ರೂ. ಹದಿನೈದು ದೊರೆಯುತ್ತಿತ್ತು ಎನ್ನುವ ಮೂಲಕ ಭ್ರಷ್ಟಾಚಾರದ ಭೀಕರ ಗಾತ್ರವನ್ನು ಸೂಚಿಸಿದ್ದರು.

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ದೇಶದ ಒಂದು ಉನ್ನತ ನ್ಯಾಯಾಲಯವು ಭ್ರಷ್ಟಾಚಾರವು ದೇಶದ್ರೋಹದ ಪ್ರವೃತ್ತಿಯಾಗಿದೆ ಎಂಬ ಗಮನಾರ್ಹ ಹೇಳಿಕೆ ನೀಡಿತ್ತು. ಭ್ರಷ್ಟಾಚಾರವು ದೇಶದ ಆತ್ಮ ಸಮ್ಮಾನ ಆಸ್ತಿಗಳು, ಸಮಾಜದಲ್ಲಿರುವ ನೈತಿಕ ಮೌಲ್ಯಗಳನ್ನು ನಾಶ ಮಾಡುತ್ತಿದೆ. ಸಮಾಧಾನದ ಸಂಗತಿಯೆಂದರೆ ಡಾ. ಮನಮೋಹನ್ ಸಿಂಗ್ ಸರಕಾರದ ಮೇಲೆ ಬಂದಂತೆ ಮೋದಿ ಸರಕಾರದ ಮೇಲೆ ಇದುವರೆಗೆ ಯಾವುದೇ ಭ್ರಷ್ಟಾಚಾರದ ಆಪಾದನೆ ಬಂದಿಲ್ಲ. ಆದರೆ ಆಡಳಿತದ ಕೆಳ ಹಂತಗಳಲ್ಲಿ ಭ್ರಷ್ಟಾಚಾರದ ಬೇರುಗಳು ಇನ್ನೂ ಆಳವಾಗಿ ಬೇರೂರಿವೆ.

ಇತ್ತೀಚೆಗೆ ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯಗಳು (ಇಡಿ) ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ದೇಶದ ಅನೇಕ ಕಡೆ ಧಾಳಿ ನಡೆಸಿವೆ. ಈ ದಾಳಿಗಳಲ್ಲಿ ರಾಜಕಾರಣಿಗಳು ಅವರ ಆಪ್ತರು, ಸಂಬಂಧಿಕರಿಂದ ಕೋಟ್ಯಾಂತರ ರೂ. ನಗದು, ಚಿನ್ನಾಭರಣಗಳು, ನಿವೇಶನ, ಭೂ ದಾಖಲೆಗಳನ್ನು ವಶಪಡಿಸಿಕೊಳ್ಳಲಾಯಿತು. ಈ ದಾಳಿಗಳು ದೇಶದ ಉನ್ನತ ರಾಜಕಾರಣಿಗಳ ಮೇಲೆ ತಿರಸ್ಕಾರ ಬರುವಂತೆ ಮಾಡಿದೆ.

ಸಾಮಾನ್ಯವಾಗಿ ಈ ರೀತಿಯ ಆರೋಪಗಳು ಬರುತ್ತಿದ್ದಂತೆ, ತನಿಖಾ ಸಂಸ್ಥೆಗಳು ದಾಳಿ ನಡೆಸುತ್ತಿದ್ದಂತೆ ಪ್ರಕರಣಗಳ ಹಳಿ ತಪ್ಪಿಸುವ ಯತ್ನ ಪ್ರಾರಂಭಿಸುತ್ತಾರೆ. ತಾವು ಪ್ರಾಮಾಣಿಕರು, ತನ್ನ ಮೇಲೆ ರಾಜಕೀಯ ದ್ವೇಷದಿಂದ ನನ್ನ ವಿರೋಧಿಗಳು ಮಾಡಿರುವ ಷಡ್ಯಂತ್ರ ನನ್ನನ್ನು ರಾಜಕೀಯವಾಗಿ ಮುಗಿಸಲು ಸರಕಾರ ತನಿಖಾ ಸಂಸ್ಥೆಗಳನ್ನು ನನ್ನ ವಿರುದ್ಧ ಉಪಯೋಗಿಸಿದ್ದಾರೆ. ಈ ರೀತಿ ತಾವು ಪ್ರಾಮಾಣಿಕ, ಚಾರಿತ್ರ್ಯವಂತ ರಾಜಕಾರಣಿ ಎಂದು ಪ್ರದರ್ಶಿಸಿಕೊಳ್ಳುತ್ತಾರೆ.

ಪಶ್ಚಿಮ ಬಂಗಾಳದಲ್ಲೂ ಇದೇ ರೀತಿಯ ವಿದ್ಯಮಾನಗಳು ಸಂಭವಿಸಿವೆ. ಮಮತಾ ಬ್ಯಾನರ್ಜಿ ಸಂಪುಟದ ನಂ. 2 ಸಚಿವ ಪಾರ್ಥ ಚಟರ್ಜಿಯವರ ಆಪ್ತೆ, ಸ್ನೇಹಿತೆಯಾಗಿರುವ ಅರ್ಪಿತಾ ಮುಖರ್ಜಿಯವರ ಅಪಾರ್ಟ್‌ಮೆಂಟ್‌ನಿಂದ ರೂ. 50 ಕೋಟಿ ನಗದನ್ನು ಇಡಿ ವಶಪಡಿಸಿಕೊಂಡಿತು. ಈ ಸಂದರ್ಭದಲ್ಲಿ ಅರ್ಪಿತಾರವರು ನಾಟಕೀಯ ರೀತಿಯಲ್ಲಿ ಅಮರ್ ನೊಯ್, ಅಮರ್ ನೊಯ್ (ನನ್ನದಲ್ಲ..) ಎಂದು ಕೂಗಾಡುತ್ತಿದ್ದರು. ಈ ಘಟನೆಯ ನಂತರ ಮುಖ್ಯಮಂತ್ರಿ ಮಮತಾರವರು ಚಟರ್ಜಿಯವನ್ನು ಮಂತ್ರಿ ಮಂಡಲದಿಂದ ವಜಾಗೊಳಿಸಿದರು. ಇಲ್ಲಿ ಸ್ವಾರಸ್ಯಕರ ಸಂಗತಿಯೆಂದರೆ ಇಡಿಯು ಅರ್ಪಿತಾರಿಂದ ವಶಪಡಿಸಿಕೊಂಡ ನಗದು ತನಗೆ ಸೇರಿದ್ದಲ್ಲವೆಂದು ಪಾರ್ಥರವರು ಎಂಟು ದಿನಗಳ ನಂತರ ಹೇಳಿಕೆ ನೀಡಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಅವರ ಪಕ್ಷ ಈ ಹೇಳಿಕೆ ನೀಡಲು ಇಷ್ಟೇಕೆ ನಿಧಾನವಾಯಿತು ಎಂದು ವ್ಯಂಗ್ಯವಾಗಿ ಟೀಕಿಸಿತು. ತೃಣಮೂಲ ವಕ್ತಾರ ಕುನಾಲ್ ಘೋಷರು ಅವರಿಗೆ ಹೇಳಲು ಕಾಲಾವಕಾಶವಿದ್ದಾಗ ಇದು ತನ್ನ ವಿರುದ್ಧ ನಡೆದಿರುವ ಪಿತೂರಿ ಎಂದು ಏಕೆ ಹೇಳಲಿಲ್ಲ ಎಂದು ಟೀಕಿಸಿದರು.

> ಇತ್ತೀಚೆಗೆ ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯಗಳು (ಇಡಿ) ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ದೇಶದ ಅನೇಕ ಕಡೆ ಧಾಳಿ ನಡೆಸಿವೆ. ಈ ದಾಳಿಗಳಲ್ಲಿ ರಾಜಕಾರಣಿಗಳು ಅವರ ಆಪ್ತರು, ಸಂಬಂಧಿಕರಿಂದ ಕೋಟ್ಯಾಂತರ ರೂ. ನಗದು, ಚಿನ್ನಾಭರಣಗಳು, ನಿವೇಶನ, ಭೂ ದಾಖಲೆಗಳನ್ನು ವಶಪಡಿಸಿಕೊಳ್ಳಲಾಯಿತು. ಈ ದಾಳಿಗಳು ದೇಶದ ಉನ್ನತ ರಾಜಕಾರಣಿಗಳ ಮೇಲೆ ತಿರಸ್ಕಾರ ಬರುವಂತೆ ಮಾಡಿದೆ.

ಲಾಲು ಪ್ರಸಾದ್ ಯಾದವ್‌ರ ಮೇವು ಹಗರಣದ ವಿಚಾರಣೆಯ ಸಂದರ್ಭದಲ್ಲಿ ಪಾರ್ಥ ರೀತಿಯ ಪ್ರತಿಕ್ರಿಯೆಗಳು ಬಂದಿದ್ದವು. ನ್ಯಾಯಾಲಯಗಳು ಶಿಕ್ಷೆ ನೀಡುವವರೆಗೆ ತನ್ನ ವಿರೋಧಿಗಳ ಪಿತೂರಿ ಎಂದು ಯಾದವ್ ಹೇಳುತ್ತಿದ್ದರು. ಮೇವು ಹಗರಣದ ವಿಚಾರಣೆಗೆ ಬಂದಂತಹ ಸಿಬಿಐ ಅಧಿಕಾರಿಗಳ ವಿರುದ್ಧ ಬಿಹಾರದಲ್ಲಿ ಭಾರೀ ಅಪಪ್ರಚಾರ ಮಾಡಿದ್ದರು. ವಿಚಾರಣೆಯ ಹಾದಿ ತಪ್ಪಿಸಲು ಸಿಬಿಐ ಅಧಿಕಾರಿಗಳನ್ನೇ ಅಪರಾಧಿಗಳೆಂದು ಬಿಂಬಿಸುವ ಯತ್ನ ನಡೆಸಿದರು. ಅನಾರೋಗ್ಯದ ನೆಪ ಹೇಳಿದರು. ಆದರೆ ನ್ಯಾಯಾಲಯ ಲಾಲೂ ಅವರ ಎಲ್ಲಾ ರೀತಿಯ ತಂತ್ರಗಾರಿಕೆಯನ್ನು ವಿಫಲಗೊಳಿಸಿ ಶಿಕ್ಷೆ ವಿಧಿಸಿತು. ಇಂತಹ ಸಂದರ್ಭಗಳಲ್ಲಿ ರಾಜಕಾರಣಿಗಳು ತಮ್ಮ ಪರ ಅನುಕಂಪದ ಅಲೆ ಸೃಷ್ಟಿಸಿ ವಿಚಾರಣೆಗಳಿಂದ ಪಾರಾಗಲು ಯತ್ನಿಸುತ್ತಾರೆ.

ಇತ್ತೀಚೆಗೆ ತನಿಖಾ ಸಂಸ್ಥೆಗಳು ಶಿವಸೇನೆಯ ನಾಯಕರಾದ **ಸಂಜಯ್ ರಾವತ್** ಮಾಡಿದ್ದಾರೆನ್ನಲಾದ ಒಂದು ಸಾವಿರ ಕೋಟಿ ರೂಪಾಯಿಯ ಮುಂಬೈಯಲ್ಲಾದ ಪತ್ರಚಾಲ್ ಹಗರಣ ತನಿಖೆ ಆರಂಭಿಸಿದೆ. ಈ ಸಂದರ್ಭದಲ್ಲಿ ಸಂಜಯ್ ರಾವತ್‌ರು ತನಿಖಾ ಏಜೆನ್ಸಿಗಳ ವಿರುದ್ಧ ಪ್ರತಿಭಟಿಸುವಂತೆ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದ್ದರು. ಎನ್‌ಸಿಪಿಯ **ನವಾಬ್ ಮಲ್ಲಿಕ್** ಹಾಗೂ **ಅನಿಲ್ ದೇಶಮುಖ್**‌ರನ್ನು ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಬಂಧಿಸಲಾಗಿತ್ತು. ಆದರೆ ಉದ್ಧವ್ ಠಾಕ್ರೆಯವರು ಮುಖ್ಯಮಂತ್ರಿಯಾಗಿರುವವರೆಗೆ ಅವರನ್ನು ಸಂಪುಟದಿಂದ ಕಿತ್ತು ಹಾಕಿರಲಿಲ್ಲ. ಇದೇ ಮಾದರಿಯ ಪ್ರಕರಣದಲ್ಲಿ ಬಂಧಿತರಾಗಿರುವ ದೆಹಲಿಯ ಆರೋಗ್ಯ ಸಚಿವ ಸತ್ಯೇಂದ್ರ ಜೈನ್‌ರವರ ಭ್ರಷ್ಟಾಚಾರ ವಿರೋಧಿ ಹೋರಾಟದ ಚಾಂಪಿಯನ್ ಅರವಿಂದ ಕೇಜ್ರಿವಾಲ್‌ರ ಸಂಪುಟದಲ್ಲಿ ಮಂತ್ರಿಯಾಗಿ ಮುಂದುವರಿದಿದ್ದಾರೆ. ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ಕೇಜ್ರಿವಾಲ್ ತಮ್ಮ ಸರಕಾರದಲ್ಲಿದ್ದ ಸಚಿವರು ಜೈಲಿಗೆ ಹೋದ ನಂತರವೂ ಅವರನ್ನು ಮಂತ್ರಿಯಾಗಿ ಮುಂದುವರಿಸುವ ಮೂಲಕ ಕೆಟ್ಟ ಸಂಪ್ರದಾಯಕ್ಕೆ ಚಾಲನೆ ನೀಡಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಹಾಗೂ ಮಗ ರಾಹುಲ್ ಗಾಂಧಿಯವರನ್ನು ತನಿಖಾ ಸಂಸ್ಥೆಗಳು ವಿಚಾರಣೆ ನಡೆಸಿದವು. ಈ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ನಾಯಕರ ಕರೆಯಂತೆ ದೇಶಾದ್ಯಂತ ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆ ಸಂದರ್ಭಗಳಲ್ಲಿ ಎಲ್ಲ ವಿಪಕ್ಷಗಳು, ತನಿಖಾ ಸಂಸ್ಥೆಗಳು, ಸರಕಾರಗಳ ಮೇಲೆ ಒತ್ತಡ ಹೇರಬಹುದು ಎಂದು ಭಾವಿಸಿರಬೇಕು. ಆದರೆ ಅಕ್ರಮ ಹಣ ವರ್ಗಾವಣೆಯ ಎಲ್ಲಾ ಪ್ರಕರಣಗಳು ಪಿಎಂಎಲ್‌ಎ ಕಾಯ್ದೆಯಂತೆ ನ್ಯಾಯಾಲಯಗಳ ನೇರ ನಿರ್ದೇಶನದಲ್ಲಿ ನಡೆಯುತ್ತವೆ. ಎಲ್ಲಾ ತನಿಖಾ ಮಾಹಿತಿಗಳನ್ನು ತನಿಖಾ ಸಂಸ್ಥೆಗಳು ನೇರವಾಗಿ ನ್ಯಾಯಾಲಯಗಳಿಗೆ ನೀಡಬೇಕು. ಇಲ್ಲಿ ಸರಕಾರದ ಪಾತ್ರವೇನೂ ಇರುವುದಿಲ್ಲ. ಆದರೂ ಆರೋಪಿಗಳು ತಮ್ಮನ್ನು ರಕ್ಷಿಸಲು ತನಿಖೆಗಳನ್ನು ರಾಜಕೀಯಗೊಳಿಸುತ್ತಿರುವುದು ಉತ್ತಮ ಬೆಳವಣಿಗೆಯಲ್ಲ.

ಈ ದೃಷ್ಟಿಯಿಂದ ಪ್ರಧಾನಿ ಮೋದಿಯವರು ಅತ್ಯುತ್ತಮ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. 2002ರ ಗುಜರಾತ್ ಗಲಭೆಗಳಿಗೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯ ರಚಿಸಿದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಂದೆ ವಿಚಾರಣೆಗೆ ಹಾಜರಾಗಿ ಸಂಪೂರ್ಣ ಸಹಕಾರ ನೀಡಿದ್ದರು. ಮೋದಿಯವರು ಕಾರ್ಯಕರ್ತರಿಗೆ ಪ್ರತಿಭಟಿಸಲು ಕರೆ ನೀಡಲಿಲ್ಲ. ಯಾವುದೇ ರೀತಿಯ ಗಲಭೆ ಗೊಂದಲಗಳಿಗೆ ಅವಕಾಶ ನೀಡದೇ ವಿಚಾರಣೆಗೆ ಸಹಕರಿಸಿದ್ದರು. ಮೋದಿಯವರಿಗೆ ಸಾಧ್ಯವಾಗಿರುವುದು ವಿಪಕ್ಷ ರಾಜಕಾರಣಿಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಎಲ್ಲ ವಿಚಾರಣೆಗೆ ಒಳಗಾದ ರಾಜಕಾರಣಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ದೇಶದ ಬಾಹ್ಯಾಕಾಶ ವಿಜ್ಞಾನಿಗಳು ಏಕಕಾಲದಲ್ಲಿ ನೂರಕ್ಕೂ ಹೆಚ್ಚು ಉಪಗ್ರಹಗಳನ್ನು ಕರಾರುವಕ್ಕಾಗಿ ಅಂತರಿಕ್ಷಕ್ಕೆ ಚಿಮ್ಮಿಸುವ ಸಾಧನೆ ಮಾಡಿದ್ದಾರೆ. ದೇಶದ ರಕ್ಷಾತಜ್ಞರು ಬ್ರಹ್ಮೋಸ್‌ನಂತಹ ವಿನಾಶಕಾರಿ ಕ್ಷಿಪಣಿಗಳು, ತೇಜಸ್‌ನಂತಹ ಲಘು ಯುದ್ಧ ವಿಮಾನಗಳನ್ನು ನಿರ್ಮಿಸುತ್ತಿದ್ದಾರೆ. ಕೆಲವೇ ವರ್ಷಗಳ ಹಿಂದಿನವರೆಗೆ ತಲೆನೋವಿನ ಮಾತ್ರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಭಾರತವಿಂದು ಕೊರೊನಾ ಲಸಿಕೆ ಸಂಶೋಧಿಸಿ ಜಗತ್ತನ್ನೇ ಚಕಿತಗೊಳಿಸಿದೆ. ಜಗತ್ತಿನಲ್ಲಿ ಅತೀ ಎತ್ತರದ ಪ್ರತಿಮೆ, ಅತೀ ಎತ್ತರದಲ್ಲಿ ರೈಲ್ವೆ ಸೇತುವೆ ಮೊದಲಾದ ಜಗತ್ತೇ ಆಶ್ಚರ್ಯಪಡುವಂತಹ ಸಾಧನೆಗಳನ್ನು ಭಾರತ ಮಾಡುತ್ತಿದೆ. ಇದಕ್ಕೆ ಕಾರಣ ಭಾರತದ ಮೇಧಾವಿಗಳ ಸಮರ್ಪಣಾ ಮನೋಭಾವ. ಇವರೆಲ್ಲರಿಗೆ ಪ್ರಧಾನಿ ಮೋದಿ ಪ್ರೇರಣೆಯಾಗಿದ್ದಾರೆ. ಸದಾ ಭ್ರಷ್ಟಾಚಾರ ಸ್ವಜನಪಕ್ಷಪಾತ ಮುಕ್ತ ಕಳಂಕರಹಿತರಾಗಿರುವುದರಿಂದ ಪ್ರಧಾನಿ ಮೋದಿ ದೇಶಕ್ಕೆ ಮಾತ್ರವಲ್ಲ ಜಗತ್ತಿಗೆ ಇಂದು ಮಹಾನ್ ನಾಯಕರೆನಿಸಿದ್ದಾರೆ. ದೇಶದ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ವಿಶೇಷವಾಗಿ ಭಾಜಪ ನಾಯಕರು ಮೋದಿಯವರಂತೆ ಕಾರ್ಯಶೀಲರಾದರೆ ಭಾರತವನ್ನು ಶಕ್ತಿಶಾಲಿ, ಜಗದ್ವಿಖ್ಯಾತ ರಾಷ್ಟ್ರವಾಗುವುದನ್ನು ತಡೆಯಲು ಜಗತ್ತಿನ ಯಾವುದೇ ಶಕ್ತಿಗಳಿಗೂ ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ಭ್ರಷ್ಟಾಚಾರದ ಅಪಾಯದ ಬಗ್ಗೆ ಆಸ್ಟ್ರಿಯನ್ ಸಾಹಿತಿ ಕಾರ್ಲ್ ಕ್ರೌಸ್‌ರ ಹೇಳಿಕೆ ``Corruption is worse than prostitution. The latter might endanger the morals of an individual. The former endangers the morals of the entire country'' ಭ್ರಷ್ಟಾಚಾರವು ವ್ಯಭಿಚಾರಕ್ಕಿಂತ ನಿಕೃಷ್ಟವಾಗಿದೆ. ಎರಡನೆಯದು ಓರ್ವ ವ್ಯಕ್ತಿಯ ನೈತಿಕತೆಯನ್ನು ನಾಶ ಮಾಡಿದರೆ ಮೊದಲನೆಯದು (ಭ್ರಷ್ಟಾಚಾರ) ಒಂದು ದೇಶದ ನೈತಿಕತೆಯನ್ನೇ ನಾಶಪಡಿಸುತ್ತದೆ. ಆದ್ದರಿಂದ ಸ್ವಾತಂತ್ರ್ಯದ ಅಮೃತ ವರ್ಷದಲ್ಲಿ ನಾವೆಲ್ಲರೂ ದೇಶವನ್ನು ಭ್ರಷ್ಟಾಚಾರ ಮುಕ್ತಗೊಳಿಸುವ ಸಂಕಲ್ಪ ಮಾಡೋಣ.

'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ

ಹುಬ್ಬಳ್ಳಿ ಟೈಗರ್ಸ್‌ಗೆ 8 ವಿಕೆಟ್‌ಗಳ ರೋಚಕ ಜಯ



ಬೆಂಗಳೂರು, ಆ.19– ಲವ್‌ನೀತ್ ಸಿಸೋಡಿಯಾ ಹಾಗೂ ಬಿ.ಯು. ಶಿವಕುಮಾರ್ ಅವರ ಆಕರ್ಷಕ ಬ್ಯಾಟಿಂಗ್ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡ ಮಹಾರಾಜ ಟ್ರೋಫಿಯಲ್ಲಿ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ 8 ವಿಕೆಟ್ ಜಯ ಗಳಿಸಿದೆ.


ಇಲ್ಲಿನ ಎಂ.ಚಿನ್ನಸ್ವಾಮಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ನಿಗದಿತ 20 ಓವರ್‌ಗಳಲ್ಲಿ ಶಿವಮೊಗ್ಗ ಸ್ಟ್ರೈಕರ್ಸ್ ನೀಡಿದ 147 ರನ್ ಜಯದ ಗುರಿ ಹೊತ್ತ ಟೈಗರ್ಸ್ ತಂಡದ ಪರ ಲವ್‌ನೀತ್ ಸಿಸೋಡಿಯಾ 62 ಮತ್ತು ಶಿವಕುಮಾರ್ ಅಜೇಯ 61 ಆಕರ್ಷಕ ಅರ್ಧ ಶತಕ ಗಳಿಸುವ ಮೂಲಕ ತಂಡಕ್ಕೆ 107 ರನ್ ಜೊತೆಯಾಟದ ನೆರವು ನೀಡಿದರು. ಇನ್ನೂ 16 ಎಸೆತಗಳು ಬಾಕಿ ಇರುವಾಗಲೇ ಹುಬ್ಬಳ್ಳಿ ಟೈಗರ್ಸ್ ತಂಡ ಜಯಗಳಿಸಿತು.

ಸಿಸೋಡಿಯಾ 38 ಎಸೆತಗಳನ್ನೆದುರಿಸಿ 6 ಬೌಂಡರಿ ಹಾಗೂ ಸಿಕ್ಸ್ ನೆರವಿನಿಂದ ಜಯಕ್ಕೆ ಅಗತ್ಯವಿರುವ ವೇದಿಕೆ ನಿರ್ಮಿಸಿಕೊಟ್ಟರು, ಶಿವಕುಮಾರ್ 52 ಎಸೆತಗಳನ್ನೆದುರಿಸಿ 7 ಬೌಂಡರಿ 1 ಸಿಕ್ಸರ್ ನೆರವಿನಿಂದ ಅಜೇಯ 61 ರನ್ ಸಿಡಿಸಿ ಜಯದ ಹಾದಿಯನ್ನು ಸುಗಮಗೊಳಿಸಿದರು. ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ಸ್ಟ್ರೈಕರ್ಸ್ ತಂಡದ ಶರತ್ ಹಾಗೂ ಹೂವರ್ ಜೊತೆಯಾಟದಲ್ಲಿ 78 ರನ್ ದಾಖಲಿಸಿದರು. ಆದರೆ, ಇಬ್ಬರ ವಿಕೆಟ್ ಪತನವಾದ ನಂತರ ಶಿವಮೊಗ್ಗದ ರನ್ ಗಳಿಕೆಗೆ ಕಡಿವಾಣ ಬಿತ್ತು. ಟೈಗರ್ಸ್ ತಂಡದ ಬೌಲರ್‌ಗಳಾದ ಆನಂದ್ ಮತ್ತು ಶಿವಕುಮಾರ್ ಆರಂಭಿಕ ಆಟಗಾರರ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಶರತ್ 33 ಎಸೆತಗಳಲ್ಲಿ 5 ಬೌಂಡರಿ ನೆರವಿನಿಂದ 36 ರನ್ ಗಳಿಸಿದರೆ ಸ್ಟಾಲಿನ್ ಹೂವರ್, 25 ಎಸೆತಗಳನ್ನೆದುರಿಸಿ 2 ಬೌಂಡರಿ ಮತ್ತು 3 ಸಿಕ್ಸರ್ ನೆರವಿನಿಂದ 38 ರನ್ ಗಳಿಸಿ ಉತ್ತಮ ಜೊತೆಯಾಟಕ್ಕೆ ನೆರವಾದರು. ನಂತರ ಕೆ. ಸಿದ್ಧಾರ್ಥ 23 ಹಾಗೂ ಚೈತನ್ಯ 32 ಸೇರಿದಂತೆ 43 ರನ್ ಜೊತೆಯಾಟವಾಡಿ ತಂಡದ ಸಾಧಾರಣ ಮೊತ್ತಕ್ಕೆ ನೆರವಾದರು.

ಹುಬ್ಬಳ್ಳಿ ಟೈಗರ್ಸ್‌ನ ವಾಸುಕಿ ಕೌಶಿಕ್ ತಮ್ಮ ಬೌಲಿಂಗ್ ಚಮತ್ಕಾರವನ್ನು ಪ್ರದರ್ಶಿಸಿ 29 ರನ್‌ಗೆ 2 ವಿಕೆಟ್ ಗಳಿಸಿದರು. ನವೀನ್, ದೊಡ್ಡಮನಿ ಆನಂದ್ ಮತ್ತು ಶಿವಕುಮಾರ್ ತಲಾ 1 ವಿಕೆಟ್ ಗಳಿಸಿದರು. ಕೊನೆಯ ಓವರ್‌ನಲ್ಲಿ ಅದ್ಭುತ ಬೌಲಿಂಗ್ ಪ್ರದರ್ಶಿಸಿದ ಕೌಶಿಕ್ ಎರಡು ಎಸೆತಗಳಲ್ಲಿ ಎರಡು ವಿಕೆಟ್ ಗಳಿಸಿ ಶಿವಮೊಗ್ಗದ ರನ್ ಗಳಿಕೆಗೆ ಕಡಿವಾಣ ಹಾಕಿದರು. ಬಿ.ಯು.ಶಿವಕುಮಾರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಗುಲ್ಬರ್ಗ ಮೈಸ್ಟಿಕ್ಸ್‌ಗೆ ಗೆಲುವು

ಆಕರ್ಷಕ ಬೌಲಿಂಗ್ ನೆರವಿನಿಂದ ಗುಲ್ಬರ್ಗ ಮೈಸ್ಟಿಕ್ಸ್ ತಂಡ ಮಂಗಳೂರು ಯುನೈಟೆಡ್ ತಂಡವನ್ನು 136 ರನ್‌ಗಳಿಗೆ ಆಲ್ ಔಟ್ ಮಾಡುವ ಮೂಲಕ 28 ರನ್‌ಗಳ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗ ಮೈಸ್ಟಿಕ್ಸ್ ತಂಡವು ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ ದೇವ್‌ದತ್ ಪಡಿಕಲ್ 25, ನಾಯಕ ಮನೀಷ್ ಪಾಂಡೆ 58, ಸಿ.ಎ. ಕಾರ್ತಿಕ್ 38 ರನ್ ಗಳ ನೆರವಿನಿಂದ 164 ರನ್‌ಗಳನ್ನು ಕಲೆ ಹಾಕಿತು. ಈ ಮೊತ್ತವನ್ನು ಬೆನ್ನತ್ತಿದ್ದ ಮಂಗಳೂರು ಯುನೈಟೆಡ್ ತಂಡದ ಪರ ಅಭಿನವ್ ಮನೋಹರ್ 51 ರನ್ ಗಳಿಸಿರುವುದು ಬಿಟ್ಟರೇ ಬೇರೆ ಯಾವ ಆಟಗಾರರು ಗುಲ್ಬರ್ಗ ಮೈಸ್ಟಿಕ್ಸ್ ತಂಡದ ಮಾರಕ ಬೌಲಿಂಗ್‌ಗೆ ಹೆಚ್ಚು ಒತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಮೈಸ್ಟಿಕ್ಸ್ ಪರ ಬೌಲರ್‌ಗಳಾದ ಕುಶಾಲ್ ವಾದ್ವಾನಿ 3, ಪ್ರಣವ್ ಭಾಟಿಯಾ ಮತ್ತು ಅಜಿತ್ ಕಾರ್ತಿಕ್ ತಲಾ ಎರಡು ವಿಕೆಟ್ ಹಾಗೂ ವಿದ್ವತ್ ಕಾವೇರಪ್ಪ ಮತ್ತು ರಿತೇಶ್ ಭಟ್ಕಳ್ ತಲಾ ಒಂದು ವಿಕೆಟ್ ಪಡೆಯುವ ಮೂಲಕ ಬಾಕಿ 26 ರನ್ ಇರುವಂತೆ ಮಂಗಳೂರು ಯುನೈಟೆಡ್ ತಂಡವನ್ನು ಆಲ್ ಔಟ್ ಮಾಡುವ ಮೂಲಕ ಭರ್ಜರಿ ಜಯ ಸಾಧಿಸಲು ನೆರವಾದರೂ. ಆಲ್ ರೌಂಡರ್ ಪ್ರದರ್ಶನ ನೀಡಿದ ಅಜಿತ್ ಕಾರ್ತಿಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಭಾರತದ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಎಸ್‌ಎಂಪಿ ಡೆವಲಪರ್ಸ್ ಮಾಲೀಕರಾದ ಪ್ರಕಾಶ್ ನೇತೃತ್ವದಲ್ಲಿ ಮೈಸೂರಿನ ಸಿದ್ಧಾರ್ಥ ಬಡಾವಣೆಯ ಸಂಗೀತ ಕಾರ್ನರ್‌ನಲ್ಲಿ ಏರ್ಪಡಿಸಲಾಗಿತ್ತು. ಟಿ.ನರಸೀಪುರ ಶಾಸಕ ಅಶ್ವಿನ್‌ಕುಮಾರ್ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯೆ ಅಶ್ವಿನಿ ಅನಂತು, ರೂಪಾ ಯೋಗೇಶ್, ಬಿಎಂ ರಾಮು, ಎಸ್‌ಜೆ ನಾಗರಾಜು, ಎಂಆರ್ ನಾಗರಾಜ್, ಸಿ.ಸೋಮಶೇಖರ್, ಹರೀಶ್, ಎಸ್.ಪ್ರಕಾಶ್, ಸುಜಾತ ನಾಗರಾಜು ಇತರರು ಉಪಸ್ಥಿತರಿದ್ದರು.

ಪಾಲಿಸಿ ಲ್ಯಾಪ್ಸ್ : ಪಾಲಿಸಿದಾರನಿಗೆ ಪರಿಹಾರ ಕಲ್ಪಿಸಲು ಎಲ್‌ಐಸಿಗೆ ಹೈಕೋರ್ಟ್ ಆದೇಶ

ಲೋಕ ಅದಾಲತ್ 20 ಸಾವಿರ ಪರಿಹಾರ, 431 ರೂ. ದಂಡವನ್ನು ಶೇ.9ರಷ್ಟು ಬಡ್ಡಿಯೊಂದಿಗೆ ಪಾವತಿಸುವಂತೆ ನೀಡಿದ ಆದೇಶ ಎತ್ತಿ ಹಿಡಿದ 'ಹೈ'

ಮೈಸೂರು, ಆ.19–ಪ್ರೀಮಿಯಂಗಾಗಿ ಪಾವತಿಸಿದ್ದ ಚೆಕ್ ಬೌನ್ಸ್ ಆಗಿರುವ ಬಗ್ಗೆ ಪಾಲಿಸಿದಾರನಿಗೆ ಮಾಹಿತಿ ನೀಡದೇ ಪಾಲಿಸಿ ಲ್ಯಾಪ್ಸ್ ಮಾಡಿದ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ)ವು ಪಾಲಿಸಿದಾರನಿಗೆ 20 ಸಾವಿರ ರೂ. ಪರಿಹಾರ ನೀಡಬೇಕೆಂದು ಲೋಕ್ ಅದಾಲತ್ ನೀಡಿದ್ದ ತೀರ್ಪನ್ನು ಹೈಕೋರ್ಟ್ ಎತ್ತಿ ಹಿಡಿದಿದೆ



ವಿವರ: ಮೈಸೂರಿನ ರಾಜೀವನಗರ ನಿವಾಸಿ ನದೀಂ ಅಹಮದ್ ಖಾನ್ ಅವರು ಎಲ್‌ಐಸಿಯಲ್ಲಿ ಪಾಲಿಸಿ ಹೊಂದಿದ್ದು, ವರ್ಷಕ್ಕೊಮ್ಮೆ ಪ್ರೀಮಿಯಂ ಪಾವತಿಸುತ್ತಿದ್ದರು. 2010ರ ಡಿ.2ರಂದು ನದೀಂ 6514 ರೂ.ಗಳ ಚೆಕ್ ಅನ್ನು ಪ್ರೀಮಿಯಂಗಾಗಿ ಎಲ್‌ಐಸಿಗೆ ಸಲ್ಲಿಸಿದ್ದರು.

ಆದರೆ 6 ತಿಂಗಳ ನಂತರ ಪ್ರೀಮಿಯಂ ಹಣ ಪಾವತಿಸದ ಕಾರಣ ಪಾಲಿಸಿ ಲಾಪ್ಸ್ ಆಗಿದೆ ಎಂದು ಎಲ್‌ಐಸಿಯಿಂದ ನದೀಂ ಅವರಿಗೆ ಪತ್ರ ಬಂದಿತ್ತು. ಅವರು ಎಲ್‌ಐಸಿ ಕಚೇರಿಗೆ ತೆರಳಿ ವಿಚಾರಿಸಿದಾಗ ಸಹಿ ಹೊಂದಾಣಿಕೆಯಾಗಿಲ್ಲವೆಂದು ಬ್ಯಾಂಕ್‌ನಿಂದ ಚೆಕ್ ಬೌನ್ಸ್ ಆಗಿದೆ ಎಂಬ ಮಾಹಿತಿ ಎಲ್‌ಐಸಿ ಅಧಿಕಾರಿಗಳಿಂದ ಬಂತು. ಅಲ್ಲದೇ ಬೌನ್ಸ್ ಆಗಿರುವ ಚೆಕ್ ಅನ್ನು ಸ್ಪೀಡ್ ಪೋಸ್ಟ್ ಮುಖಾಂತರ ನದೀಂ ಅವರ ವಿಳಾಸಕ್ಕೆ ಕಳುಹಿಸಲಾಗಿದೆ ಎಂದೂ ಅಧಿಕಾರಿಗಳು ತಿಳಿಸಿದ್ದರು. ಬೇರೆ ದಾರಿ ಕಾಣದೇ ನದೀಂ 431 ರೂ. ದಂಡದೊಂದಿಗೆ ಪ್ರೀಮಿಯಂ ಮೊತ್ತ ಪಾವತಿಸಿ, ಪಾಲಿಸಿಯನ್ನು ನವೀಕರಣ ಮಾಡಿಕೊಂಡಿದ್ದರು. ಆದರೆ ನದೀಂ ಅವರಿಗೆ ಸ್ಪೀಡ್ ಪೋಸ್ಟ್ ಮೂಲಕ ಚೆಕ್ ತಲುಪಿರಲಿಲ್ಲ. ತಮ್ಮ ಚೆಕ್ ಬೌನ್ಸ್ ಆಗಿದೆಯೇ ಎಂಬುದನ್ನು ಪರಿಶೀಲಿಸಲು ಅವರು ಪಾಸ್‌ಬುಕ್ ಎಂಟ್ರಿ ಮಾಡಿದಾಗ ಚೆಕ್ ಬೌನ್ಸ್ ಶುಲ್ಕ ಕಡಿತವಾಗದಿರುವುದು ಗೊತ್ತಾಗಿದೆ.

ಈ ಹಿನ್ನೆಲೆಯಲ್ಲಿ ಅವರು ಮೈಸೂರು ಲೋಕ್ ಅದಾಲತ್‌ನಲ್ಲಿ ಎಲ್‌ಐಸಿ ವಿರುದ್ಧ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ಲೋಕ್ ಅದಾಲತ್ ಅಧ್ಯಕ್ಷರು, ಚೆಕ್ ಬೌನ್ಸ್ ಆಗಿರುವ ಬಗ್ಗೆ ಪಾಲಿಸಿದಾರರಿಗೆ ಎಲ್‌ಐಸಿಯಿಂದ ಅಧಿಕೃತವಾಗಿ ಮಾಹಿತಿಯನ್ನೇ ನೀಡಿಲ್ಲ ಎಂಬ ನಿರ್ಧಾರಕ್ಕೆ ಬಂದರು. ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಿದ ಚೆಕ್ ಪಾಲಿಸಿದಾರನಿಗೆ ತಲುಪದೇ ಇರುವ ಬಗ್ಗೆ 3 ತಿಂಗಳ ಒಳಗಾಗಿ ಅಂಚೆ ಇಲಾಖೆಗೆ ದೂರು ನೀಡದೇ ಇದ್ದದ್ದು ಎಲ್‌ಐಸಿಯ ಸೇವಾ ನ್ಯೂನತೆ ಎಂದು ಪರಿಗಣಿಸಿದ ಲೋಕ್ ಅದಾಲತ್ ಅಧ್ಯಕ್ಷ ಎನ್.ವಿ.ಧಾರವಾಡಕರ್, ಸದಸ್ಯರಾದ ಸಿ.ಬೋರೇಗೌಡ ಮತ್ತು ಶ್ರೀಮತಿ ಅನಿತಾ ಎನ್.ಜೋಷಿ ಅವರು ಎಲ್‌ಐಸಿಯು ಪಾಲಸಿದಾರ ನದೀಂ ಅವರಿಗೆ 20 ಸಾವಿರ ರೂ. ಪರಿಹಾರ ಹಾಗೂ ಅವರು ಪಾವತಿಸಿದ್ದ ದಂಡದ ಮೊತ್ತ 431 ರೂ.ಗಳನ್ನು ಶೇ.9ರಷ್ಟು ಬಡ್ಡಿಯೊಂದಿಗೆ ನೀಡಬೇಕು ಎಂದು 2014ರ ಮಾ.21ರಂದು ಆದೇಶ ನೀಡಿದ್ದರು.

ಈ ಆದೇಶವನ್ನು ಪ್ರಶ್ನಿಸಿ ಎಲ್‌ಐಸಿ ಹೈಕೋರ್ಟ್ ಮೊರೆ ಹೋಗಿದ್ದು, ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಅನಂತರಾಮನಾಥ್ ಹೆಗ್ಡೆ ಅವರು ಲೋಕ್ ಅದಾಲತ್ ತೀರ್ಪನ್ನು ಎತ್ತಿ ಹಿಡಿದು, ಎಲ್‌ಐಸಿ ಸಲ್ಲಿಸಿದ್ದ ಅರ್ಜಿಯನ್ನು ಇದೇ ಜೂನ್ 10ರಂದು ವಜಾ ಮಾಡಿ ತೀರ್ಪು ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಶನಿವಾರ 20 ಆಗಸ್ಟ್ 2022

ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ

ಮಡಿಕೇರಿ ಎಸ್ಪಿ ಕಚೇರಿ ಮುಂದೆ ಕಾಂಗ್ರೆಸ್ ಪ್ರತಿಭಟನೆ

ಸರ್ಕಾರ, ಪೊಲೀಸ್ ಇಲಾಖೆ ವಿರುದ್ಧ ಆಕ್ರೋಶ



ಮಡಿಕೇರಿ,ಆ.19– ಕೊಡಗು ಜಿಲ್ಲೆಯ ಮಳೆ ಹಾನಿ ಪ್ರದೇಶ ವೀಕ್ಷಣೆಗೆ ಆಗಮಿಸಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣದ ಆರೋಪಿಗಳನ್ನು ತಕ್ಷಣವೇ ಬಂಧಿಸುವಂತೆ ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಜಮಾಯಿಸಿದ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ಇಲಾಖೆ ವಿರುದ್ಧವೂ ಅಸಮಾಧಾನ ಹೊರಹಾಕಿದ ಪ್ರತಿಭಟನಾಕಾರರು ಪೊಲೀಸ್ ಇಲಾಖೆ ಮಾಜಿ ಮುಖ್ಯಮಂತ್ರಿಗೆ ಸೂಕ್ತ ಭದ್ರತೆ ನೀಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. ಬೆಂಗಾವಲು ವಾಹನಗಳ ಸಂಚಾರಕ್ಕೆ ತಡೆ ಒಡ್ಡಿರುವುದು, ಕಪ್ಪು ಬಾವುಟ ಪ್ರದರ್ಶನ ಮಾಡಿರುವುದು, ಮೊಟ್ಟೆ ಎಸೆದು ಮಾಜಿ ಮುಖ್ಯಮಂತ್ರಿಗಳ ಸ್ಥಾನಕ್ಕೆ ಅಗೌರವ ತೋರಿದ

ಕಾಂಗ್ರೆಸ್ ವಕ್ತಾರ ಹಾಗೂ ಪಕ್ಷದ ಜಿಲ್ಲಾ ಉಸ್ತುವಾರಿ ಲಕ್ಷ್ಮಣ್ ಮಾತನಾಡಿ, ಆ.26 ರಂದು ನಡೆಯುವ ಹೋರಾಟದಲ್ಲಿ ಕಾಂಗ್ರೆಸ್‌ನ 70 ಎಂಎಲ್ ಎಗಳು, 20 ಎಂಎಲ್ ಸಿಗಳು ಸೇರಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯ ಉಸ್ತುವಾರಿ ಸುರ್ಜೇವಾಲ ಕೂಡ ಮಡಿಕೇರಿಗೆ ಭಾಗವಹಿಸಲಿದ್ದಾರೆ ಎಂದರು.

ಎಲ್ಲಾ ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಗುರುವಾರ ನಡೆದ ಘಟನೆಯನ್ನು ಖಂಡಿಸಿ ಆ.26ರಂದು ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರು 'ಮಡಿಕೇರಿ ಚಲೋ' ನಡೆಸಿ ಎಸ್.ಪಿ. ಕಚೇರಿಗೆ ಘೇರಾವ್ ಹಾಕಲಿದ್ದಾರೆ ಎಂದು ಇದೇ ಸಂದರ್ಭ ಕಾಂಗ್ರೆಸ್ ಮುಖಂಡರು ಘೋಷಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೆ.ಕೆ.ಮಂಜುನಾಥ್ ಕುಮಾರ್, ಉತ್ತರ ನೆಲ್ಲಿ ನಡೆದ ಘಟನೆ ಬಿಜೆಪಿ ಸರ್ಕಾರದ ಪ್ರಾಯೋಜಕ ಸಂಚಾಗಿದೆ ಎಂದರು.

ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಮಾತನಾಡಿ, ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ಸಿಗರನ್ನು ಅಂದು ಬ್ರಿಟಿಷರು ಬಂಧಿಸಿ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಿದ್ದರು. ಇದೀಗ ಪೊಲೀಸರು ಕೂಡ ನಮ್ಮ ವಿರುದ್ಧ ನಡೆದುಕೊಳ್ಳುತ್ತಿದ್ದು, ಮತ್ತೊಮ್ಮೆ ಬ್ರಿಟಿಷ್ ಆಡಳಿತ ನೆನಪಾಗುತ್ತಿದೆ. ಪೊಲೀಸ್ ಇಲಾಖೆಗೆ ನೈತಿಕತೆ ಇದ್ದಲ್ಲಿ ಮೊಟ್ಟೆ ಎಸೆದವರನ್ನು ಬಂಧಿಸಲಿ ಎಂದು ಸವಾಲೆಸೆದರು.

ತಿತಿಮತಿಯಲ್ಲಿ ಸಿದ್ದರಾಮಯ್ಯ ಅವರಿದ್ದ ವಾಹನವನ್ನು ನಿರ್ಬಂಧ ಮಾಡಿರುವ ಯತ್ನವಾಗಿತ್ತು. ಈ ಸಂದರ್ಭ ಸಿದ್ದರಾಮಯ್ಯ ಅವರ ಮೇಲೆ ಮಾರಣಾಂತಿಕ ಹಲ್ಲೆ ಸಂಭವಿಸುವ ಸಾಧ್ಯತೆಯೂ ಇತ್ತು ಎಂದು ಆತಂಕ ವ್ಯಕ್ತಪಡಿಸಿದ ಪೊನ್ನಣ್ಣ, ಬಿಜೆಪಿ ಸ್ವಾರ್ಥ ರಾಜಕಾರಣ ಮಾಡುತ್ತಿದೆ, ಪೊಲೀಸ್ ಇಲಾಖೆಯನ್ನು ಸ್ವತಂತ್ರವಾಗಿ ಕರ್ತವ್ಯನಿರ್ವಹಣೆ ಮಾಡಲು ಬಿಡುತ್ತಿಲ್ಲ ಎಂದು ಆರೋಪಿಸಿದರು. ಈ ಎಲ್ಲಾ ಘಟನೆಗಳಿಗೆ ಉತ್ತರವಾಗಿ ಆ.26ರಂದು 'ಕೊಡಗು ಚಲೋ' ಮೂಲಕ ಕಾಂಗ್ರೆಸ್ ಶಕ್ತಿ ಪ್ರದರ್ಶನ ಮಾಡಲಿದೆ ಎಂದು ಘೋಷಿಸಿದರು.

ಕಾಂಗ್ರೆಸ್ ಮುಖಂಡ ವಕೀಲ ಹೆಚ್.ಎಸ್.ಚಂದ್ರಮೌಳಿ, ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಟಿ.ಪಿ.ರಮೇಶ್, ಯುವ ಮುಖಂಡ ಡಾ.ಮಂಥರ್ ಗೌಡ, ವಿ.ಪಿ.ಶಶಿಧರ್ ಮಾತನಾಡಿದರು.

ವಿಧಾನಪರಿಷತ್ ಮಾಜಿ ಸದಸ್ಯ ಶಾಂತೆಯಂಡ ವೀಣಾ ಅಚ್ಚಯ್ಯ, ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಕೆ.ಕೆ.ಮಂಜುನಾಥ್ ಕುಮಾರ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಿಥುನ್ ಗೌಡ, ಕೆಪಿಸಿಸಿ ಪ್ರಮುಖರಾದ ಕೆ.ಪಿ.ಚಂದ್ರಕಲಾ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಂಸ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ರೆಹಮಾನ್, ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಸೂರಜ್ ಹೊಸೂರು ಇತರರು ಇದ್ದರು.

ಎಸ್ಪಿಯಿಂದ ಸೂಕ್ತ ಕ್ರಮದ ಭರವಸೆ

ಮೊಟ್ಟೆ ಎಸೆತ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಎಂ.ಎ.ಅಯ್ಯಪ್ಪ ಭರವಸೆ ನೀಡಿದರು. ಕಾಂಗ್ರೆಸ್ ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಪೊಲೀಸ್ ವರಿಷ್ಠಾಧಿಕಾರಿ, ಪ್ರಮುಖರೊಂದಿಗೆ ಚರ್ಚೆ ನಡೆಸಿದರು. ಘಟನೆಯ ಕುರಿತು ವಿಷಾದ ವ್ಯಕ್ತಪಡಿಸಿದ ಎಸ್.ಪಿ.ಅಯ್ಯಪ್ಪ, ಪೊಲೀಸ್ ಇಲಾಖೆ ಯಾವುದೇ ನಿರ್ಲಕ್ಷ್ಯ ವಹಿಸಿಲ್ಲ. ವಿಪಕ್ಷ ನಾಯಕರಿಗೆ ಸೂಕ್ತ ಭದ್ರತೆ ನೀಡಬೇಕಾಗಿರುವುದು ನಮ್ಮ ಕರ್ತವ್ಯ. ಮೊಟ್ಟೆ ಎಸೆದ ಘಟನೆಗೆ ಸಂಬಂಧಿಸಿದಂತೆ ಮಡಿಕೇರಿ ಹಾಗೂ ಕುಶಾಲನಗರದಲ್ಲಿ ಪೊಲೀಸ್ ಪ್ರಕರಣ ದಾಖಲಾಗಿದೆ. ಕೆಲವು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಈ ಸಂದರ್ಭ ಪ್ರತಿಭಟನಾನಿರತರು ಸೆಕ್ಷನ್ 307 ಅಡಿ ಪ್ರಕರಣ ದಾಖಲಿಸುವಂತೆ ಆಗ್ರಹಿಸಿದ ಘಟನೆಯೂ ನಡೆಯಿತು. ಎಸ್.ಪಿ. ಕಚೇರಿ ಸುತ್ತ ಪೊಲೀಸ್ ಸರ್ಪಗಾವಲು ಮೂಲಕ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಗುಡ್ಡೆಹೊಸೂರಿನಲ್ಲಿ ಮೊಟ್ಟೆ ಎಸೆದಿದ್ದು ಕಾಂಗ್ರೆಸ್ ಕಾರ್ಯಕರ್ತ

ಮಡಿಕೇರಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಗುಡ್ಡೆಹೊಸೂರಿನಲ್ಲಿ ಮೊಟ್ಟೆ ಎಸೆದ ವ್ಯಕ್ತಿ ಕಾಂಗ್ರೆಸ್ ಪಕ್ಷದ ವ್ಯಕ್ತಿಯೇ ಹೊರತು ಬಿಜೆಪಿ ವ್ಯಕ್ತಿ ಅಲ್ಲ ಎಂದು ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅನಗತ್ಯವಾಗಿ ಬಿಜೆಪಿ ವಿರುದ್ಧ ಆರೋಪ ಹೊರಿಸಿ ಪ್ರಚಾರ ಗಿಟ್ಟಿಸಲು ಮುಂದಾಗಿದೆ. ಮೊಟ್ಟೆ ಎಸೆದವನು ಕಾಂಗ್ರೆಸ್ ಪಕ್ಷದವನು ಎಂದು ಈಗಾಗಲೇ ಪೊಲೀಸ್ ತನಿಖೆಯಲ್ಲಿ ಕೂಡ ಗೊತ್ತಾಗಿದೆ ಎಂದು ಹೇಳಿದರು.

ಪದ ಬಳಕೆ ಎಚ್ಚರಿಕೆ: ಕಾಂಗ್ರೆಸ್ ನಾಯಕರು ಪೊಲೀಸ್ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸುವ ಸಂದರ್ಭ ಶಾಸಕರ ಬಗ್ಗೆ ಅಸಭ್ಯ ಪದ ಬಳಸಿರುವುದನ್ನು ವಿರಾಜಪೇಟೆ ಕ್ಷೇತ್ರ ಶಾಸಕ ಬೋಪಯ್ಯ ಖಂಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಬೋಪಯ್ಯ, ಸಂಸ್ಕೃತಿ ಮರೆತು ಅಸಭ್ಯ ಪದ ಬಳಕೆ ಮಾಡಿ ತಮ್ಮ ಸಂಸ್ಕೃತಿ ಏನೆಂಬುದನ್ನು ಕಾಂಗ್ರೆಸ್ ಮುಖಂಡರು ತೋರಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಾದಿ ಬೀದಿಲಿ ಹೋಗುವವರ ಟೀಕೆ ಬಗ್ಗೆ ಪ್ರತಿಕ್ರಿಯೆ ಮಾಡಲಾರೆ ಎಂದು ಬೋಪಯ್ಯ ಹೇಳಿದ್ದಾರೆ.

ಮುಂದಿನ ಶುಕ್ರವಾರ ನನ್ನ ಮನೆ ಮುಂದೆ ಪ್ರತಿಭಟನೆ ಮಾಡುವುದಾಗಿ ಕೆಲವು ಕಾಂಗ್ರೆಸ್ಸಿಗರು ಹೇಳಿದ್ದಾರಂತೆ. ಇಂತಹವರು ನನ್ನ ಮನೆ ಮುಂದೆ ಬಂದರೆ ನನ್ನ ಮನೆ ನಾಯಿಗಳು ಅವರನ್ನು ಸ್ವಾಗತಿಸುತ್ತವೆ. ಎಚ್ಚರಿಕೆ ಇರಲಿ ಎಂದು ಶಾಸಕ ಕೆಜಿ.ಬೋಪಯ್ಯ ಗುಡುಗಿದ್ದಾರೆ.

ಮೊಟ್ಟೆ ಎಸೆತಕ್ಕೂ, ಬಿಜೆಪಿಗೂ ಸಂಬಂಧವಿಲ್ಲ

ಮಡಿಕೇರಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದ ಪ್ರಕರಣಕ್ಕೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ ಎಂದು ಬಿಜೆಪಿ ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಎಂ.ಜಿ.ದರ್ಶನ್ ಜೋಯಪ್ಪ ಸ್ಪಷ್ಟಪಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು ಏನೂ ಅರಿಯದೆ ತಪ್ಪು ಮಾಡಿದವರನ್ನು ಜನತೆ ಕ್ಷಮಿಸುತ್ತಾರೆ. ಆದರೆ ಎಲ್ಲವನ್ನು ಅರಿತು ತಪ್ಪು ಮಾಡಿದವರು ಪಶ್ಚಾತ್ತಾಪ ಪಡುವ ಮೂಲಕ ಪಾಠ ಕಲಿಯಬೇಕು ಎನ್ನುವುದು ಜಿಲ್ಲೆಯ ಜನರ ಅಭಿಪ್ರಾಯವಾಗಿದೆ ಎಂದು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆಯಾಗಿ ಬೆಟ್ಟಗುಡ್ಡಗಳು ಕುಸಿದು, ಪ್ರವಾಹ ಬಂದು ರೈತರು, ಬಡವರು, ಕಾರ್ಮಿಕರು, ಮನೆ, ಆಸ್ತಿಯನ್ನು ಕಳೆದುಕೊಂಡು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಾಗ ಜವಾಬ್ದಾರಿಯುತ ವಿರೋಧ ಪಕ್ಷದ ನಾಯಕರಾಗಿದ್ದುಕೊಂಡವರು ಸಂತ್ರಸ್ತರ ಸಂಕಷ್ಟಕ್ಕೆ ಸ್ಪಂದಿಸದೆ ಕೋಟಿ ಕೋಟಿ ಹಣ ವೆಚ್ಚ ಮಾಡಿ ಸಿದ್ದರಾಮೋತ್ಸವದಲ್ಲಿ ಪಾಲ್ಗೊಂಡಿದ್ದಾರೆ. ಆ ಮೂಲಕ ಕೊಡಗು ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಅಲ್ಲದೆ ಈ ಹಿಂದೆ ಕೊಡವರನ್ನು ಗೋಮಾಂಸ ಭಕ್ಷಕರೆಂದು ನಿಂದಿಸುವ ಹೇಳಿಕೆ ಮತ್ತು ಇತ್ತೀಚಿನಲ್ಲಿ ಜಯಂತಿಗಳ ಆಚರಣೆ ಇಲ್ಲದಿದ್ದರೂ ಮತಾಂಧ ಟಿಪ್ಪುವಿನ ಜಯಂತಿ ಆಚರಿಸಿರುವುದು ಕೊಡಗಿನ ಜನರ ಮನಸ್ಸಿಗೆ ನೋವುಂಟು ಮಾಡಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಡವೆ ಬೇಟೆ: ಇಬ್ಬರ ಬಂಧನ, ಕೋವಿ ವಶ

ಸಿದ್ದಾಪುರ/ಮಡಿಕೇರಿ,ಆ.19– ತೋಟದ ಮನೆ ಮುಂದೆ ಬಂದ ಕಡವೆಯನ್ನು ಗುಂಡು ಹೊಡೆದು ಹತ್ಯೆ ಮಾಡಿದ ಇಬ್ಬರು ಆರೋಪಿಗಳನ್ನು ಮಾಲು ಸಹಿತ ವಶಕ್ಕೆ ಪಡೆಯುವಲ್ಲಿ ಮಡಿಕೇರಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಮೂರ್ನಾಡು ಐಕೊಳ ನಿವಾಸಿಗಳಾದ ಅಜ್ಮಲ್ ಅಜೀಜ್ (48), ಹಮೀದ್(35) ಬಂಧಿತ ಆರೋಪಿಗಳು.



ಮೂರ್ನಾಡು ಗ್ರಾಮದಲ್ಲಿ ಕಡವೆಯನ್ನು ಕೊಂದು ಅದನ್ನು ಮಾಂಸ ಮಾಡುತ್ತಿರುವ ಬಗ್ಗೆ ಮಡಿಕೇರಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಶುಕ್ರವಾರ ಬೆಳಿಗ್ಗೆ 9 ಗಂಟೆ ವೇಳೆಯಲ್ಲಿ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ದಾಳಿ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿಗಳು ಐಕೊಳ ಗ್ರಾಮದ ಕಾಫಿ ತೋಟದ ಒಳಗೆ ಕಡವೆ ಮಾಂಸ ಮಾಡುತ್ತಿರುವವರನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ.

ಈ ಸಂದರ್ಭ ಸ್ಥಳದಲ್ಲಿದ್ದ 120 ಕೆಜಿ. ಕಡವೆ ಮಾಂಸ, ಕೃತ್ಯಕ್ಕೆ ಬಳಸಿದ್ದ ಬಂದೂಕು, ಕತ್ತಿಗಳು, ಚಾಕು, ಪ್ಲಾಸ್ಟಿಕ್ ಹೊದಿಕೆ ಮಾಂಸ ತುಂಬಲು ಬಳಸಿದ್ದ ಬಕೆಟ್ ಅನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮಡಿಕೇರಿ ವಲಯ ಅರಣ್ಯ ಇಲಾಖೆ ವನ್ಯ ಜೀವಿ ಸಂರಕ್ಷಣಾ ಅಧಿಕಾರಿ ಮಧುಸೂದನ್ ಮಾಹಿತಿ ನೀಡಿದ್ದಾರೆ. ಪ್ರಕರಣದಲ್ಲಿ ಇನ್ನು ಕೆಲವು ವ್ಯಕ್ತಿಗಳು ಶಾಮೀಲಾಗಿರುವ ಶಂಕೆ ಇದ್ದು, ತನಿಖೆ ಮುಂದುವರೆದಿದೆ. ಬಂಧಿತ ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗುತ್ತದೆ ಎಂದು ಹೇಳಿದ್ದಾರೆ.



ಗುಡ್ಡಪ್ಪನ ಆಹ್ವಾನ ಪೂಜೆ ವೇಳೆ ಚೊಟ್ಟನಹಳ್ಳಿ

ಗ್ರಾಮಸ್ಥ ನಿಗೂಢ ನಾಪತ್ತೆ ತಲೆನೋವು

ಮಂಡ್ಯ, ಆ.19– ಅದು ಶ್ರೀರಂಗಪಟ್ಟಣ ತಾಲೂಕಿನ ಚೊಟ್ಟನಹಳ್ಳಿ ಗ್ರಾಮ. ಕಳೆದ ಆಗಸ್ಟ್ 12ರಂದು ರಾತ್ರಿ ಈ ಗ್ರಾಮದಲ್ಲಿ ಗುಡ್ಡಪ್ಪನ ಆಹ್ವಾನಿಸುವ ಪೂಜೆ ಸಂಭ್ರಮದಿಂದ ನಡೆಯುತ್ತಿತ್ತು. ಈ ಪೂಜೆ ರಾತ್ರಿಯಿಂದ ಬೆಳಗ್ಗೆ 6 ಗಂಟೆವರೆಗೂ ನಡೆಯುತ್ತದೆಯಾದರೂ ಈ ಗ್ರಾಮದ ರೇಷ್ಮೆ ಹುಳು ಸಾಕಾಣಿಕೆದಾರ ಸಿ.ಟಿ. ಮನು (33) ರಾತ್ರಿ 1.30ರಲ್ಲೇ ಪೂಜೆ ನಡೆಯುತ್ತಿದ್ದ ಕೊಳದ ಬಳಿಯಿಂದ ಮನೆಗೆ ಹಿಂದಿರುಗಿದ್ದ. ಆತನ ಮನೆಯವರು ಕೊಳದ ಬಳಿಯೇ ಇದ್ದರು.

ಪೂಜೆ ಮುಗಿಸಿ ಆಗಸ್ಟ್ 13ರಂದು ಬೆಳಗ್ಗೆ 6 ಗಂಟೆ ಸುಮಾರಿನಲ್ಲಿ ಆತನ ಪತ್ನಿ ಹಾಗೂ ಸಹೋದರ ಸಿ.ಟಿ. ಮಧುಸೂದನ ಮನೆಗೆ ಬಂದಾಗ ರೇಷ್ಮೆ ಹುಳು ಮನೆ ಹತ್ತಿರ ಹಾಲ್‌ನಲ್ಲಿ ಮನುವಿನ ಬೈಕ್ ಕೀ ಬಿದ್ದಿತ್ತು. ಇದ್ಯಾಕೆ ಕೀ ಇಲ್ಲಿ ಬಿದ್ದಿದೆ ಎಂದು ನೋಡುತ್ತಿದ್ದಂತೆಯೇ ಅಲ್ಲಲ್ಲಿ ರಕ್ತದ ಕಲೆಗಳು. ಅದು ಮಾತ್ರವಲ್ಲದೆ ರಾತ್ರಿ ಮನು ಧರಿಸಿದ್ದ ಶರ್ಟ್ ಹರಿದು ನೆಲದ ಮೇಲೆ ಬಿದ್ದಿತ್ತು. ಬೊಕ್ಕ ತಲೆಯ ಮನು ಧರಿಸಿದ್ದ ವಿಗ್ ಹಾಗೂ ಏರ್‌ಫೋನ್ ಕೂಡ ಸ್ವಲ್ಪ ದೂರದಲ್ಲೇ ಬಿದ್ದಿತ್ತಲ್ಲದೆ, ಮೊಬೈಲ್ ಒಡೆದು ಹಾಕಲಾಗಿತ್ತು.

ಮನೆ ಮಂದಿಗೆಲ್ಲಾ ಗಾಬರಿ. ಮನು ಲೇವಾದೇವಿ ವ್ಯವಹಾರ ಕೂಡ ಮಾಡುತ್ತಿದ್ದ. ಹಾಗಾಗಿ ಅವರ ಆತಂಕ ಜಾಸ್ತಿಯಾಗಿತ್ತು. ಮನೆಯೊಳಗೆ ಬಂದರೆ ಮನು ಬರೆದಿದ್ದ ಪತ್ರ ಕಣ್ಣಿಗೆ ಬಿತ್ತು. ಅದರಲ್ಲಿ ತನ್ನಿಂದ ಸಾಲ ಪಡೆದಿರುವ ಪಿ.ಹಳ್ಳಿ ಗ್ರಾಮದ ಸುಪ್ರಿಯಾ, ಆಕೆಯ ತಾಯಿ ಭಾರತಿ, ತಂದೆ ದೇವೇಗೌಡ, ವಿನು ಮತ್ತು ಪ್ರಭು ಎಂಬುವರು ಹಣ ವಾಪಸ್ ಕೇಳಿದರೆ ಕೊಲೆ ಬೆದರಿಕೆ ಹಾಕುತ್ತಿದ್ದಾರೆ. ಅವರಿಂದ ನನಗೆ ತುಂಬಾ ಭಯವಾಗಿದೆ ಎಂದು ಬರೆದಿತ್ತು. ಜೊತೆಗೆ ಸುಪ್ರಿಯಾ ಕುಟುಂಬದವರು ಮೊಬೈಲ್ ಕರೆಯಲ್ಲಿ ಬೆದರಿಕೆ ಹಾಕಿರುವ ರೆಕಾರ್ಡ್ ಕೂಡ ದೊರೆತಿತ್ತು.

ಇದನ್ನೆಲ್ಲಾ ನೋಡಿ ಇಡೀ ಕುಟುಂಬದವರು ಗರ ಬಡಿದಂತೆ ದಿಕ್ಕು ತೋಚದೆ ನಿಂತಿದ್ದರೆ, ವಿಷಯ ಹರಡಿ ಗ್ರಾಮಸ್ಥರೆಲ್ಲಾ ಮನೆ ಬಳಿ ಜಮಾಯಿಸಿದರು. ಮನುವನ್ನು ಯಾರೋ ದುಷ್ಕರ್ಮಿಗಳು ಅಪಹರಿಸಿ ಕೊಲೆ ಮಾಡಿದ್ದಾರೆ ಎಂದು ಚೊಟ್ಟನಹಳ್ಳಿ ಮಾತ್ರವಲ್ಲದೆ ಸುತ್ತಮುತ್ತಲ ಗ್ರಾಮಗಳಲ್ಲೂ ಹರಡಿಬಿಟ್ಟಿತ್ತು. ಬೆಳಗ್ಗೆ 11 ಗಂಟೆ ಸುಮಾರಿಗೆ ಮನು ಸಹೋದರ ಮಧುಸೂದನ ಅರಕೆರೆ ಠಾಣೆಗೆ ತೆರಳಿ ಅಪಹರಣ ಪ್ರಕರಣ ದಾಖಲಿಸಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಬಂದೋಬಸ್ತ್ ಬಗ್ಗೆ ಪೂರ್ವ ತಯಾರಿಯಲ್ಲಿದ್ದ ಶ್ರೀರಂಗಪಟ್ಟಣ ಡಿವೈಎಸ್ಪಿ ಸಂದೇಶ್‌ಕುಮಾರ್ ಅವರಿಗೆ ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮಕ್ಕೆ ದೌಡಾಯಿಸಿದರು. ಅವರು

ಪತ್ರ ಬರೆದು ನಾಪತ್ತೆಯಾಗಿರುವ ಮನು ಪತ್ತೆಗೆ ಪೊಲೀಸರ ಹರಸಾಹಸ

ಸ್ಥಳ ಪರಿಶೀಲನೆ ನಡೆಸುತ್ತಿರುವಾಗಲೇ ಗ್ರಾಮದ ನಾಲೆ ಬಳಿ ಮನುವಿನ ಚಪ್ಪಲಿಗಳು ಬಿದ್ದಿವೆ ಎಂಬ ಮಾಹಿತಿ ತಲುಪಿತು. ಹಲವಾರು ಅಪರಾಧ ಪ್ರಕರಣಗಳು ತನಿಖೆ ನಡೆಸಿರುವ ಸಂದೇಶ್‌ಕುಮಾರ್‌ಗೆ ಮನೆಯಲ್ಲಿದ್ದ ರಕ್ತದ ಕಲೆಗಳು ಮಾನವನ ರಕ್ತದ್ದಲ್ಲ ಎಂಬ ಸಂಶಯ ಬಂದಿದೆ. ಆದರೂ ಪ್ರಕರಣದ ತೀವ್ರತೆ ಅರಿತು ತನಿಖೆ ಆರಂಭಿಸಿದ್ದಾರೆ. ಜಿಲ್ಲಾ ಎಸ್ಪಿ ಯತೀಶ್ ಅವರಿಗೂ ವಿಷಯ ತಿಳಿಸಿ, ಅಪಹರಣ ಪ್ರಕರಣ ತನಿಖೆಗಾಗಿ ತಮ್ಮ ನೇತೃತ್ವದಲ್ಲಿ ತಂಡವೊಂದನ್ನು ರಚಿಸಿಕೊಂಡು ತಾಂತ್ರಿಕ ತನಿಖೆಗೆ ಇಳಿದರೆ ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಮನು ಸಿಮ್ ಚಾಲ್ತಿಯಲ್ಲಿತ್ತು.

ಆ ನಂತರ ಸದರಿ ಸಿಮ್ ಚಾಲನೆಯಲ್ಲಿ ಇರಲಿಲ್ಲ. ಮತ್ತೊಂದೆಡೆ ಮನು ತನ್ನ ಪತ್ರದಲ್ಲಿ ತಿಳಿಸಿದ್ದ ಹಾಗೂ ತನ್ನ ಸಹೋದರನ ಅಪಹರಣಕ್ಕೆ ಇವರೇ ಕಾರಣ ಎಂದು ಮಧುಸೂದನ್ ನಮೂದಿಸಿದ್ದ ಸುಪ್ರಿಯಾ ಕುಟುಂಬದವರು ಪಿ.ಹಳ್ಳಿಯ ತಮ್ಮ ಮನೆಯಲ್ಲಿಯೇ ಇದ್ದದ್ದು ಕಂಡುಬಂದಿದೆ. ಅವರನ್ನು ಕರೆದು ವಿಚಾರಿಸಿದರೆ ತಮಗೆ ಮನು 7.50 ಲಕ್ಷ ರೂ. ಕೊಡಬೇಕಾಗಿದೆ. ಅದಕ್ಕಾಗಿ ಅವನೊಂದಿಗೆ ಸ್ವಲ್ಪ ಒರಟಾಗಿ ಮಾತನಾಡಿದ್ದೇವೆ ಅಷ್ಟೇ. ನಮಗೆ ಮಾತ್ರವಲ್ಲ ಹಲವಾರು ಜನರಿಗೆ ಆತ ಹಣ ನೀಡದೆ ಸತಾಯಿಸುತ್ತಿದ್ದಾನೆ ಎಂದು ಹೇಳಿದ್ದಾರೆ.

ತನಿಖೆ ಮುಂದುವರೆದಂತೆ ಸಂದೇಶ್‌ಕುಮಾರ್ ತಂಡ ಮನು ಆಧಾರ್‌ಕಾರ್ಡ್ ವಿವರ ಪಡೆದು ಪರಿಶೀಲನೆಗಿಳಿದರೆ ಆತನ ಆಧಾರ್‌ಕಾರ್ಡ್ ನಂಬರ್ ದಾಖಲಿಸಿ 12 ಸಿಮ್‌ಗಳನ್ನು ಖರೀದಿಸಿರುವುದು ಗೊತ್ತಾಗಿದೆ. ಪದೇ ಪದೇ ಸಿಮ್‌ಗಳು ಬದಲಾವಣೆಯಾಗುತ್ತಿತ್ತು. ಒಮ್ಮೆ ಗೋವಾದಲ್ಲಿ ಸಿಮ್ ಕಾರ್ಯನಿರ್ವಹಿಸಿದ್ದು ತಿಳಿದು ಅಲ್ಲಿಗೆ ಒಂದು ತಂಡ ತೆರಳಿದರೆ, ಸದರಿ ಸಿಮ್ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಅಂದರೆ ಸದರಿ ಸಿಮ್ ಬಳಸಿದ ವ್ಯಕ್ತಿ ಗೋವಾದಿಂದ ಬೆಂಗಳೂರಿಗೆ ತೆರಳಿದ್ದಾನೆ.

ಸವಾಲಾಗಿ ಪರಿಣಮಿಸಿರುವ ಈ ಪ್ರಕರಣವನ್ನು ಭೇದಿಸಲು ಪೊಲೀಸರು ಹರಸಾಹಸ ಪಡುತ್ತಿದ್ದಾರೆ. ಮನುವನ್ನು ಸುಪ್ರಿಯಾ ಕುಟುಂಬದವರು ಅಪಹರಣ ಮಾಡಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆಯಂತೆ. ಇನ್ನು ಪೊಲೀಸರಿಗೆ ದೊರೆತಿರುವ ಖಚಿತ ಮಾಹಿತಿಯಂತೆ ಮನು ಪ್ರಾಣಕ್ಕೆ ಯಾವುದೇ ಅಪಾಯವಾಗಿಲ್ಲ. ಆಧಾರ್‌ಕಾರ್ಡ್ ಬಳಸಿ ಮನು 12 ಸಿಮ್ ಖರೀದಿಸಿದ್ದಾನೆಯೇ? ಅಥವಾ ಆತನನ್ನು ಯಾರಾದರೂ ಅಪಹರಿಸಿ ಆತನದೇ ಆಧಾರ್‌ಕಾರ್ಡ್ ನಂಬರ್ ಮೂಲಕ ಸಿಮ್‌ಗಳನ್ನು ಖರೀದಿಸಿ ಬಳಸುತ್ತಿದ್ದಾರೆಯೇ? ಎಂಬ ಪ್ರಶ್ನೆ ಪೊಲೀಸರನ್ನು ಕಾಡುತ್ತಿದೆ. ಪೊಲೀಸರು ಇನ್ನೂ ಹುಡುಕಾಟ ನಡೆಸುತ್ತಲೇ ಇದ್ದಾರೆ. ಮನುವಿನ ಕುಟುಂಬದವರಂತೂ ಆತನ ಸ್ಥಿತಿ ಏನಾಯಿತೋ ಎಂಬ ಆತಂಕದಲ್ಲಿ ಕೊರಗುತ್ತಿದ್ದಾರೆ. ಮತ್ತೊಂದೆಡೆ ಸುಪ್ರಿಯಾ ಕುಟುಂಬದವರು ಪೊಲೀಸರಿಗೆ ಮನು ದೊರಕಿಬಿಟ್ಟರೆ ಸಾಕು ಎಂಬ ಸ್ಥಿತಿಯಲ್ಲಿದ್ದಾರೆ. ನಿಗೂಢವಾಗಿ ಕಣ್ಮರೆಯಾಗಿರುವ ಚೊಟ್ಟನಹಳ್ಳಿ ಮನು ಪ್ರಕರಣ ಮತ್ತಷ್ಟು ನಿಗೂಢವಾಗುತ್ತಲೇ ಇದೆ.

ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



ಚಿನಕುರಳಿ, ಆ.19– ಇಲ್ಲಿಗೆ ಸಮೀಪದ ಕೆ.ಮಂಚನಹಳ್ಳಿಯಲ್ಲಿ 16.50 ಲಕ್ಷ ರೂ. ವೆಚ್ಚದ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಗ್ರಾಮದಲ್ಲಿ ಇತ್ತೀಚೆಗೆ ಸುರಿದ ಸತತ ಮಳೆಯಿಂದಾಗಿ ಶಾಲಾ ಕಟ್ಟಡ ಶಿಥಿಲಗೊಂಡು ಬಿದ್ದು ಹೋಗಿತ್ತು. ಈ ಹಿನ್ನೆಲೆಯಲ್ಲಿ ಶಾಲಾ ಕಟ್ಟಡ ನಿರ್ಮಿಸಿಕೊಡುವಂತೆ ಗ್ರಾಮಸ್ಥರು ಹಲವು ಬಾರಿ ಮನವಿ ಮಾಡಿದ್ದರು. ಅವರ ಮನವಿ ಮೇರೆಗೆ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಸರ್ಕಾರದಿಂದ ಶಾಲಾ ಕಟ್ಟಡಕ್ಕೆ 16.5 ಲಕ್ಷ ಅನುದಾನ ಬಿಡುಗಡೆ ಮಾಡಿಸಿ ಕಟ್ಟಡದ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಲಾಗಿದೆ. ಗುತ್ತಿಗೆದಾರರು ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ (ಪಾಪಣ್ಣ), ಉಪಾಧ್ಯಕ್ಷ ಮಂಜುಳಾ, ಮಾಜಿ ಅಧ್ಯಕ್ಷ ಮೊಹಮ್ಮದ್, ಇಮ್ತಿಯಾಜ್ ಪಾಷ, ಸದಸ್ಯರಾದ ಸಿ.ಎ.ಲೋಕೇಶ್,ಗಾಯಿತ್ರಿ ಶಿವಮ್ಮ ಬಿ.ಶ್ರೀನಿವಾಸ್, ದಿವ್ಯ, ಶ್ವೇತ, ಕೃಷ್ಣೇಗೌಡ, ಪರಮೇಶ್, ನಾಗೇಗೌಡ, ಸುಮಾ, ಮಾಜಿ ಸದಸ್ಯ ಸಿ.ಡಿ.ಮಹದೇವ್ರ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣೇಗೌಡ, ನಿರ್ದೇಶಕ ಮಂಜುನಾಥ್, ಬಿಇಓ ಲೋಕೇಶ್, ಎಸ್‌ಡಿಎಂಸಿ ಅಧ್ಯಕ್ಷೆ ರಮ್ಯ, ಉಪಾಧ್ಯಕ್ಷೆ ಶಶಿಕಲಾ, ಯ.ಸ್ವಾಮಿಗೌಡ, ಮುಖಂಡ ಹೇಮಣ್ಣ, ಇಂಜಿನಿಯರ್‌ಗಳಾದ ಕುಮಾರ್, ಮಹದೇವಸ್ವಾಮಿ, ಗುತ್ತಿಗೆದಾರ ಧರಣೇಶ್ ಹಲವರಿದ್ದರು.

ಮಂಡ್ಯ ನಗರದಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 60 ಟನ್ ಅಕ್ಕಿ ವಶ

ಮಂಡ್ಯ,ಆ.19– ಇಲ್ಲಿನ ವಿ.ವಿ ನಗರದ ಜೈಶಂಕರ್ ರೈಸ್‌ಮಿಲ್‌ನಲ್ಲಿ ದಾಖಲೆಯಿಲ್ಲದೇ ಸಂಗ್ರಹಿಸಿಟ್ಟಿದ್ದ ಸುಮಾರು 60 ಟನ್ ತೂಕವಿರುವ 120 ಚೀಲ ಅಕ್ಕಿ ಮೂಟೆಗಳನ್ನು ಆಹಾರ ಮತ್ತು ನಾಗರಿಕರ ಪೂರೈಕೆ ಇಲಾಖೆ ಅಧಿಕಾರಿಗಳು ವಶ ಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಅಧಿಕಾರಿಗಳು ದಾಳಿ ನಡೆಸಿದರು. ಈ ವೇಳೆ ಮಾಲೀಕರು ಕೆಲವೊಂದು ಬಿಲ್‌ಗಳನ್ನು ಹಾಜರುಪಡಿಸಿದ್ದರು. ಆದರೆ ಪರಿಶೀಲನೆ ನಡೆಸಿದ ಅಧಿಕಾರಿಗಳಿಗೆ ನಕಲಿ ಬಿಲ್ ಎಂಬ ಸಂಶಯ ಬಂದಿದೆ. ಈ ಹಿನ್ನೆಲೆಯಲ್ಲಿ ಅಕ್ಕಿ ಮೂಟೆಯನ್ನು ವಶಕ್ಕೆ ಪಡೆದಿದ್ದಾರೆ. ಅಂತೆಯೇ ಮೂರು ದಿನದೊಳಗೆ ಅಸಲಿ ಬಿಲ್ ಸಲ್ಲಿಸುವಂತೆ ಕಾಲಾವಕಾಶ ನೀಡಿ ನೋಟಿಸ್ ಜಾರಿ ಮಾಡಲಾಗಿದೆ. ಮಾಧ್ಯಮದವರೊಂದಿಗೆ ಮಾತನಾಡಿದ ಇಲಾಖೆ ಉಪನಿರ್ದೇಶಕ ಎಂ.ಪಿ.ಕೃಷ್ಣಕುಮಾರ್, 120 ಚೀಲಗಳಲ್ಲಿ ತುಂಬಿರುವ ಪಡಿತರ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ. ಯಾವುದೇ ಕಾರಣಕ್ಕೂ ಇದನ್ನು ಬಿಡುವ ಪ್ರಶ್ನೆಯೇ ಇಲ್ಲ. ನಿಯಮಾನುಸಾರ ಯಾವ ರೀತಿ ಕ್ರಮ ಕೈಗೊಳ್ಳಬೇಕೋ ಅದನ್ನು ಪಾಲಿಸಲಾಗುವುದು. ಅಕ್ಕಿಯ ಸ್ಯಾಂಪಲ್‌ನ್ನು ಸಹ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಪ್ರಯೋಗಾಲಯದ ವರದಿ ಬಂದ ನಂತರ ಪಡಿತರ ಅಕ್ಕಿಯೇ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ ಎಂದಿದ್ದಾರೆ.

ಮರೀಗೌಡ ಬಡಾವಣೆಯಲ್ಲಿರುವ ರೈಸ್‌ಮಿಲ್‌ನಿಂದ ಅಕ್ಕಿ ತರಲಾಗಿದೆ ಎಂದು ಹೇಳಲಾಗುತ್ತಿದೆ. ಅಲ್ಲದೆ ತಮಿಳುನಾಡಿನಿಂದಲೂ ಅಕ್ಕಿ ಬಂದಿರುವ ಬಗ್ಗೆ ಮಾಲೀಕರು ತಿಳಿಸಿದ್ದಾರೆ. ಅವರು ಅಕ್ಕಿಯನ್ನು ಖರೀದಿಸಿ ತಂದಿರುವುದಾಗಿ ಸ್ಪಷ್ಟನೆ ನೀಡಿದ್ದಾರೆ. ಕೈಬರಹದ ಬಿಲ್ ಹಾಜರು ಪಡಿಸಿರುವುದರಿಂದ ನಮಗೆ ಅದರ ಬಗ್ಗೆ ಸಂಶಯ ವ್ಯಕ್ತವಾಗಿದೆ. ಇದನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ರವೀಗೌಡ (ಅಯ್ಯ) ನಿಧನ



ಪಾಂಡವಪುರ, ಆ.19– ಪಟ್ಟಣದಲ್ಲಿ ಬೇಕರಿ ನಡೆಸುತ್ತಿದ್ದ ರವೀಗೌಡ (ಅಯ್ಯ) ಅವರು ಇಂದು ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ 50 ವರ್ಷ ವಯಸ್ಸಾಗಿತ್ತು. ಇಂದು ಬೆಳಗ್ಗೆ ಬೇಕರಿ ತೆರೆದು ಕೆಲಕಾಲ ವ್ಯಾಪಾರ ನಡೆಸಿ ವಿಶ್ರಾಂತಿಗೆಂದು ಮನೆಗೆ ಬಂದವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಮಧ್ಯಾಹ್ನದ ನಂತರ ಕುಟುಂಬದವರಿಗೆ ವಿಷಯ ತಿಳಿಯಿತು ಎನ್ನಲಾಗಿದೆ. ದಿವಂಗತರು ಪತ್ನಿ ಕಲ್ಪನಾ, ಪುತ್ರ ಪ್ರೇಮ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಶನಿವಾರ (ಆ.20) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಮೇಲುಕೋಟೆ ಹೋಬಳಿಯ ಕಾಡೇನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಸಿ.ಗುರುಸ್ವಾಮಿ ಪುಣ್ಯಸ್ಮರಣೆ



ಚಾಮರಾಜನಗರ, ಆ.19–ಚಾಮರಾಜನಗರ ಕ್ಷೇತ್ರದ ಮಾಜಿ ಶಾಸಕ ಸಿ.ಗುರುಸ್ವಾಮಿ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವು ಆ.20 ರಂದು ತಾಲೂಕಿನ ಯಾನಗಹಳ್ಳಿ ಬಳಿ ಇರುವ ಅಚ್ಚಟ್ಟಿಪುರ ತೋಟದ ಮನೆಯಲ್ಲಿ ನಡೆಯಲಿದೆ.

ಪುಣ್ಯಸ್ಮರಣೆ ಕಾರ್ಯಕ್ರಮದ ಅಂಗವಾಗಿ ಧಾರ್ಮಿಕ ಸಭೆಯನ್ನು ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ದೇವನೂರು ಮಠದ ಶ್ರೀ ಮಹಾಂತ ಸ್ವಾಮೀಜಿ, ಮಲ್ಲನಮೂಲೆಯ ಶ್ರೀ ಚನ್ನಬಸವ ಸ್ವಾಮೀಜಿ, ಪಡಗೂರಿನ ಶ್ರೀ ಶಿವಲಿಂಗೇಂದ್ರ ಸ್ವಾಮೀಜಿ, ಮಹದೇಶ್ವರಬೆಟ್ಟದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ವಾಟಾಳು ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಸೋಮಹಳ್ಳಿ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಹಂಡರಕಳ್ಳಿಯ ಶ್ರೀ ಪಂಚಾಕ್ಷರಿ ಸ್ವಾಮೀಜಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ಮರಿಯಾಲದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಚಾಮರಾಜನಗರದ ಶ್ರೀ ಚನ್ನಬಸವಸ್ವಾಮೀಜಿ ಸೇರಿದಂತೆ ಹರಗುರುಚರಮೂರ್ತಿಗಳು ಪಾಲ್ಗೊಳ್ಳಲಿದ್ದಾರೆ. ನಾಗರಿಕರು, ಬಂಬಲಿಗರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಸಿ.ಗುರುಸ್ವಾಮಿ ಸೇವಾ ಪ್ರತಿಷ್ಠಾನದ ಅಧ್ಯಕ್ಷರೂ ಆದ ಜಿಪಂ ಮಾಜಿ ಅಧ್ಯಕ್ಷೆ ಜಿ.ನಾಗಶ್ರೀ ಪ್ರತಾಪ್ ಕೋರಿದ್ದಾರೆ.

ಇಂದು ಜಿಲ್ಲೆಯ ವಿವಿಧೆಡೆ ವಿದ್ಯುತ್ ಅದಾಲತ್

ಚಾಮರಾಜನಗರ, ಆ.19– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಜಿಲ್ಲೆಯ ವಿವಿಧೆಡೆ ಆ.20 ರಂದು ವಿದ್ಯುತ್ ಅದಾಲತ್ ನಡೆಯಲಿದೆ.

ಹರದನಹಳ್ಳಿ ಶಾಖೆಯ ಅದಾಲತ್ ಚಿಕ್ಕಮೋಳೆ ಗ್ರಾಮದಲ್ಲಿ ಬೆಳಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ, ಹನೂರು ಉಪ ವಿಭಾಗ ವ್ಯಾಪ್ತಿಯ ಅದಾಲತ್ ಬೆಳಗ್ಗೆ 11 ಗಂಟೆಗೆ ಮಲೆಮಹದೇಶ್ವರಬೆಟ್ಟ ಗ್ರಾಮದ ಮಹದೇಶ್ವರ ಕಲ್ಯಾಣ ಮಂಟಪ ಹಾಗೂ ದಂಟಳ್ಳಿ ಗ್ರಾಮದಲ್ಲಿ ನಡೆಯಲಿದೆ. ಗುಂಡ್ಲುಪೇಟೆ ತಾಲೂಕಿನ ಹಂಗಳ ಶಾಖಾ ವ್ಯಾಪ್ತಿಯ ಮದ್ದೂರು ಕಾಲೋನಿ ಗ್ರಾಮದಲ್ಲಿ ಬೆಳಗ್ಗೆ 11 ಗಂಟೆಗೆ ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸಿದ್ದಲಿಂಗಪ್ಪ ಅಧ್ಯಕ್ಷತೆಯಲ್ಲಿ ವಿದ್ಯುತ್ ಅದಾಲತ್ ಆಯೋಜಿಸಲಾಗಿದೆ.

ಸಂತೋಷ್ ನಿಧನ



ಚಾಮರಾಜನಗರ, ಆ.19–ತಾಲೂಕಿನ ಬೆಂಡರವಾಡಿ ನಿವಾಸಿ ತಾಲೂಕು ಪಂಚಾಯ್ತಿ ಮಾಜಿ ಸದಸ್ಯ ಬಿ.ಕೆ.ಚಿಕ್ಕಬಸವಣ್ಣ ಪುತ್ರ ಬಿ.ಸಿ.ಸಂತೋಷ್(27) ಹೃದಯಾಘಾತದಿಂದ ನಿಧನರಾದರು.

ಮೃತರು ತಂದೆ, ತಾಯಿ, ಇಬ್ಬರು ಸಹೋದರಿಯರನ್ನು ಅಗಲಿದ್ದು, ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮರಾಜನಗರದಲ್ಲಿ ಸರಣಿ ಪ್ರತಿಭಟನೆ

● ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆತಕ್ಕೆ ಕಾಂಗ್ರೆಸ್ ಖಂಡನೆ ● ಲೋಕಾಯುಕ್ತ ಬಲಪಡಿಸಲು ಕಬ್ಬು ಬೆಳೆಗಾರರ ಆಗ್ರಹ





ಚಾಮರಾಜನಗರ, ಆ.19–ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಬಿಜೆಪಿ ಕಾರ್ಯಕರ್ತರು ಕೊಡಗಿನಲ್ಲಿ ಮೊಟ್ಟೆ ಎಸೆದು, ಕಪ್ಪು ಬಾವುಟ ಪ್ರದರ್ಶಿಸಿದ ಘಟನೆ ಖಂಡಿಸಿ ನಗರದಲ್ಲಿ ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ಹೆದ್ದಾರಿ ತಡೆದು ಪ್ರತಿಭಟಿಸಿದರೆ, ಯುವ ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದು ಆಕ್ರೋಶ ವ್ಯಕ್ತಪಡಿಸಿದರು. ಇದರ ನಡುವೆ ಲೋಕಾಯುಕ್ತ ಬಲಪಡಿಸಲು ಆಗ್ರಹಿಸಿ ಕಬ್ಬು ಬೆಳೆಗಾರರ ಸಂಘ ದಿಂದಲೂ ಪ್ರತಿಭಟನೆ ನಡೆಯಿತು.

ಜಿಲ್ಲಾ ಕಾಂಗ್ರೆಸ್ ಸಮಿತಿ ರಸ್ತೆ ತಡೆ: ನಗರದ ಸತ್ತಿರಸ್ತೆಯಲ್ಲಿರುವ ಪಕ್ಷದ ಕಚೇರಿ ಬಳಿ ಸಮಾವೇಶಗೊಂಡ ಜಿಲ್ಲಾ ಕಾಂಗ್ರೆಸ್ ಹಾಗೂ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು, ರಾಷ್ಟ್ರೀಯ ಹೆದ್ದಾರಿ ತಡೆದು ಅಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ಜನರ ಸಂಕಷ್ಟ ಆಲಿಸಲು ತೆರಳಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯನವರ ಕಾರಿನ ಮೇಲೆ ಕಿಡಿಗೇಡಿಗಳು ಮೊಟ್ಟೆ ಎಸೆದು, ಅಗೌರವ ತೋರಿದ್ದಾರೆ. ಕೂಡಲೇ ದುಷ್ಕರ್ಮಿಗಳನ್ನು ಬಂಧಿಸಬೇಕು. ಮುಂದೆ ಇಂತಹ ಘಟನೆಗಳು ನಡೆಯದಂತೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಕಾಂಗ್ರೆಸ್ ಎಸ್‌ಟಿ ವಿಭಾಗದ ರಾಜ್ಯ ಕಾರ್ಯದರ್ಶಿ ಪು.ಶ್ರೀನಿವಾಸ ನಾಯಕ, ಕೆಪಿಸಿಸಿ ಓಬಿಸಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹದೇವಶೆಟ್ಟಿ, ಅಲ್ಪಸಂಖ್ಯಾತರ ವಿಭಾಗದ ಪ್ರಧಾನ ಕಾರ್ಯದರ್ಶಿ ಅಬ್ಜಲ್ ಷರೀಫ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್.ಮಹದೇವ, ನಗರಸಭೆ ಸದಸ್ಯೆ ಭಾಗ್ಯಮ್ಮ, ಎಪಿಎಂಸಿ ಸದಸ್ಯ ಗುರುಸ್ವಾಮಿ ಸೇರಿದಂತೆ ಪಕ್ಷದ ಮುಖಂಡರಿದ್ದರು.

ಯುವ ಕಾಂಗ್ರೆಸ್‌ನಿಂದಲೂ ಪ್ರತಿಭಟನೆ: ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಘಟನೆ ಖಂಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳೂ ನಗರದಲ್ಲಿ ಪ್ರತಿಭಟಿಸಿದರು. ನಗರದ ಚಾಮರಾಜೇಶ್ವರ ದೇವಸ್ಥಾನ ಆವರಣದಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿ, ಕೆಲಕಾಲ ರಸ್ತೆ ತಡೆದು, ಬಿಜೆಪಿ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಅಜೀಜ್ ಮಾತನಾಡಿ, ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಪ್ರಕರಣದಲ್ಲಿ ಕೇವಲ 6 ಮಂದಿ ಮಾತ್ರ ಬಂಧಿಸಲಾಗಿದೆ. ಘಟನೆಯಲ್ಲಿ 50ಕ್ಕೂ ಹೆಚ್ಚು ಮಂದಿ ಇದ್ದರು. ಎಲ್ಲರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ವಕ್ತಾರ ಕರೆಹಳ್ಳಿ ನವೀನ್ ಮಾತನಾಡಿದರು. ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷರಾದ ಹೆಚ್.ಎಂ.ಮಧು, ಹೊಸಹಳ್ಳಿ ಮಧುಸೂದನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನಾಗೇಂದ್ರನಾಯಕ, ಯೋಗೇಂದ್ರ, ಸೋಮೇಶ್, ಶ್ರೀನಿವಾಸ, ಟೌನ್ ಅಧ್ಯಕ್ಷ ತೌಶಿಫ್, ಅಸಂಘಟಿತ ಕಾರ್ಮಿಕ ವಿಭಾಗದ ಅಧ್ಯಕ್ಷ ಎಂ.ಸ್ವಾಮಿ, ಕೊಳ್ಳೇಗಾಲ ಬ್ಲಾಕ್ ಅಧ್ಯಕ್ಷ ವರುಣ್ ಇತರರಿದ್ದರು.

ಲೋಕಾಯುಕ್ತ ಬಲಪಡಿಸಲು ಆಗ್ರಹ: ರಾಜ್ಯದಲ್ಲಿ ಎಸಿಬಿ ರದ್ದು ಮಾಡಿ ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ನಗರದ ಭುವನೇಶ್ವರಿ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಕಬ್ಬು ಬೆಳೆಗಾರರ ಸಂಘದ ಮೈಸೂರು–ಚಾಮರಾಜನಗರ ಜಿಲ್ಲಾ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಹೈಕೋರ್ಟ್ ಆದೇಶದಂತೆ ಎಸಿಬಿ ರದ್ದು ಮಾಡಿ, ಪ್ರಸ್ತುತ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ ಅವರು ಲೋಕಾಯುಕ್ತ ಜಾರಿ ತರಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ರೈತರಿಂದ ಉಗ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಪ್ರವೀಣ್‌ಕುಮಾರ್, ನಂಜುಂಡನಾಯಕ, ಹಾಲಿನ ನಾಗರಾಜು, ನರ್ಸರಿ ಗುರುಪ್ರಸಾದ್, ಸತೀಶ್, ನಾಗೇಂದ್ರ, ನವೀನ್, ನಂಜಪ್ಪ, ಮಾದಪ್ಪ, ಅರಳೀಕಟ್ಟೆ ಪ್ರಜ್ವಲ್, ಮಹದೇವ, ಸಂಜು ಇತರರಿದ್ದರು.



ಮೈಸೂರು ಮಿತ್ರ

ವಿಪಕ್ಷ ನಾಯಕ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆತ

ಮೈಸೂರಲ್ಲಿ ಮುಂದುವರೆದ ಕಾಂಗ್ರೆಸ್ ಆಕ್ರೋಶ

● ಆರೋಪಿಗಳ ಗಡಿಪಾರಿಗೆ ಆಗ್ರಹ ● ಬಿಜೆಪಿ ನಾಯಕರ ಕೈವಾಡದ ಬಗ್ಗೆ ಕೆಂಡ

ಮೈಸೂರು, ಆ.19(ಎಂಟಿವೈ)– ನೆರೆ ಪೀಡಿತ ಪ್ರದೇಶಗಳ ವೀಕ್ಷಣೆಗೆಂದು ಕೊಡಗು ಹಾಗೂ ಚಿಕ್ಕಮಗಳೂರು ಪ್ರವಾಸ ಕೈಗೊಂಡಿದ್ದ ವೇಳೆ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದು ದಾಳಿ ನಡೆಸಲು ಮುಂದಾದ ಘಟನೆ ಖಂಡಿಸಿ, ಎರಡನೇ ದಿನವೂ ಮೈಸೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾರೀ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಶುಕ್ರವಾರ ನಡೆದ ಬೃಹತ್ ಪ್ರತಿಭಟನೆಯಲ್ಲಿ ನೂರಾರು ಮಂದಿ ಪಾಲ್ಗೊಂಡು ಬಿಜೆಪಿ ಕಾರ್ಯಕರ್ತರ ನಡೆಯನ್ನು ತೀವ್ರವಾಗಿ ಖಂಡಿಸಿದರಲ್ಲದೆ, ಬಿಜೆಪಿ ಕಾರ್ಯಕರ್ತರು ಉದ್ಧಟತನ ನಿಲ್ಲಿಸದಿದ್ದರೆ ಕಾಂಗ್ರೆಸ್ ಕಾರ್ಯಕರ್ತರಿಂದ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ಕಾರ್ಯಕ್ರಮದಿಂದ ಕಂಗೆಟ್ಟಿರುವ ಬಿಜೆಪಿ ನಾಯಕರು ಸಿದ್ದರಾಮಯ್ಯ ಅವರ ವಿರುದ್ಧ ನಿರಂತರವಾಗಿ ಮುಗಿ ಬೀಳುತ್ತಿದ್ದಾರೆ. ಒಬ್ಬ ನಾಯಕನ ವಿರುದ್ಧ ಇಡೀ ಬಿಜೆಪಿ ನಾಯಕರು ಮುಗಿ ಬೀಳುತ್ತಿರುವುದನ್ನು ಕಂಡರೆ ಸಿದ್ದರಾಮಯ್ಯ ಅವರನ್ನು ಕಂಡರೆ ಬಿಜೆಪಿ ಎಷ್ಟು ಭಯವಿದೆ ಎಂದು ಗೊತ್ತಾಗುತ್ತದೆ. ಕೊಡಗು ಹಾಗೂ ಚಿಕ್ಕಮಗಳೂರಲ್ಲಿ ನಡೆದಿರುವ ಘಟನೆಯ ಹಿಂದೆ ಬಿಜೆಪಿ ನಾಯಕರ ಕೈವಾಡವಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ರಾಜ್ಯ ಹಾಗೂ ಕೇಂದ್ರದ ಬಿಜೆಪಿ ಸರ್ಕಾರದ ವೈಫಲ್ಯ ಮರೆ ಮಾಚಲು ಕೋಮು ಭಾವನೆ ಕೆರಳಿಸುವ ಸಂಚು ನಡೆಸುತ್ತಿದೆ. ಕೋಮು ದಳ್ಳುರಿ ಎಬ್ಬಿಸಿ ರಾಜಕೀಯ ಲಾಭ ಮಾಡಿಕೊಳ್ಳುವುದಕ್ಕೆ ಬಿಜೆಪಿ ಸರ್ಕಾರ, ಕಾರ್ಯಕರ್ತರನ್ನು ಪ್ರಚೋದಿಸುತ್ತಿದೆ ವಿರೋಧ ಪಕ್ಷದ ನಾಯಕರು ಬರುತ್ತಿರುವ ವಿಚಾರ ಅರಿತಿದ್ದರೂ ಸ್ಥಳೀಯ ಶಾಸಕರ ಕುಮ್ಮಕ್ಕಿನಿಂದ ಭದ್ರತೆಯಲ್ಲಿ ಲೋಪವೆಸಗಲಾಗಿದೆ. ದಾಳಿ ನಡೆಸುವುದಕ್ಕೆ ಬಿಜೆಪಿ ಕಾರ್ಯಕರ್ತರನ್ನು ಪ್ರಚೋದಿಸಲಾಗಿದೆ. ಕೂಡಲೇ ಬಿಜೆಪಿ ಕಾರ್ಯಕರ್ತರು ಗೂಂಡಾವರ್ತನೆ ನಿಲ್ಲಿಸಬೇಕು ಎಂದು ಆಗ್ರಹಿಸಿದರು.



ಬಿಜೆಪಿ ಕಚೇರಿ ಮುತ್ತಿಗೆ ಯತ್ನ: ಪೊಲೀಸ್ ವಶಕ್ಕೆ

ಮೈಸೂರು, ಆ.19(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣ ಖಂಡಿಸಿ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

ಮೈಸೂರಿನ ನ್ಯಾಯಾಲಯದ ಮುಂದಿರುವ ಮಹಾತ್ಮಗಾಂಧಿ ಪುತ್ಥಳಿ ಮುಂದೆ ಪ್ರತಿಭಟನೆ ನಡೆಸಿದ ಕಾರ್ಯಕರ್ತರು ಮಹಾತ್ಮ ಗಾಂಧೀಜಿ ಅವರ ಹಂತಕ ನಾಥೂರಾಮ್ ಗೂಡ್ಸೆ ಭಾವಚಿತ್ರಕ್ಕೆ ಬೆಂಕಿ ಹಚ್ಚಿ, ಆಕ್ರೋಶ ವ್ಯಕ್ತಪಡಿಸಿದರು. ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಏಳಿಗೆ ಸಹಿಸದೇ ಬಿಜೆಪಿ ನಾಯಕರು ಕಂಗೆಟ್ಟಿದ್ದಾರೆ. ಸಿದ್ದರಾಮೋತ್ಸವ ಕಾರ್ಯಕ್ರಮದ ನಂತರ ರಾಜ್ಯದ ಜನತೆ ಬಿಜೆಪಿ ಸರ್ಕಾರದ ದುರಾಡಳಿತಕ್ಕೆ ಆಕ್ರೋಶ ಹೆಚ್ಚಾಗುತ್ತಿದೆ. ತಮ್ಮ ಆಡಳಿತ ವೈಫಲ್ಯ ಮರೆಮಾಚಲು ಕಾಂಗ್ರೆಸ್ ನಾಯಕರ ವಿರುದ್ಧ ವೈಯಕ್ತಿಕ ಟೀಕೆ ಮಾಡಲಾ



ರಂಭಿಸಿದ್ದಾರೆ. ಹಿಂದುಳಿದ ವರ್ಗಗಳ ನಾಯಕರೂ ಆಗಿರುವ ಸಿದ್ದರಾಮಯ್ಯ ಅವರ ಮೇಲೆ ದಾಳಿ ಮಾಡಲು ಮುಂದಾಗಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಬಿಜೆಪಿ ಕಚೇರಿ ಮುಂದೆ ಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಮುಚ್ಚಳಿಕೆ ಬರೆಸಿಕೊಂಡು ಮಧ್ಯಾಹ್ನದ ವೇಳೆಗೆ ಬಿಡುಗಡೆ ಮಾಡಿದರು. ಪ್ರತಿಭಟನೆಯಲ್ಲಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಲೋಕೇಶ್, ರಮೇಶ್, ನಾಗೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ರಾಜ್ಯ ರಾಜಕಾರಣದಲ್ಲಿ ನಾಲ್ಕು ದಶಕದ ಅನುಭವ ಸಿದ್ದರಾಮಯ್ಯ ಅವರಿಗಿದೆ. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಯಾಗಿ, ಶಾಸಕ, ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ, ಪೂರ್ಣಾವಧಿ ಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕನಾಗಿ ಸೇವೆ ಸಲ್ಲಿಸಿರುವ ಅನುಭವ ಹೊಂದಿದ್ದಾರೆ. ಕಾರು ತಡೆದು ಮೊಟ್ಟೆ ಎಸೆದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರ ಗೊಡ್ಡು ಬೆದರಿಕೆಗೆ ಸಿದ್ದರಾಮಯ್ಯ ಹೆದರುವ ವ್ಯಕ್ತಿತ್ವದವರಲ್ಲ ಎಂದು ಪ್ರತಿಭಟನಾಕಾರರು ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಕೊಡಗು ಹಾಗೂ ಚಿಕ್ಕಮಗಳೂರಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಕಾರನ್ನು ಅಡ್ಡಗಟ್ಟಿದ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಮೊಟ್ಟೆ ಎಸೆದವರನ್ನು ಗಡಿಪಾರು ಮಾಡಬೇಕು. ಪ್ರಚೋದಕರ ವಿರುದ್ಧವೂ ಪ್ರಕರಣ ದಾಖಲಿಸಬೇಕು. ಇಂತಹ ಕುಚೋದ್ಯ, ಅನುಚಿತ ವರ್ತನೆಗೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಕಾಂಗ್ರೆಸ್ ವತಿಯಿಂದ ಎಲ್ಲೆಡೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಾಸಕರಾದ ಹೆಚ್.ಪಿ. ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷೆ ಕೆ.ಮರೀಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯ್‌ಕುಮಾರ್, ಕೆ.ಆರ್. ನಗರದ ಡಿ.ರವಿಶಂಕರ್, ಕಾಂಗ್ರೆಸ್ ಕಾನೂನು ಘಟಕದ ರಾಜ್ಯ ಕಾರ್ಯದರ್ಶಿ ಕವಿತಾ ಕಾಳೆ, ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಟಿ.ಬಿ. ಚಿಕ್ಕಣ್ಣ, ಪುಷ್ಪಲತಾ ಜಗನ್ನಾಥ್, ಮಾಜಿ ಜಿಪಂ ಸದಸ್ಯ ಅರುಣ್‌ಕುಮಾರ್, ಮಂಜುಳಾ ಮಾನಸ, ತಾಪಂ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಮುಖಂಡರಾದ ಸುಧಾ ಮಹಾದೇವಯ್ಯ, ಹಿನಕಲ್ ಉದಯ್, ಕೆ.ಕಮಲಾ ಅನಂತರಾಮ್, ಡೈರಿ ವೆಂಕಟೇಶ್, ಎಂ.ಎನ್.ನವೀನ್‌ಕುಮಾರ್, ರವಿಕುಮಾರ್, ಯುವ ಕಾಂಗ್ರೆಸ್ ಮುಖಂಡ ನಿಶಾಂತ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಎಂಎಂಸಿಆರ್‌ಐ ನೂತನ ಡೀನ್-ಡೈರೆಕ್ಟರ್ ಡಾ.ದಾಕ್ಷಾಯಣಿ



ಮೈಸೂರು ವೈದ್ಯಕೀಯ ಹಾಗೂ ಸಂಶೋಧನಾ ಸಂಸ್ಥೆಯ ನೂತನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ ಶುಕ್ರವಾರ ಅಧಿಕಾರ ವಹಿಸಿಕೊಂಡರು.

ಮೈಸೂರು, ಆ.19(ಎಸ್‌ಬಿಡಿ)–ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ(ಎಂಎಂಸಿ ಅಂಡ್ ಆರ್‌ಐ) ನೂತನ ಡೀನ್ ಹಾಗೂ ನಿರ್ದೇಶಕರಾಗಿ ಡಾ.ಕೆ.ಆರ್.ದಾಕ್ಷಾಯಣಿ ನೇಮಕಗೊಂಡಿದ್ದು, ಶುಕ್ರವಾರ ಅಧಿಕಾರ ವಹಿಸಿಕೊಂಡರು.

ಕರ್ತವ್ಯಕ್ಕೆ ವರದಿ ಮಾಡಿಕೊಂಡ ಡಾ.ಕೆ.ಆರ್.ದಾಕ್ಷಾಯಣಿ ಅವರನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ.ಸಿ.ಎನ್.ವೆಂಕಟರಾಜು ಹೂಗುಚ್ಛ ನೀಡಿ ಸ್ವಾಗತಿಸಿದರು. ಈ ವೇಳೆ ನಿರ್ಗಮಿತ ಡೀನ್ ಡಾ.ಹೆಚ್.ಎನ್.ದಿನೇಶ್ ಹಾಗೂ ಸಂಸ್ಥೆಯ ನಾಮನಿರ್ದೇಶಿತ ಸದಸ್ಯೆ ಬಿ.ಎಸ್.ಹೇಮಲತಾ ಉಪಸ್ಥಿತರಿದ್ದರು.

ಜುಲೈ 21ರಂದು ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಅರ್ಜಿ ಸಲ್ಲಿಸಿದ್ದ ಐವರು ವೈದ್ಯಾಧಿಕಾರಿಗಳಿಗೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅಧ್ಯಕ್ಷತೆಯ ಆಯ್ಕೆ ಸಮಿತಿ ಕೆಲ ದಿನಗಳ ಹಿಂದೆ ಸಂದರ್ಶನ ನಡೆಸಿತ್ತು. ಅಂತಿಮವಾಗಿ ಸಂಸ್ಥೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿರುವ ಡಾ.ಕೆ.ಆರ್. ದಾಕ್ಷಾಯಣಿ ಅವರನ್ನು ನೇಮಕ ಮಾಡಿ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ. ಡಾ.ಸಿ.ಪಿ.ನಂಜರಾಜ್ ಅವರ ಬಳಿಕ 2021ರ ಡಿಸೆಂಬರ್ 3ರಂದು ಡಾ.ಹೆಚ್.ಎನ್. ದಿನೇಶ್ ಡೀನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ನೂತನ ಡೀನ್ ವಿವರ: ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಬೆಳ್ಳೂರಿನ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ(ಏಮ್ಸ್)ಯಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಿದ ಡಾ.ದಾಕ್ಷಾಯಣಿ ಅವರು, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಅಂಗರಚನಾಶಾಸ್ತ್ರ (ಅನಾಟಮಿ)ದಲ್ಲಿ ಎಂಎಸ್ ಪಡೆದಿದ್ದಾರೆ. 2000ನೇ ಜುಲೈ 3ರಂದು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಸೇವೆ ಆರಂಭಿಸಿ, ಸುದೀರ್ಘ ಕಾಲ ಅಧ್ಯಾಪಕಿಯಾಗಿ, ಎಕ್ಸಾಮಿನರ್ ಆಗಿ, ಪ್ರೊಫೆಸರ್ ಆಗಿ, ಘಟಕದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ. 2015ರಿಂದ ಸಂಸ್ಥೆಯ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದ ಇವರು ಇದೀಗ ನೂತನ ಡೀನ್ ಆಗಿ ನೇಮಕಗೊಂಡಿದ್ದಾರೆ.

ಏಮ್ಸ್‌ನ ಬೆಸ್ಟ್ ಅಚೀವರ್ ಅಲುಮಿನಾಸ್, ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, ಶಿಷ್ಯ ಮೆಚ್ಚಿದ ಗುರು, ಐಸಿಎಂಆರ್‌ಐ ಪ್ರಾಜೆಕ್ಟ್ ಪ್ರಶಸ್ತಿ ಹೀಗೆ ಹಲವು ಪುರಸ್ಕಾರ ಪಡೆದಿರುವ ಡಾ.ದಾಕ್ಷಾಯಣಿ ಅವರನ್ನು ಸ್ವಯಂ ಪ್ರೇರಿತವಾಗಿ ಮರಣೋತ್ತರ ದೇಹದಾನಕ್ಕಾಗಿ ನೇಗಿಲ ಯೋಗಿ, ವಿದ್ಯಾವರ್ಧಕ ಸಂಘ, ಹಿರಿಯ ನಾಗರಿಕರ ಸಂಘಗಳು ಅಭಿನಂದಿಸಿವೆ.

ಆ.22 ರಿಂದ ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಆ.19– 2022–23ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಅರ್ಜಿ ಸಲ್ಲಿಸುವ ಸಾಮಾನ್ಯ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ ಆ.22ರಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಹಿಂದುಳಿದ ವರ್ಗಗಳ ಇಲಾಖೆ ಆಯುಕ್ತರು ಪ್ರಕಟಿಸಿದ್ದು, ಅರ್ಹ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಲು ಸೆ.12 ರಂದು ಕಡೆಯ ದಿನವಾಗಿದೆ. ಸಲ್ಲಿಕೆಯಾದ ಅರ್ಜಿಗಳನ್ನು ಸೆ.16 ರಂದು ತಾಲೂಕು ಹಂತಗಳಲ್ಲಿ ಪರಿಶೀಲಿಸಬೇಕು. ಸೆ.20 ರಂದು ಕೌನ್ಸಿಲಿಂಗ್ ಮೂಲಕ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಿ, ಸೆ.26 ರಂದು ಪ್ರವೇಶಾತಿ ಪಡೆಯಲು ಕೊನೆ ದಿನವಾಗಿದೆ ಎಂದು ಆಯುಕ್ತರು ಪ್ರಕಟಣೆ ನೀಡಿದ್ದಾರೆ.

ಆಭರಣ ಕೊಟ್ಟವರು ಕೋಡಂಗಿ...! ಈಸ್ಕೊಂಡವರು ಲಕ್ಷ್ಮಿದೇವಿ...!

ಪಿರಿಯಾಪಟ್ಟಣದಲ್ಲಿ ಭಕ್ತಿಯ ಹುಚ್ಚಾಟಕ್ಕೆ ಚಿನ್ನಾಭರಣ ಕಳೆದುಕೊಂಡ ಗೃಹಿಣಿ

ಪಿರಿಯಾಪಟ್ಟಣ, ಆ.19–ದೇವರ ಹೆಸರಿನಲ್ಲಿ ಹೆದರಿಸಿ ಗೃಹಿಣಿಯೋರ್ವರಿಂದ 155 ಗ್ರಾಂ ಚಿನ್ನಾಭರಣ ಪಡೆದು ವಂಚಿಸಿರುವ ಬಗ್ಗೆ ದಂಪತಿ ವಿರುದ್ಧ ಪ್ರಕರಣ ದಾಖಲಾಗಿದೆ.

ಪಿರಿಯಾಪಟ್ಟಣ ತಾಲೂಕು ಹರವೆ ಮಲ್ಲರಾಜಪಟ್ಟಣ ನಿವಾಸಿ ಶ್ರೀಮತಿ ಮೇಘಾ(29) ವಂಚನೆಗೊಳಗಾದವರಾಗಿದ್ದು, ಪಿರಿಯಾಪಟ್ಟಣ ತಾಲೂಕು ಚೌತಿ ಗ್ರಾಮದ ಮೋಹನ್ ಮತ್ತು ನಂದಿನಿ ದಂಪತಿ ಆರೋಪಕ್ಕೆ ಗುರಿಯಾಗಿರುವವರು.

ಮೇಘಾ ಅವರ ಕುಟುಂಬಕ್ಕೆ ಪರಿಚಿತರಾಗಿರುವ ಶಂಕರ್ ಮತ್ತು ನಂದಿನಿ ದಂಪತಿ ಪಿರಿಯಾಪಟ್ಟಣದ ರುದ್ರಪ್ಪ ಬಡಾವಣೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದು, ಅಲ್ಲಿಗೆ ಮೇಘಾ ಮತ್ತು ಅವರ ಮನೆಯವರು ಹೋಗಿ–ಬರುತ್ತಿದ್ದರು. ಈ ವೇಳೆ ನಂದಿನಿ ತನ್ನ ಮೈಮೇಲೆ ಲಕ್ಷ್ಮೀದೇವಿ ದೇವರು ಬರುತ್ತಿದ್ದು, ನಿಮ್ಮ ಕುಟುಂಬಕ್ಕೆ ಒಳ್ಳೆಯದಾಗುವ ರೀತಿಯಲ್ಲಿ ದೃಷ್ಟಿ ಇಡುತ್ತೇನೆ ಎಂದು ನಂಬಿಸಿದ್ದಾರೆ.

ಕಳೆದ ಫೆಬ್ರವರಿ ತಿಂಗಳಿನಲ್ಲಿ ಮೇಘಾ ಅವರ ಪತಿ ಬೈಕ್‌ನಿಂದ ಬಿದ್ದು ಗಾಯಗೊಂಡಾಗ ನಂದಿನಿ, ನಿನ್ನ ಗಂಡನನ್ನು ನಾನೇ ಬೀಳಿಸಿದ್ದು. ನಿನ್ನ ಮಗನಿಗೆ ಕಂಟಕ ಇದೆ. ಅದನ್ನೆಲ್ಲಾ ಬಗೆಹರಿಸಿ, ಒಳ್ಳೆಯದನ್ನು ಮಾಡುತ್ತೇನೆ. ನಿನ್ನ ಬಳಿ ಇರುವ ಚಿನ್ನಾಭರಣಗಳನ್ನು ನನಗೆ ಕೊಡು. ಒಂದು ಬಾರಿ ಅದನ್ನು ಧರಿಸಿಕೊಂಡು ವಾಪಸ್ ಕೊಡುತ್ತೇನೆ ಎಂದು ಹೇಳಿ ಫೆಬ್ರವರಿ 22ರಂದು ಮೇಘಾ ಅವರಿಂದ 71 ಗ್ರಾಂ ತೂಕದ ಚಿನ್ನಾಭರಣವನ್ನು ನಂದಿನಿ ಪಡೆದಿದ್ದಾಳೆ. ಮಾರ್ಚ್ 25ರಂದು ಮೇಘಾ ತನ್ನ ಚಿಕ್ಕಪ್ಪನ ಮಗಳ ನಿಶ್ಚಿತಾರ್ಥದ ವೇಳೆ ಚಿನ್ನಾಭರಣ ಧರಿಸಿ ಫೋಟೋವನ್ನು ವಾಟ್ಸಾಪ್ ಸ್ಟೇಟಸ್‌ಗೆ ಹಾಕಿದ್ದನ್ನು ನೋಡಿ ಅವರಿಗೆ ಕರೆ ಮಾಡಿದ ನಂದಿನಿ, 'ನಾನು ಲಕ್ಷ್ಮೀದೇವಿ ದೇವರು ಮಾತಾಡುತ್ತಿದ್ದೇನೆ. ನೀನು ಹಾಕಿಕೊಂಡಿದ್ದ ಲಾಂಗ್ ಚೈನ್, ಓಲೆ, ಉಂಗುರವನ್ನು ನನಗೆ ಕೊಡು. ಅದನ್ನು ಒಮ್ಮೆ ಧರಿಸಿದ ನಂತರ ಎಲ್ಲಾ ಒಡವೆಗಳನ್ನು ನಿನಗೆ ವಾಪಸ್ ಕೊಡುತ್ತೇನೆ' ಎಂದು ಹೇಳಿದ್ದಾಳೆ. ಅದನ್ನು ನಂಬಿದ ಮೇಘಾ, ಮತ್ತೆ 63 ಗ್ರಾಂ ತೂಕದ ಚಿನ್ನಾಭರಣವನ್ನು ನೀಡಿದ್ದಾರೆ.

ಬಹಳ ದಿನಗಳಾದರೂ ತಾನು ನೀಡಿದ್ದ 105 ಗ್ರಾಂ ತೂಕದ ಚಿನ್ನಾಭರಣ ವಾಪಸ್ ಕೊಡದ ಕಾರಣ, ಅದನ್ನು ಮೇಘಾ ಕೇಳಿದಾಗ ನಂದಿನಿ ಮತ್ತು ಆಕೆಯ ಪತಿ ಶಂಕರ್ ಅವರುಗಳು 'ನೀನು ನಮಗೆ ಎಲ್ಲಿ ಚಿನ್ನಾಭರಣ ಕೊಟ್ಟಿದ್ದೀಯಾ? ನೀನು ಕೊಟ್ಟಿರುವುದು ದೇವರಿಗೇ ಹೊರತು ನಮಗಲ್ಲ' ಎಂದು ದಭಾಯಿಸಿದ್ದಾರೆ. ಆನಂತರ ಮೇಘಾ ಕುಟುಂಬದವರು ನಂದಿನಿ ಮನೆಗೆ ಹೋದಾಗ ಆಕೆ ಮೈಮೇಲೆ ದೇವರು ಬಂದಂತೆ ಆಡಿಕೊಂಡು, ನಾನು ಲಕ್ಷ್ಮೀದೇವಿ ಎಂದು ಹೇಳಿ ಒಡವೆಯನ್ನು ಕೇಳಿದರೆ ಕುಟುಂಬದವರಿಗೆ ತೊಂದರೆ ಕೊಡುತ್ತೇನೆ ಎಂದು ಹೆದರಿಸಿದ್ದಾಳೆ. ಈ ಸಂಬಂಧ ಮೇಘಾ ಕುಟುಂಬದವರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದಾಗ ಅಲ್ಲಿಗೆ ಬಂದ ಶಂಕರ ಮತ್ತು ನಂದಿನಿ ದಂಪತಿ ಚಿನ್ನಾಭರಣವನ್ನು 'ನಿಧಿ ಗೋಲ್ಡ್ ಫೈನಾನ್ಸ್'ನಲ್ಲಿ ಸಿದ್ದು ಎಂಬ ಹೆಸರಿನಲ್ಲಿ ಅಡಮಾನವಿಟ್ಟಿದ್ದು, ಅದನ್ನು ಬಿಡಿಸಿಕೊಡುವುದಾಗಿ ಒಪ್ಪಿಕೊಂಡರಾದರೂ, 3 ತಿಂಗಳು ಕಾದರೂ ಚಿನ್ನಾಭರಣ ಕೊಡದೇ ವಂಚಿಸಿದ್ದಾರೆಂದು ಮೇಘಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪಿರಿಯಾಪಟ್ಟಣ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಆ.21ಕ್ಕೆ ಸರ್ವ ಸದಸ್ಯರ ಸಭೆ

ಮೈಸೂರು, ಆ.19– ಮೈಸೂರು ತಾಲೂಕಿನ ಹೊಸಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಆ.21ರ ಬೆಳಗ್ಗೆ 10.30ಕ್ಕೆ ಸಂಘದ ಕಚೇರಿ ಆವರಣದಲ್ಲಿ ಏರ್ಪಡಿಲಾಗಿದೆ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಬಕಾರಿ ಹಗರಣ: ದೆಹಲಿ ಡಿಸಿಎಂ ಮನೀಶ್ ಸಿಸೋಡಿಯಾ ಸೇರಿ 15 ಮಂದಿ ವಿರುದ್ಧ ಸಿಬಿಐ ಎಫ್‌ಐಆರ್

ನವದೆಹಲಿ: ದೆಹಲಿ ಅಬಕಾರಿ ನೀತಿಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ಸಂಸ್ಥೆ(ಸಿಬಿಐ) ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸೇರಿದಂತೆ 15 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ಇಂದು ಸಿಸೋಡಿಯಾ ಅವರ ನಿವಾಸ ಸೇರಿದಂತೆ 21 ಸ್ಥಳಗಳಲ್ಲಿ ಶೋಧ ನಡೆಸಿದೆ. ಕಳೆದ ವರ್ಷ ನವೆಂಬರ್‌ನಲ್ಲಿ ಹೊರತಂದ ದೆಹಲಿ ಅಬಕಾರಿ ನೀತಿಯ ರಚನೆ ಮತ್ತು ಅನುಷ್ಠಾನದಲ್ಲಿನ ಅಕ್ರಮ ನಡೆದಿದೆ ಎಂಬ ಆರೋಪದ ಮೇಲೆ ಸಿಬಿಐ 15 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಈ ಸಂಬಂಧ ಎಎಪಿ ನಾಯಕನ ಮನೆ, ಐಎಎಸ್ ಅಧಿಕಾರಿ ಮತ್ತು ಮಾಜಿ ಅಬಕಾರಿ ಆಯುಕ್ತ ಅರವ್ ಗೋಪಿ ಕೃಷ್ಣ ಅವರ ನಿವಾಸ ಮತ್ತು ಇತರ 19 ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏಳು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಿಬಿಐ ದಾಳಿ ನಡೆಸಿದೆ. ಇನ್ನಿಬ್ಬರು ಅಧಿಕಾರಿಗಳ ನಿವೇಶನಗಳನ್ನೂ ಶೋಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಸಿಬಿಐ ಅಧಿಕಾರಿಗಳು ಇಂದು ಬೆಳಗ್ಗೆ ಸಿಸೋಡಿಯಾ ಅವರ ನಿವಾಸವನ್ನು ತಲುಪುತ್ತಿದ್ದಂತೆ, ಸಿಬಿಐಗೆ ಸ್ವಾಗತ. ಆದರೆ ಪಿತೂರಿಗಳು ನನ್ನನ್ನು ಕುಗ್ಗಿಸಲು ಸಾಧ್ಯವಿಲ್ಲ ಮತ್ತು ಉತ್ತಮ ಶಿಕ್ಷಣವನ್ನು ನೀಡುವ ಕೆಲಸದಲ್ಲಿ ಮುಂದುವರಿಯುವ ನಮ್ಮ ಸಂಕಲ್ಪವನ್ನು ತಡೆಯುವುದಿಲ್ಲ ಎಂದು ದೆಹಲಿ ಡಿಸಿಎಂ ಟ್ವೀಟ್ ಮಾಡಿದ್ದರು. ಮತ್ತೊಂದೆಡೆ, ಬಿಜೆಪಿ ಸಹ ದೆಹಲಿ ಉಪಮುಖ್ಯಮಂತ್ರಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ಅಬಕಾರಿ ಖಾತೆಯನ್ನು ಹೊಂದಿರುವ ಸಿಸೋಡಿಯಾ ಅವರು "ಎಕ್ಸೈಸ್ ಮಂತ್ರಿ" ಆಗಿದ್ದಾರೆ. "ಮದ್ಯ ಪರವಾನಗಿ ಮತ್ತು ಅದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಆರೋಪಿಸಿದ್ದಾರೆ. ಕೇಜ್ರಿವಾಲ್ ಸರ್ಕಾರ ನೂರಾರು ಕೋಟಿ ರೂಪಾಯಿಗಳ ಮದ್ಯದ ಹಗರಣದಲ್ಲಿ ಭಾಗಿಯಾಗಿದೆ ಎಂದು ದೆಹಲಿ ಬಿಜೆಪಿ ಆರೋಪಿಸಿದೆ.

ನಾಳೆ ವಾರ್ಷಿಕ ಮಹಾಸಭೆ

ಮೈಸೂರು,ಆ.19–ಮೈಸೂರಿನ ಖದ್ದರ್ ಕೋ–ಆಪರೇಟಿವ್ ಸೊಸೈಟಿಯ ವಾರ್ಷಿಕ ಮಹಾಸಭೆಯನ್ನು ಆ.21 ರಂದು ಬೆಳಗ್ಗೆ 10.30ಕ್ಕೆ ನಾಲಾ ಬೀದಿಯಲ್ಲಿರುವ ಸಮುದಾಯ ಭವನದಲ್ಲಿ ಸಂಘದ ಅಧ್ಯಕ್ಷ ಕೆ.ಜಿ. ಸತೀಶ್ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಮುಡಾದ ಮೂಢತನದ ಕಾಮಗಾರಿಗೊಂದು ನಿದರ್ಶನ!?

ಕುಗ್ರಾಮವೊಂದರಲ್ಲೂ ಇಂತಹ ಹೀನಾಯ ಕೆಲಸ, ಬೇಕಾಬಿಟ್ಟಿ ಕೆಲಸ ನಡೆಯಲು ಯಾರೂ ಬಿಡಲ್ಲ. ಆದರೆ ಯಾರೇ ಹೇಳಿದರೂ ಮುಡಾ ಇಂಜಿನಿಯರ್ ಇದು ಸರಿ ಇದೆ ಎಂದು ಸಮರ್ಥಿಸಿಕೊಂಡು ಕಾಮಗಾರಿ ಮುಂದುವರೆಸಿರುವುದನ್ನು ನೋಡಿದರೆ ಎಷ್ಟರ ಮಟ್ಟಿಗೆ ಮುಡಾದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದು ಮನದಟ್ಟಾಗುತ್ತದೆ. ಕೂಡಲೇ ಮುಡಾ ಆಯುಕ್ತರು ಎಚ್ಚೆತ್ತು ಸಂಬಂಧಿಸಿದ ಕಂಟ್ರಾಕ್ಟರ್ ಹಾಗೂ ಇಂಜಿನಿಯರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. – ಗಿರೀಶ್, ಪ್ರತ್ಯಕ್ಷದರ್ಶಿ

ಮೈಸೂರು, ಆ.19–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಗೊಂಡ ವಸಂತನಗರ ಆರಂಭದಿಂದಲೂ ನಾಗರಿಕ ಸೌಕರ್ಯಗಳಿಂದ ವಂಚಿತವಾಗಿರುವ ಸಂಬಂಧ ವ್ಯಾಪಕ ದೂರುಗಳು ನಿವಾಸಿಗಳಿಂದ ಕೇಳಿ ಬರುತ್ತಲೇ ಇವೆ. ಒಳ ಚರಂಡಿ ಕಾಮಗಾರಿ ಪೂರ್ಣಗೊಳಿಸದೆ ನಿವೇಶನ ಹಂಚಿಕೆ ಮಾಡಲಾಗಿದೆ ಎಂಬುದೂ ಸೇರಿದಂತೆ ಮಳೆ ನೀರು ಚರಂಡಿ, ರಸ್ತೆ, ಹೀಗೆ ನಾನಾ ಸೌಕರ್ಯಗಳನ್ನು ಕಲ್ಪಿಸದೇ ಮುಡಾ ಬಡಾವಣೆ ನಿವಾಸಿಗಳು ಪರಿತಪಿಸುವಂತೆ ಮಾಡಿದೆ ಎಂದು ಹಿಡಿಶಾಪ ಹಾಕುತ್ತಾ ಬರುತ್ತಿದ್ದಾರೆ.

ಬೇಸಿಗೆ, ಮಳೆಗಾಲದಲ್ಲಿ ಒಳ ಚರಂಡಿ ನೀರು ರಸ್ತೆಗಳಲ್ಲೇ ಹರಿಯುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗಗಳ ಭೀತಿ. ಜೊತೆಗೆ ದುರ್ವಾಸನೆ ನಡುವೆಯೇ ಜನ ದಿನ ದೂಡುತ್ತಾ ಬಂದಿದ್ದರು. ಮಾಧ್ಯಮಗಳಲ್ಲಿ ಈ ಬಗ್ಗೆ ವರದಿಯಿಂದ ಎಚ್ಚೆತ್ತ ಮುಡಾ ಸಿಬ್ಬಂದಿ, ಅಂತೂ ಒಳ ಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ಕೈಗೆತ್ತಿಕೊಂಡಿದೆ. ಇದು ಕಾಟಾಚಾರದ ಕಾಮಗಾರಿ ಎಂಬುದು ಸ್ಥಳಕ್ಕೆ ತೆರಳಿದವರ ಕಣ್ಣಿಗೆ ರಾಚುತ್ತದೆ. ಯಾವ ಪುರುಷಾರ್ಥಕ್ಕೆ ಇಂತಹ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಅಲ್ಲಿನ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಒಳ ಚರಂಡಿ ಪೈಪ್‌ಗಳನ್ನು ಕನಿಷ್ಠ ನಾಲ್ಕೈದು ಅಡಿ ಆಳದಲ್ಲಿ ಅಳವಡಿಸುವುದು ಸ್ವಚ್ಛತೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಒಳ್ಳೆಯದು. ಆದರೆ ಇಲ್ಲಿ ಒಳ ಚರಂಡಿ ಪೈಪ್‌ಗಳನ್ನು ಒಂದೂವರೆ ಅಡಿ ಆಳದಲ್ಲಿ ಅಳವಡಿಸಲಾಗಿದೆ. ಒಂದು ಕಾರು ಇಲ್ಲವೇ ಆಟೋ ಅದರ ಮೇಲೆ ಹಾದು ಹೋದರೆ ಒಡೆದು, ಮತ್ತೆ ಅದ್ವಾನವಾಗುವುದು ಗ್ಯಾರಂಟಿ. ಒಳ ಚರಂಡಿ ಪೈಪ್‌ಗಳನ್ನು ಎಷ್ಟು ಆಳಕ್ಕೆ ಅಳವಡಿಸಿದರೆ ಸುರಕ್ಷಿತ ಎಂಬ ಕನಿಷ್ಠ ಪರಿಜ್ಞಾನವಿಲ್ಲದವರು ಮುಡಾ ಇಂಜಿನಿಯರ್‌ಗಳಾಗಿದ್ದಾರೆ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಇದೊಂದು ರೀತಿಯ ಕಾಟಾಚಾರದ ಕಾಮಗಾರಿ. ಜನರಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂಬ ಇಚ್ಛೆ ಇವರಿಗಿಲ್ಲ. ಏನೋ, ಮಾಡಬೇಕು ಮಾಡುತ್ತಿದ್ದಾರೆ. ಇವರು ಕಾಮಗಾರಿ ಪೂರೈಸಿದ ಮೂರೇ ದಿನಕ್ಕೆ ಈ ವ್ಯವಸ್ಥೆ ಹಾಳಾಗುತ್ತದೆ. ಅದಕ್ಕೆ ಮತ್ತೆ ಲಕ್ಷಾಂತರ ರೂ. ಎಸ್ಟಿಮೇಟ್ ಮಾಡಿ ಹಣ ಗುಳುಂ ಮಾಡುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅದರ ಮುಂದುವರೆದ ಭಾಗವಿದು. ಇದನ್ನು ಮುಡಾ ಆಯುಕ್ತರೇ ಬಂದು ಪರಿಶೀಲಿಸಲಿ. ಇದು ಸರಿ ಇದೆ ಎಂದು ಅವರು ಒಪ್ಪುವುದಾದರೆ ನಾವು ಸುಮ್ಮನಾಗುತ್ತೇವೆ. ಇಲ್ಲದಿದ್ದರೆ, ಈ ಕಾಮಗಾರಿ ಹೊಣೆ ಹೊತ್ತಿರುವ ಕಂಟ್ರಾಕ್ಟರ್ ಹಾಗೂ ಉಸ್ತುವಾರಿ ನೋಡಿಕೊಳ್ಳುತ್ತಿರುವ ಮುಡಾ ಇಂಜಿನಿಯರ್‌ಗೆ ತಕ್ಕ ಶಾಸ್ತಿ ಮಾಡದೇ ಬಿಡೆವು ಎಂದು ಅಲ್ಲಿನ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೇವರಾಜ ಅರಸುರವರ ಒಡನಾಡಿ ಎಂಎಲ್ಸಿ ವಿಶ್ವನಾಥ್‌ಗೆ ಅರಸು ಜಿಲ್ಲಾ ಮಟ್ಟದ ಪ್ರಶಸ್ತಿ

ಮೈಸೂರು, ಆ.19– ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಹೆಸರಿನಲ್ಲಿ ರಾಜ್ಯ ಸರ್ಕಾರ ಸ್ಥಾಪಿಸಿರುವ 'ಡಿ. ದೇವರಾಜ ಅರಸು ಜಿಲ್ಲಾ ಮಟ್ಟದ ಪ್ರಶಸ್ತಿ'ಗೆ ಅರಸು ಅವರ ಒಡನಾಡಿಗಳೂ ಆದ ವಿಧಾನ ಪರಿಷತ್ ಸದಸ್ಯ




ಅಡಗೂರು ಹೆಚ್. ವಿಶ್ವನಾಥ್ ಭಾಜನರಾಗಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ನಾಳೆ (ಆ.20) ಬೆಳಗ್ಗೆ 10.30ಕ್ಕೆ ನಡೆಯಲಿರುವ ಡಿ. ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ವಿಶ್ವನಾಥ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಅಡಗೂರು ಹೆಚ್.ವಿಶ್ವನಾಥ್ ಅವರು ವಿದ್ಯಾರ್ಥಿ ದೆಸೆಯಲ್ಲೇ ದೇವರಾಜ ಅರಸು ಅವರಿಂದ ಪ್ರಭಾವಿತರಾಗಿ, ಅಭಿಮಾನಿಯಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ವಕೀಲರಾಗಿದ್ದಾಗ ಗೇಣಿದಾರರ ಸಂಘ ರಚಿಸಿಕೊಂಡು ಬಡ ಗೇಣಿದಾರರ ಪರ ಹೋರಾಟ ರೂಪಿಸಿದ್ದರು. 1975ರಲ್ಲಿ

ಹಿಂದುಳಿದ ವರ್ಗಗಳ ಹರಿಕಾರ, ಬಡವರ, ದೀನ ದಲಿತರ ಶ್ರೇಯೋಭಿವೃದ್ಧಿ ಬಗ್ಗೆ ಸದಾ ಕಾಲ ಚಿಂತನೆ ನಡೆಸುತ್ತಿದ್ದ ಹಾಗೂ ನನ್ನ ಮಾರ್ಗದರ್ಶಕರಾದ ಡಿ. ದೇವರಾಜ ಅರಸು ಪ್ರಶಸ್ತಿ ಪಡೆಯುತ್ತಿರುವುದು ಅತೀವ ಸಂತಸವನ್ನುಂಟು ಮಾಡಿದೆ.
–ಅಡಗೂರು ಹೆಚ್.ವಿಶ್ವನಾಥ್.



ಅರಸು ಅವರು ಭೂ ಸುಧಾರಣಾ ಕಾಯ್ದೆ ಜಾರಿಗೆ ತಂದಾಗ ಕೆ.ಆರ್.ನಗರದಲ್ಲಿ ವಕೀಲರಾಗಿದ್ದ ವಿಶ್ವನಾಥ್ ಅವರನ್ನು 'ಲಯನ್ ಟ್ರಿಬ್ಯೂನಲ್' ಸದಸ್ಯರಾಗಿ ನೇಮಕ ಮಾಡಿದ್ದರು. ಉಳುವವನಿಗೆ ಭೂಮಿಯ ಒಡೆತನ ನೀಡುವ ಸಲುವಾಗಿ ಜಾರಿಗೆ ಬಂದಿದ್ದ ಭೂ ಸುಧಾರಣಾ ಕಾಯ್ದೆ ಅನುಷ್ಠಾನಕ್ಕೆ ಲಯನ್ ಟ್ರಿಬ್ಯೂನಲ್ ಸಹಕಾರಿಯಾಗಿತ್ತು. ಉಳುವ ರೈತನಿಗೆ ಅಗತ್ಯವಿರುವ ದಾಖಲೆಗಳನ್ನು ಕಲೆಹಾಕಿ ಅವರಿಗೆ ಭೂಮಿಯ ಒಡೆತನ ನೀಡಲು ಸಹಕರಿಸುವುದು ಈ ಟ್ರಿಬ್ಯೂನಲ್‌ನ ಕೆಲಸವಾಗಿತ್ತು. ಇದರಿಂದಾಗಿ ವಿಶ್ವನಾಥ್ ಅವರಿಗೆ ಅನೇಕ ರೈತರ ಸಂಪರ್ಕ ಬೆಳೆಯಿತು.

ದೇವರಾಜ ಅರಸು ಅವರ ಆಡಳಿತಾವಧಿಯಲ್ಲೇ ಕಾವೇರಿ ಗ್ರಾಮೀಣ ಬ್ಯಾಂಕ್ ಸ್ಥಾಪನೆಯಾಗಿದ್ದು, ಈ ಬ್ಯಾಂಕ್‌ನ ಕಾನೂನು ಸಲಹೆಗಾರರಾಗಿ ವಿಶ್ವನಾಥ್ ಅವರನ್ನು ಅರಸು ಅವರು ನೇಮಕ ಮಾಡಿದ್ದರು. ಅಲ್ಲದೆ, ರಾಜಕಾರಣದಲ್ಲೂ ಕೂಡ ವಿಶ್ವನಾಥ್ ಅವರ ಬೆಳವಣಿಗೆಗೆ ಸಹಕರಿಸಿದ್ದ ದೇವರಾಜ ಅರಸು, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ವಿಶ್ವನಾಥ್ ಅವರನ್ನು ನೇಮಕ ಮಾಡಿದ್ದರು.

ಆ ವೇಳೆ 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವ ಮಹತ್ಕಾರ್ಯದಲ್ಲಿ ಯುವ ಕಾಂಗ್ರೆಸ್ ತೊಡಗಿತ್ತು. ಈ ಮೂಲಕ ವಿಶ್ವನಾಥ್ ಅವರು ದೇವರಾಜ ಅರಸು ಅವರ ಮಾರ್ಗದರ್ಶನದಲ್ಲಿ ಸಾಲ ವಿಮೋಚನೆ, ಜೀತ ಪದ್ಧತಿ ನಿರ್ಮೂಲನೆ ಮುಂತಾದ ಕಾರ್ಯಗಳಲ್ಲಿ ತೊಡಗಿಸಿಕೊಂಡು ಜನಮನ್ನಣೆ ಪಡೆದಿದ್ದರು. 1978ರ ವಿಧಾನಸಭೆ ಚುನಾವಣೆಯಲ್ಲಿ ದೇವರಾಜ ಅರಸು ಅವರು ಕೆ.ಆರ್.ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ವಿಶ್ವನಾಥ್ ಅವರನ್ನು ಕಣಕ್ಕಿಳಿಸಿದ್ದರು. ಆ ಚುನಾವಣೆಯಲ್ಲಿ 10 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿ ವಿಶ್ವನಾಥ್ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು.

ತನ್ನ ರಾಜಕೀಯ ಜೀವನದುದ್ದಕ್ಕೂ ದೇವರಾಜ ಅರಸು ಅವರ ಕಾರ್ಯ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ವಿಶ್ವನಾಥ್ ಕಾರ್ಯೋನ್ಮುಖರಾಗಿದ್ದಾರೆ. ಹುಣಸೂರನ್ನು ಜಿಲ್ಲಾ ಕೇಂದ್ರವನ್ನಾಗಿಸಿ ಅದಕ್ಕೆ ಡಿ.ದೇವರಾಜ ಅರಸು ಅವರ ಹೆಸರು ನಾಮಕರಣ ಮಾಡಬೇಕು ಎಂಬ ಹೋರಾಟವನ್ನೂ ವಿಶ್ವನಾಥ್ ಈಗಾಗಲೇ ಆರಂಭಿಸಿದ್ದಾರೆ. ಡಿ.ದೇವರಾಜ ಅರಸು ಅವರ ಗರಡಿಯಲ್ಲಿ ಪಳಗಿದ ಹೆಚ್.ವಿಶ್ವನಾಥ್ ಅವರಿಗೆ ನಾಳೆ ಡಿ.ದೇವರಾಜ ಅರಸು ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.

ಒಂದನೇ ಪುಟದಿಂದ

110 ಕಿ.ಮೀ. ವಿದ್ಯುತ್ ದೀಪಾಲಂಕಾರ

ಮಾಡಲಾಗುವುದು ಎಂದು ಸೆಸ್ಕ್ ಪ್ರಧಾನ ವ್ಯವಸ್ಥಾಪಕ (ಖರೀದಿ) ಕೆ.ಎಂ. ಮುನಿಗೋಪಾಲರಾಜು ತಿಳಿಸಿದ್ದಾರೆ. ಕೋವಿಡ್ ಹಿನ್ನೆಲೆಯಲ್ಲಿ 2020ರ ದಸರಾ ಮಹೋತ್ಸವದಲ್ಲಿ ಕೇವಲ 50 ಕಿ.ಮೀ. ಹಾಗೂ ಕಳೆದ ವರ್ಷ 100 ಕಿ.ಮೀ. ವ್ಯಾಪ್ತಿಗೆ ದೀಪಾಲಂಕಾರ ಮಾಡಲಾಗಿತ್ತು. ಆದರೆ ಈ ಬಾರಿ 110 ಕಿ.ಮೀ.ವರೆಗೆ ಪಶ್ಚಿಮ ಬಂಗಾಳ ರಾಜ್ಯದಿಂದ ವಿಶೇಷ ಎಲ್‌ಇಡಿ ಬಲ್ಬ್‌ಗಳನ್ನು ತರಿಸಿ ಮತ್ತಷ್ಟು ವಿನೂತನವಾಗಿ ವಿದ್ಯುತ್ ದೀಪಾಲಂಕಾರ ಮಾಡಲು ಸರ್ಕಾರದ ನಿರ್ದೇಶನದಂತೆ ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿ ಅವರು ತಿಳಿಸಿದರು. ಕೊಲ್ಕತ್ತಾದಲ್ಲಿ ನಡೆಯುವ ದುರ್ಗಾ ಪೂಜೆಗೆ ಮಾಡುವ ರೀತಿಯಲ್ಲೇ ಮೈಸೂರು ದಸರಾ ಮಹೋತ್ಸವಕ್ಕೆ ದೀಪಾಲಂಕಾರ ಮಾಡಿ ಕಣ್ಮನ ತಣಿಸುವಂತೆ ಮಾಡಲಾಗುವುದು. ಅದಕ್ಕಾಗಿ ಸದ್ಯದಲ್ಲೇ ಟೆಂಡರ್ ಕರೆಯಲು ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಮುನಿಗೋಪಾಲರಾಜು ತಿಳಿಸಿದರು.

ಐವತ್ತು ಸಾವಿರ ನಿವೇಶನ ಹಂಚಿಕೆ

ಬಡಾವಣೆಯಲ್ಲಿ ಶೇಕಡ 50ರಷ್ಟು ನಿವೇಶನಗಳನ್ನು ಅವರಿಗೇ ಬಿಟ್ಟು ಕೊಡುವ ತೀರ್ಮಾನ ಕೈಗೊಳ್ಳಲಾಗಿದೆ ಎಂದರು. ಸುಪ್ರೀಂಕೋರ್ಟ್‌ನಿಂದ ಹಸಿರು ನಿಶಾನೆ ಸಿಕ್ಕ ಹಿನ್ನೆಲೆಯಲ್ಲಿ ಮುಂದಿನ ಹೆಜ್ಜೆ ಇಡಲು ಸರ್ಕಾರ ಕ್ರಮ ಕೈಗೊಂಡಿದ್ದು ನಿವೇಶನಗಳ ಹಂಚಿಕೆ ಮಾಡಲು ಅಕ್ಟೋಬರ್ ಅಂತ್ಯದ ವೇಳೆಗೆ ಜನರಿಂದ ಅರ್ಜಿ ಸ್ವೀಕರಿಸಲು ಆರಂಭಿಸುವುದಾಗಿ ನುಡಿದರು. ಆರ್ಥಿಕ ದುರ್ಬಲರಿಗಾಗಿ ಮುಖ್ಯಮಂತ್ರಿಗಳ ವಸತಿ ಯೋಜನೆಯಡಿ ನಿರ್ಮಾಣವಾಗುತ್ತಿರುವ ಒಂದು ಲಕ್ಷ ಮನೆಗಳ ಪೈಕಿ ನಲವತ್ತೊಂಭತ್ತು ಸಾವಿರ ಮನೆಗಳು ಸಿದ್ಧವಾಗಿದ್ದು ಎರಡು ಸಾವಿರ ಮನೆಗಳ ಹಂಚಿಕೆ ಕಾರ್ಯ ಪೂರ್ಣವಾಗಿದೆ ಎಂದು ನುಡಿದರು.

ಯೋಜನೆಯಡಿ ಫಲಾನುಭವಿಗಳಿಂದ ಮುಂಚಿತವಾಗಿ ಹಣ ಪಡೆಯಲು ಸಾಧ್ಯವಿಲ್ಲದೇ ಇರುವುದರಿಂದ ಹುಡ್ಕೋ ವತಿಯಿಂದ ಒಂದು ಸಾವಿರ ಕೋಟಿ ರೂ ಸಾಲ ಪಡೆಯಲು ಬಯಸಲಾಗಿದೆ ಎಂದು ಹೇಳಿದರು. ಈ ಯೋಜನೆಯ ಕಾಮಗಾರಿಗೆ ಕೊರೊನಾದಿಂದ ಹಿನ್ನಡೆಯಾಗಿತ್ತು ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು,ಇಷ್ಟಾದರೂ ಅದನ್ನು ಸಾಧ್ಯವಾದಷ್ಟು ಬೇಗ ಮುಕ್ತಾಯದ ಹಂತಕ್ಕೆ ತಂದಿದ್ದೇವೆ ಎಂದು ಸಮರ್ಥನೆ ಮಾಡಿಕೊಂಡರು.

ಸರ್ಕ್ಯೂಟ್ ಉದ್ಘಾಟನೆಗೆ ಸಿಎಂ ಸೂಚನೆ

ಸಾಹಸ ಕ್ರೀಡೆ ಹಾಗೂ ಮನರಂಜನಾ ಚಟುವಟಿಕೆಗಳನ್ನೂ ಸೇರ್ಪಡೆಗೊಳಿಸುವಂತೆ ತಿಳಿಸಿದರು. ರಾಜ್ಯದಲ್ಲಿರುವ ಸ್ಮಾರಕಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಈ ಆಯವ್ಯಯದಲ್ಲಿ ಘೋಷಿಸಿರುವ ಸ್ಮಾರಕಗಳನ್ನು ದತ್ತು ಪಡೆಯುವ ಯೋಜನೆಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸ್ಮಾರಕಗಳ ವಿವರ ಹಾಗೂ ತಗಲುವ ವೆಚ್ಚದ ಪಟ್ಟಿ ಸಿದ್ಧಪಡಿಸಿಕೊಂಡು, ವೆಬ್‌ಸೈಟ್ ರೂಪಿಸಬೇಕು ಎಂದರು.

ಜೊತೆಗೆ ಈ ಕುರಿತು ಕಾರ್ಪೊರೇಟ್ ಕಂಪನಿಗಳಿಗೆ ಖುದ್ದಾಗಿ ಪತ್ರ ಬರೆಯುವುದಾಗಿ ತಿಳಿಸಿದ ಮುಖ್ಯಮಂತ್ರಿಗಳು, ವಾಣಿಜ್ಯ ಮತ್ತು ಕೈಗಾರಿಕ ಇಲಾಖೆಯ ಆಯುಕ್ತರೊಂದಿಗೆ ಸಮನ್ವಯ ಸಾಧಿಸುವಂತೆ ಪ್ರವಾಸೋದ್ಯಮ ಇಲಾಖೆಗೆ ಸೂಚಿಸಿದರು. ಬದಾಮಿಯ ಗುಹೆಗಳನ್ನು ಇನ್ನಷ್ಟು ಆಕರ್ಷಕವಾಗಿಸುವ ಹಾಗೂ ಅಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸುವ ಕುರಿತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯೊಂದಿಗೆ ಸಭೆ ನಡೆಸಿ ಚರ್ಚಿಸುವುದಾಗಿ ಹೇಳಿದರು. ಪರ್ವತಮಾಲಾ ಮತ್ತು ರಾಜ್ಯ ಸರ್ಕಾರದ ಯೋಜನೆಗಳಡಿ ನಂದಿಬೆಟ್ಟ, ಯಾಣ, ಅಂಜನಾದ್ರಿ ಬೆಟ್ಟ, ಮುಳ್ಳಯ್ಯನಗಿರಿ ದತ್ತಪೀಠ ಮೊದಲಾದ ಕಡೆ ರೋಪ್‌ವೇ ನಿರ್ಮಿಸುವ ಕುರಿತು ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿ, ಶೀಘ್ರವಾಗಿ ಭೂಸ್ವಾಧೀನ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು ಎಂದರು.

ಕಡಲ ತೀರದಲ್ಲಿ ಪರಿಸರ ಸ್ನೇಹಿ ಪ್ರವಾಸೋದ್ಯಮ ಉತ್ತೇಜಿಸಲು ಸಿ.ಆರ್.ಝಡ್ ಮಾನದಂಡಗಳನ್ನು ಸಡಿಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ, ಅನುಮೋದನೆ ಪಡೆಯಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದರಿಂದ ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗಲಿದೆ. ಬೀದರ್ ಹಾಗೂ ಕಲಬುರಗಿ ಕೋಟೆಗಳ ಪುನರುಜ್ಜೀವನಕ್ಕೆ ಕ್ರಮ ವಹಿಸಲಾಗುತ್ತಿದ್ದು, ಇದರೊಂದಿಗೆ ಸುರಪುರ ಕೋಟೆಯನ್ನೂ ಸೇರ್ಪಡೆಗೊಳಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯಾಗಿರುವ 400 ಪ್ರವಾಸಿ ಮಾರ್ಗದರ್ಶಿಗಳಿಗೆ ಮಾಸಿಕ 2000 ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಅವರಿಗೆ ಹಂಪಿ ವಿಶ್ವವಿದ್ಯಾಲಯದಲ್ಲಿ ಸಂವಹನ ಕೌಶಲ್ಯ ತರಬೇತಿ ನೀಡಲು ಸಿದ್ಧತೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಹಾವೇರಿ ಜಿಲ್ಲೆಯ ನೆಲೆಯ ಧಾಮ, ಬಾಡ ಅರಮನೆ, ಶಿಲಾ ಉದ್ಯಾನ ಜನಪದ ವಿವಿ ವಸ್ತುಸಂಗ್ರಹಾಲಯ, ಶಿಶುನಾಳ ಹಾಗೂ ಸವಣೂರು ಒಳಗೊಂಡ ಪ್ರವಾಸಿ ಸರ್ಕ್ಯೂಟ್ ಪ್ರಾರಂಭಿಸಲು ಮುಖ್ಯಮಂತ್ರಿಗಳು ಸೂಚಿಸಿದರು.

ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟನ್ನು ಉಪಯುಕ್ತ ಮಾಹಿತಿಯೊಂದಿಗೆ, ಬಳಕೆದಾರ ಸ್ನೇಹಿಯಾಗಿ ಮರುವಿನ್ಯಾಸಗೊಳಿಸುವಂತೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಸ್ವತ್ತುಗಳ ಆಡಿಟ್ ನಡೆಸಿ, ಆದಾಯೋತ್ಪನ್ನ ತರುವಂತೆ ಮಾಡಲು ಕ್ರಮ ವಹಿಸುವಂತೆ ನಿರ್ದೇಶಿಸಿದರು. ರಾಜ್ಯದಲ್ಲಿ ಕಾಳಿ ನದಿ, ಆಲಮಟ್ಟಿ ಹಾಗೂ ಕಾವೇರಿ ನದಿ ಪ್ರದೇಶಗಳಲ್ಲಿ ಜಲಮಾರ್ಗಗಳನ್ನು ರೂಪಿಸಿ, ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವ ಕುರಿತು ಪ್ರಸ್ತಾವನೆ ಸಲ್ಲಿಸುವುದರ ಜೊತೆಗೆ ರಾಜ್ಯದ 10–12 ಕಡೆಗಳ ಬೀಚ್ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ, ಚಾರಣಕ್ಕೆ ಉತ್ತೇಜನ ಮೊದಲಾದ ಕ್ರಮ ಕೈಗೊಳ್ಳುವ ಮೂಲಕ ವಿದೇಶಿ ಪ್ರವಾಸಿಗರಷ್ಟೇ ಅಲ್ಲ, ಸ್ಥಳೀಯ ಪ್ರವಾಸಿಗರನ್ನೂ ಆಕರ್ಷಿಸಬೇಕೆಂದು ತಿಳಿಸಿದರು. ರಾಜ್ಯದ ಹಿಡ್ಲಲ್, ಕಬಿನಿ, ಗೊರೂರು ಅಣೆಕಟ್ಟು ಪ್ರದೇಶದಲ್ಲಿ ಉದ್ಯಾನವನಗಳ ಅಭಿವೃದ್ಧಿ ಕೈಗೊಳ್ಳುವಂತೆಯೂ ಮುಖ್ಯಮಂತ್ರಿಗಳು ಸೂಚಿಸಿದರು.

ಕಲಾತಂಡಗಳಿಂದ ಅರ್ಜಿ ಆಹ್ವಾನ

ಮೆರುಗು ಹೆಚ್ಚಿಸುವುದಕ್ಕೆ ಆದ್ಯತೆ ನೀಡಲಾಗಿದೆ. ಇದಕ್ಕಾಗಿ ರಾಜ್ಯದ ಎಲ್ಲಾ ಜಿಲ್ಲೆಗಳ ಕಲಾತಂಡಗಳಿಂದ ಅರ್ಜಿ ಆಹ್ವಾನಿಸಿದ್ದು, ತಜ್ಞ ಸಮಿತಿ ಮೂಲಕ ಆಯ್ಕೆ ಮಾಡಿ ಅಂತಿಮ ಪಟ್ಟಿ ಸಿದ್ಧಪಡಿಸಲು ನಿರ್ಧರಿಸಲಾಗಿದೆ.

ಸೆ.10ರ ಗಡುವು: ನವರಾತ್ರಿ ಉತ್ಸವ ಸೆ.26ರಂದು ಚಾಲನೆ ಪಡೆಯಲಿದ್ದು, ಅ.5ಕ್ಕೆ ಜಂಬೂಸವಾರಿ ನೆರವೇರಲಿದೆ. ಅದರಲ್ಲಿ ಭಾಗವಹಿಸಲು ಇಚ್ಛಿಸುವ ಎಲ್ಲಾ ಜಿಲ್ಲೆಗಳ ಸಾಂಸ್ಕೃತಿಕ ಹಾಗೂ ಜಾನಪದ ಕಲಾತಂಡಗಳು ಸೆ10ರೊಳಗೆ ಅರ್ಜಿ ಸಲ್ಲಿಸಬೇಕಿದೆ. ತಂಡದ ಉತ್ತಮ ಗುಣಮಟ್ಟದ ಫೋಟೋ, ಸದಸ್ಯರ ವಿವರ, ಅಂಚೆ ವಿಳಾಸ, ಮುಖ್ಯಸ್ಥರ ಮೊಬೈಲ್ ಸಂಖ್ಯೆಯನ್ನೊಳಗೊಂಡ ಅರ್ಜಿಯನ್ನು 'ಉಪ ವಿಶೇಷಾಧಿಕಾರಿಗಳು, ದಸರಾ ಮೆರವಣಿಗೆ ಉಪಸಮಿತಿ ಹಾಗೂ ಪೊಲೀಸ್ ಆಯುಕ್ತರು, ಮೈಸೂರು ನಗರ' ಅಥವಾ 'ಸಹ ಸಂಚಾಲಕರು, ದಸರಾ ಮೆರವಣಿಗೆ ಉಪ ಸಮಿತಿ ಮತ್ತು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು' ಈ ವಿಳಾಸಕ್ಕೆ ತಲುಪಿಸಬೇಕಿದೆ.

ತಜ್ಞರ ಆಯ್ಕೆ: ಅಗತ್ಯ ಲಗತ್ತುಗಳೊಂದಿಗೆ ಅರ್ಜಿ ಸಲ್ಲಿಸುವ ಕಲಾತಂಡಗಳಲ್ಲಿ ನಿಗದಿತ ಸಂಖ್ಯೆಯ ತಂಡಗಳನ್ನಷ್ಟೇ ಆಯ್ಕೆ ಮಾಡಲಾಗುತ್ತದೆ. ಕಲಾತಂಡಗಳು ಪ್ರಸ್ತುತಪಡಿಸುವ ಕಲಾಪ್ರಕಾರ, ಅದರ ವಿಶೇಷತೆ, ಕಲಾವಿದರ ಪೋಷಾಕು ಮತ್ತಿತರ ಅಂಶಗಳ ಆಧಾರದಲ್ಲಿ ತಜ್ಞರ ಸಮಿತಿ ಆಯ್ಕೆ ಮಾಡಲಿದೆ. ಬಳಿಕ ಆಯ್ಕೆಯಾಗುವ ಕಲಾತಂಡಗಳಿಗೆ ಜಂಬೂಸವಾರಿ ಮೆರವಣಿಗೆಯಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದು ದಸರಾ ಮೆರವಣಿಗೆ ಹಾಗೂ ಪಂಜಿನ ಕವಾಯತು ಉಪಸಮಿತಿಯ ಉಪ ವಿಶೇಷಾಧಿಕಾರಿಯಾದ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ವಿಶೇಷತೆ ಆದ್ಯತೆ: ನಾಡದೇವತೆ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿ ಪ್ರತಿಷ್ಠಾಪಿತ ಚಿನ್ನದ ಅಂಬಾರಿಯನ್ನು ಗಜರಾಜ ಹೊತ್ತು ಸಾಗುವುದನ್ನು ಕಣ್ತುಂಬಿಕೊಂಡು ಧನ್ಯರಾಗುವ ಜನ, ಇದರೊಂದಿಗಿನ ವೈಭವದ ಮೆರವಣಿಗೆಯನ್ನೂ ಆಸ್ವಾದಿಸುತ್ತಾರೆ. ಗಜಪಡೆಯ ಜೊತೆ ವಿವಿಧ ಕಲಾತಂಡಗಳು ಆರಮನೆಯಿಂದ ಬನ್ನಿಮಂಟಪದವರೆಗಿನ ಮೆರವಣಿಗೆಯಲ್ಲಿ ತೆರಳುತ್ತವೆ. ಕಂಸಾಳೆ, ವೀರಗಾಸೆ, ಮರಗೋಲು, ಡೊಳ್ಳು ಕುಣಿತ ಇನ್ನಿತರ ಕಲಾ ಪ್ರಕಾರಗಳ ಪ್ರದರ್ಶನ ಸಹಜ. ಈ ಸಾಂಪ್ರದಾಯಿಕ ಕಲಾತಂಡಗಳು ಮತ್ತಷ್ಟು ಆಕರ್ಷಣೀಯ ಪ್ರದರ್ಶನ ನೀಡಲು ಸಜ್ಜಾಗಿವೆ ಎನ್ನಲಾಗಿದೆ. ಒಟ್ಟಾರೆ ಈ ಬಾರಿ ಜಂಬೂಸವಾರಿಯಲ್ಲಿ ಹೊಸತನದೊಂದಿಗೆ ಸಾಂಪ್ರದಾಯಿಕ ಕಲೆ ಅನಾವರಣಗೊಳ್ಳಲಿದೆ.

ಬಿಜೆಪಿ ಕಾರ್ಯಕರ್ತರ ಬಂಧನ

ಘೋಷಣೆಗಳನ್ನು ಕೂಗುತ್ತ ಅವರ ಕಾರಿನತ್ತ ಪೊಲೀಸ್ ಸರ್ಪಗಾವಲು ಭೇದಿಸಿ ಮುನ್ನುಗ್ಗಲು ಯತ್ನಿಸಿದರು. ಅಲ್ಲದೆ ಮುಂದೆ ಹೋಗುತ್ತಿದ್ದ ಕಾರಿನ ಮೇಲೆ ಕಾರ್ಯಕರ್ತನೊಬ್ಬ ಕೋಳಿ ಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದ. ಮತ್ತೊಬ್ಬರು ಸಿದ್ದರಾಮಯ್ಯ ಬಳಿ ಸಾವರ್ಕರ್ ಫೋಟೋ ಹಾಕಿದರು. ಪ್ರತಿಭಟನೆ ಹಾಗೂ ಕೋಳಿ ಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂಭತ್ತು ಮಂದಿ ಬಿಜೆಪಿ ಹಾಗೂ ಹಿಂದು ಪರ ಸಂಘಟನೆಯ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದರು. ಬಿಜೆಪಿ ತಾಲೂಕು ಅಧ್ಯಕ್ಷ ಮನುಕುಮಾರ್, ವಕ್ತಾರ ಕೆ.ಜಿ.ಮನು, ಕೂಡುಮಂಗಳೂರು ಗ್ರಾ.ಪಂ.ಉಪಾಧ್ಯಕ್ಷ ಭಾಸ್ಕರ್ ನಾಯಕ್, ಗುಡ್ಡೆಹೊಸೂರು ಗ್ರಾ.ಪಂ. ಸದಸ್ಯರಾದ ಪ್ರವೀಣ್, ಮಣಿಕಂಠ ಮುಖಂಡರಾದ ಕೃಷ್ಣಪ್ಪ, ಕೆ.ಆರ್.ಮಂಜುಳಾ, ಗೌತಮ್, ನಿತ್ಯಾನಂದ ಸೇರಿದಂತೆ 9 ಮಂದಿ ವಿರುದ್ಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 120ಬಿ,339,341,141 146,147 ಸೆಕ್ಷನ್ ಅಡಿ ಠಾಣಾಧಿಕಾರಿ ಚಂದ್ರಶೇಖರ್ ಮೊಕದ್ದಮೆ ದಾಖಲಿಸಿದ್ದರು. ಪೊಲೀಸರು ಗುರುವಾರ ರಾತ್ರಿ ನ್ಯಾಯಾಧೀಶರ ಮುಂದೆ ಏಳು ಮಂದಿಯನ್ನು ಹಾಜರು ಪಡಿಸಿದರು. ಇವರಿಗೆ ನ್ಯಾಯಾಧೀಶರು ಜಾಮೀನು ಮಂಜೂರು ಮಾಡಿದರು. ಈ ಹಿನ್ನೆಲೆಯಲ್ಲಿ ಏಳು ಮಂದಿಯನ್ನು ತಡರಾತ್ರಿಯಲ್ಲೇ ಬಿಡುಗಡೆ ಮಾಡಲಾಯಿತು. ಉಳಿದ ಇಬ್ಬರಿಗೆ ಶುಕ್ರವಾರ ಇಲ್ಲಿನ ಹೆಚ್ಚುವರಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಶಾಸಕ ರಂಜನ್ ಭೇಟಿ: ಪೊಲೀಸರು ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿದ ಹಿನ್ನೆಲೆಯಲ್ಲಿ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಗುರುವಾರ ರಾತ್ರಿ ಕುಶಾಲನಗರ ಡಿವೈಎಸ್ಪಿ ಕಚೇರಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದರು. ಬಂಧನ ಸಂಬಂಧ ಡಿವೈಎಸ್ಪಿ ಚಂದ್ರಶೇಖರ್ ಅವರೊಂದಿಗೆ ಚರ್ಚೆ ನಡೆಸಿದರು. ಅಲ್ಲದೆ ಗುಡ್ಡೆಹೊಸೂರಿನಲ್ಲಿ ನಡೆದ ಘಟನೆಯ ಕುರಿತು ಮಾಹಿತಿ ಪಡೆದುಕೊಂಡು ಬಿಜೆಪಿ ಕಾರ್ಯಕರ್ತರನ್ನು ಭೇಟಿ ಮಾಡಿ ಧೈರ್ಯ ತುಂಬಿದರು. ಈ ಸಂದರ್ಭ ಮಾತನಾಡಿದ ಶಾಸಕ ರಂಜನ್ ಸಿದ್ದರಾಮಯ್ಯ ಅವರ ಕಾರಿಗೆ ಬಿಜೆಪಿ ಕಾರ್ಯಕರ್ತರು ಯಾರು ಮೊಟ್ಟೆ ಎಸೆದಿಲ್ಲ.ಈ ಬಗ್ಗೆ ತನಿಖೆ ನಡೆಸಲಿ ಎಂದರು.

ನಮಗೆ ಸಂಬಂಧವಿಲ್ಲ : ವಿಪಕ್ಷ ನಾಯಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದ ಘಟನೆಗೂ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರಿಗೂ ಯಾವುದೇ ಸಂಬಂಧ ಇಲ್ಲ. ಇದೊಂದು ಉದ್ದೇಶ ಪೂರ್ವಕ ವ್ಯವಸ್ಥಿತ ಪಿತೂರಿಯಾಗಿದ್ದು, ಈ ಬಗ್ಗೆ ಪೊಲೀಸರು ನ್ಯಾಯಯುತವಾಗಿ ತನಿಖೆ ನಡೆಸಬೇಕು ಎಂದು ಬಂಧನಕ್ಕೊಳಗಾಗಿ ಬಿಡುಗಡೆಗೊಂಡ ಬಿಜೆಪಿ ಘಟಕದ ತಾಲೂಕು ವಕ್ತಾರ ಕೆ.ಜಿ.ಮನು ತಿಳಿಸಿದ್ದಾರೆ.

ಶ್ರೀ ಶಿವರಾತ್ರಿ ಪ್ರಶಸ್ತಿ ಪ್ರಧಾನ; ಮೂರು ಕೃತಿಗಳ ಲೋಕಾರ್ಪಣೆ

ನೈಜ ಸಾಧಕರಿಗಿಂತ ಸಮಯ ಸಾಧಕರಿಗೆ ಪ್ರಶಸ್ತಿ ಸಲ್ಲುತ್ತಿವೆ: ಕಸಾಪ ಅಧ್ಯಕ್ಷ ಡಾ. ಮಹೇಶ್ ಜೋಷಿ

ಮೈಸೂರು, ಆ.19(ಎಂಟಿವೈ)– ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ನೀಡುವ ಪ್ರತಿಷ್ಠಿತ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ದತ್ತಿ ಪ್ರಶಸ್ತಿ ಪ್ರದಾನ ಹಾಗೂ ಮೂರು ಕೃತಿಗಳ ಲೋಕಾರ್ಪಣಾ ಸಮಾರಂಭ ಶುಕ್ರವಾರ ನಡೆಯಿತು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2020ನೇ ಸಾಲಿನ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಯನ್ನು ಅಥಣಿ ಮೋಟಗಿ ಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು 25 ಸಾವಿರ ರೂ. ಗೌರವ ಧನ, ಸ್ಮರಣಿಕೆ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. 2021ನೇ ಸಾಲಿನ ಎಂ.ವೀರಪ್ಪ ದತ್ತಿ ಪ್ರಶಸ್ತಿಯನ್ನು ಬೆಂಗಳೂರಿನ ಹಿರಿಯ ಕಲಾವಿದ ಜಿ.ಆರ್. ಗೋವಿಂದ ರಾಜು ಹಾಗೂ ಡಿ.ವಿ.ಹಾಲಭಾವಿ ಪ್ರಶಸ್ತಿಯನ್ನು ಮಂಗಳೂರಿನ ಕಲಾವಿದ ಕೆ.ಪುರುಷೋತ್ತಮ್ ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು.

ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ಭಾಜನರಾದ ಅಥಣಿ ಮೋಟಗಿ ಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿ ಅವರು ರಚಿಸಿರುವ 216 ವಿಶ್ವವಿಭೂತಿಗಳ ಜೀವನ ಹಾಗೂ ಸಾಧನೆಗಳನ್ನು ಪರಿಚಯಿಸುವ 'ಮಹಾತ್ಮರ ಚರಿತಾಮೃತ' ಕೃತಿಗೆ ಈ ಪ್ರಶಸ್ತಿ ಲಭಿಸಿದೆ. 2020ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಗೆ ಭಾಜನರಾಗಿದ್ದ ಬೆಂಗಳೂರಿನ ಗೊಟ್ಟಿಗೆರೆಯ ಸ್ವಾಮಿ ವಿವೇಕಾನಂದ ಶೈಕ್ಷಣಿಕ ಅನುಸಂಧಾನದ ಶೈಕ್ಷಣಿಕ ನಿರ್ದೇಶಕ ಡಾ.ಹೆಚ್.ಎನ್.ಮುರುಳೀಧರ್ ಗೈರಾಗಿದ್ದರು. ಇವರ ಸುಳಿವ ಜಂಗಮ ಮತ್ತು ಅನಿಯಮ ಕೃತಿಗೆ ಈ ಪ್ರಶಸ್ತಿ ಬಂದಿದೆ.

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ 1983 ರಿಂದ ಸಾಹಿತ್ಯ, ಧರ್ಮ, ಸಂಸ್ಕೃತಿ ಕುರಿತಂತೆ ಪ್ರಕಟವಾಗುವ ಉತ್ತಮ ಕೃತಿಗೆ ಪ್ರತಿ ವರ್ಷವೂ ಈ ಪ್ರಶಸ್ತಿ ನೀಡಲಾಗುತ್ತಿದೆ. ಈವರೆಗೆ 32 ಕೃತಿಗಳಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ 2020ನೇ ಸಾಲಿನ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಯನ್ನು ಅಥಣಿ ಮೋಟಗಿ ಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿ ಅವರಿಗೆ, 2021ನೇ ಸಾಲಿನ ಎಂ.ವೀರಪ್ಪ ದತ್ತಿ ಪ್ರಶಸ್ತಿಯನ್ನು ಬೆಂಗಳೂರಿನ ಹಿರಿಯ ಕಲಾವಿದ ಜಿ.ಆರ್. ಗೋವಿಂದರಾಜು ಹಾಗೂ ಡಿ.ವಿ.ಹಾಲಭಾವಿ ಪ್ರಶಸ್ತಿಯನ್ನು ಮಂಗಳೂರಿನ ಕಲಾವಿದ ಕೆ.ಪುರುಷೋತ್ತಮ್ ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು. ಚಿತ್ರದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗದಗಿನ ಶಿವಾನಂದ ಮಠದ ಶ್ರೀ ಸದಾಶಿವಾನಂದ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ್ ಜೋಷಿ ಹಾಗೂ ಇನ್ನಿತರರನ್ನು ಕಾಣಬಹುದು.

ಕೃತಿಗಳ ಬಿಡುಗಡೆ: ಇದೇ ಕಾರ್ಯಕ್ರಮದಲ್ಲಿ 3 ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಜೆಎಸ್‌ಎಸ್ ಗ್ರಂಥಮಾಲೆಯಿಂದ ಪ್ರಕಟವಾಗಿರುವ ಪ್ರೊ.ಚಂದ್ರಶೇಖರಯ್ಯ ರಚಿತ 'ದಿ ಹೆರಿಟೇಜ್ ಆಫ್ ಸುತ್ತೂರು ಮಠ', ಜಿ.ಎಂ.ಶಿವಪ್ರಸಾದ್ ರಚನೆಯ 'ಕ್ಯಾತನಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯ' ಮತ್ತು ಪ್ರೊ.ಎಂ. ನಟರಾಜ್ ಅವರ 'ನಾಟ್ಯ ಕಲಾವಿಶಾರದ ಎಂ.ಸಿ. ಮಹದೇವಸ್ವಾಮಿ' ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ್ ಜೋಷಿ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ನೈಜ ಸಾಧಕರಿಗಿಂತ ಸಮಯ ಸಾಧಕರಿಗೆ ವಿವಿಧ ಪ್ರಶಸ್ತಿಗಳು ಲಭಿಸುತ್ತಿದೆ. ಸಾಧನೆಯಿಂದಾಗಿ ಪ್ರಶಸ್ತಿ ಪಡೆದುಕೊಳ್ಳುವವರಿಗಿಂತ ಲಾಭಿ ಮಾಡಿ ಪ್ರಶಸ್ತಿ ಹೊಡೆದುಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಜೆಎಸ್‌ಎಸ್ ಸಂಸ್ಥೆಯು ಅರ್ಹ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಅನುಕರಣೀಯ ಎಂದು ಅಭಿಪ್ರಾಯಪಟ್ಟರು.

'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ' ಸ್ವೀಕರಿಸಿದ ಬಳಿಕ ಶ್ರೀ ಪ್ರಭುಚನ್ನಬಸವ ಸ್ವಾಮಿ ಮಾತನಾಡಿ, ಅನೇಕ ಸಾಹಿತಿಗಳು ಪ್ರಶಸ್ತಿಯನ್ನು ಪಡೆದುಕೊಳ್ಳುತ್ತಿರುವುದನ್ನು 30 ವರ್ಷದ ಹಿಂದೆ ಒಂದು ಮೂಲೆಯಲ್ಲಿ ನಿಂತು ಗಮನಿಸುತ್ತಿದ್ದೆ. ಅದನ್ನು ನೋಡಿ ನಾವೆಲ್ಲ ಈ ರೀತಿಯಲ್ಲಿ ಆಗಲು ಸಾಧ್ಯವೇ? ಎಂಬ ಪ್ರಶ್ನೆ ನನಗೆ ಕಾಡಿತ್ತು. ಆದರೀಗ ಗುರುಗಳ ಆಶೀರ್ವಾದದ ಫಲವಾಗಿ ಈ ಪ್ರಶಸ್ತಿಗೆ ಭಾಜನರಾಗಿದ್ದೇನೆ. ಎಲ್ಲರಿಗೂ ಭಾಗ್ಯಗಳು ಒಲಿದು ಬರುತ್ತದೆ. ಆದರೆ, ಇಂತಹ ಭಾಗ್ಯ ನನಗೆ ಬಂದಿರುವುದು ಜೀವನ ಅವಿಸ್ಮರಣೀಯ ಕ್ಷಣ. ಕಾಯಕ, ದಾಸೋಹ, ಸಮಾಜಸೇವೆ ಎಂದರೆ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ನೆನಪಾಗುತ್ತಾರೆ ಎಂದರು.

ಈ ಮಠದ ವಿದ್ಯಾರ್ಥಿಯಾಗಿದ್ದ ಅರ್ಥಶಾಸ್ತ್ರಜ್ಞ ಡಾ.ಡಿ.ಎಂ.ನಂಜುಂಡಪ್ಪ ಅವರು ಒಂದು ಮಾತು ಹೇಳಿದ್ದರು. 'ನಾನು ಮಹಾಗುರುವಿನ ದೃಷ್ಟಿಗೆ ಬೀಳದಿದ್ದರೆ ಯಾವುದೋ ಮೂಲೆಯಲ್ಲಿ ಬಿದ್ದ ಕಸವಾಗಿ ಹೋಗುತ್ತಿದ್ದೆ. ಯಾವಾಗ ಮಹಾಗುರುವಿನ ದೃಷ್ಟಿಗೆ ಬಿದ್ದೆನೋ ಆವಾಗ ನನ್ನ ಬದುಕು ಬದಲಾಯಿತು. ಗುರುವಿನ ಅಂತಃಕರಣದಿಂದ ಜೀವನದಲ್ಲಿ ಎಲ್ಲವನ್ನು ಸಾಧಿಸಲು ಸಾಧ್ಯವಾಯಿತೆಂದು ಸ್ಮರಿಸಿದ್ದರು ಎಂದು ತಿಳಿಸಿದರು.

ಜಿಲ್ಲಾ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕ ಬಿ.ಮಂಜುನಾಥ್ ಮಾತನಾಡಿ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯದ ಲಾಭವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು. ಇದರ ಮೂಲಕ ಪುಸ್ತಕ, ದಿನಪತ್ರಿಕೆಗಳು ಇನ್ನಿತರ ಕೃತಿಗಳನ್ನು ಓದಬಹುದು. ಇದಕ್ಕಾಗಿ ಉಚಿತವಾಗಿ ನೋಂದಣಿ ಮಾಡಿಕೊಳ್ಳುವ ಮೂಲಕ ಇದರ ಪ್ರಯೋಜನ ಪಡೆದುಕೊಳ್ಳಬಹುದು. ಮೈಸೂರಿನ ಪೀಪಲ್ ಪಾರ್ಕ್‌ನಲ್ಲಿರುವ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಅಡ್ಡಿ ಎದುರಾಗಿತ್ತು. ಇದರಿಂದಾಗಿ 30 ವರ್ಷ ಕಾಲ ಇದು ನೆನೆಗುದಿಗೆ ಬಿದ್ದಿತ್ತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಈ ಸಮಸ್ಯೆಯನ್ನು ಬಗೆಹರಿಸಿದರು. ಇದರ ಫಲವಾಗಿ ಇದೀಗ ಅತ್ಯುತ್ತಮ ಕಟ್ಟಡ ನಿರ್ಮಾಣವಾಗಿದೆ ಎಂದು ಸ್ಮರಿಸಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗದಗಿನ ಶಿವಾನಂದ ಮಠದ ಶ್ರೀ ಸದಾಶಿವಾನಂದ ಸ್ವಾಮೀಜಿ ವಹಿಸಿದ್ದರು.

ಪಿಓಪಿ ಗಣಪತಿ ಮಾರಾಟಕ್ಕೆ ನಿರ್ಬಂಧ: ಪಾಲಿಕೆ ಅಧಿಕಾರಿಗಳ ಕಾರ್ಯಾಚರಣೆ

ಪರಿಸರ ಪ್ರೇಮಿ ಮಣ್ಣಿನ ವಿಗ್ರಹ ಪ್ರತಿಷ್ಠಾಪನೆಗೆ ಸಲಹೆ



ಮೈಸೂರು, ಆ.19(ಆರ್‌ಕೆ)–ಪಿಓಪಿ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಗಣಪತಿ ವಿಗ್ರಹ ಮಾರಾಟ ನಿರ್ಬಂಧಿಸಿರುವ ಮೈಸೂರು ನಗರ ಪಾಲಿಕೆ, ಇಂತಹ ವಿಗ್ರಹಗಳ ಮಾರಾಟ ಮಾಡುವವರ ವಿರುದ್ಧ ಕಾರ್ಯಾಚರಣೆ ಆರಂಭಿಸಿದೆ.

ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ.ನಾಗರಾಜ್ ನೇತೃತ್ವದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ರಮೇಶ್, ಪಾಲಿಕೆ ಆರೋಗ್ಯ ನಿರೀಕ್ಷಕರುಗಳೊಂದಿಗೆ ಬುಧವಾರದಿಂದ ಮೈಸೂರು ನಗರದಾದ್ಯಂತ ರಸ್ತೆ, ಸರ್ಕಲ್‌ಗಳಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅಧಿಕಾರಿ ಗಳು, ಪಿಓಪಿಯಿಂದ ಮಾಡಿದ ಗಣಪತಿ ಮೂರ್ತಿಗಳನ್ನು ಜಪ್ತಿ ಮಾಡುತ್ತಿದ್ದಾರೆ.

ಆಗಸ್ಟ್ 30 ಮತ್ತು 31 ರಂದು ನಡೆಯಲಿರುವ ಗೌರಿ–ಗಣೇಶ ಚತುರ್ಥಿ ಹಿನ್ನೆಲೆಯಲ್ಲಿ ಈಗಾಗಲೇ ವಿವಿ ಮೊಹಲ್ಲಾದ ಟೆಂಪಲ್ ರಸ್ತೆ, ವಾತ್ಯ ಮಂಡಳಿ ಸರ್ಕಲ್, ಹೆಬ್ಬಾಳು, ಪಡುವಾರಹಳ್ಳಿ, ಅಗ್ರಹಾರ ಸರ್ಕಲ್ ಸೇರಿದಂತೆ ಮೈಸೂರು ನಗರದಾದ್ಯಂತ ರಸ್ತೆ, ಸರ್ಕಲ್‌ಗಳಲ್ಲಿ ಗೌರಿ–ಗಣೇಶನ ಮೂರ್ತಿಗಳ ಮಾರಾಟ ಆರಂಭಿಸಿದ್ದು, ಪರಿಸರಕ್ಕೆ ಹಾನಿ ಉಂಟು ಮಾಡುವ ಪಿಓಪಿಯಿಂದ ತಯಾರಿಸಿದ ದೊಡ್ಡ ದೊಡ್ಡ ಮೂರ್ತಿಗಳು ರಸ್ತೆಗಳಲ್ಲಿ ರಾರಾಜಿಸುತ್ತಿವೆ. ಈಗಾಗಲೇ ಸರ್ಕಾರವು ಮಣ್ಣಿನಿಂದ ಮಾಡಿದ ಪರಿಸರ ಸ್ನೇಹಿ ಗಣೇಶನ ಮೂರ್ತಿಗಳನ್ನು ಮಾತ್ರ ಪೂಜಿಸಿ ಯಾವುದೇ ರೀತಿಯಲ್ಲೂ ಪರಿಸರ ಮಾಲಿನ್ಯ ಉಂಟಾಗದಂತೆ ಕೊನೆಗೆ ವಿಸರ್ಜಿಸಬೇಕೆಂದು ಅಧಿ ಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ ಅದನ್ನು ಅನುಷ್ಠಾನಗೊಳಿಸಲು ಮೈಸೂರು ಮಹಾನಗರ ಪಾಲಿಕೆಯು ಕಾರ್ಯಪ್ರವೃತ್ತವಾಗಿದೆ.

ಪರಿಸರ ಇಲಾಖೆಯ ನಿಯಮದಂತೆ ಮಣ್ಣಿನಿಂದ ತಯಾರಿಸಿದ ಗೌರಿ–ಗಣೇಶನ ಮೂರ್ತಿಗಳನ್ನು ಮಾತ್ರ ಮಾರಾಟ ಮಾಡುವಂತೆ ಪರಿಶೀಲನೆ ವೇಳೆ ಸೂಚನೆ ನೀಡುತ್ತಿರುವ ಅಧಿಕಾರಿಗಳು, ಪಿಓಪಿಯಿಂದ ತಯಾರಿಸಿದ ದೊಡ್ಡ ದೊಡ್ಡ ಮೂರ್ತಿಗಳನ್ನು ವಶಪಡಿಸಿಕೊಂಡು ತಿಳುವಳಿಕೆ ಮೂಡಿಸುತ್ತಿದ್ದಾರೆ. ಕಳೆದ ಎರಡು ವರ್ಷ ಕೋವಿಡ್ ನಿಯಮಾವಳಿಗಳಿದ್ದ ಕಾರಣ ವಾರ್ಡ್‌ಗೊಂದರಂತೆ ಗಣೇಶ ಮೂರ್ತಿ ಪ್ರತಿಷ್ಠಾಪಿಸಬೇಕೆಂಬ ನಿರ್ಬಂಧವನ್ನು ಈ ವರ್ಷ ಸಡಿಲಿಸಲಾಗಿದೆಯಾದರೂ, ಕೆಲ ನಿಯಮಗಳನ್ನು ಪಾಲಿಸಲೇಬೇಕಾಗಿದೆ ಎಂದು ಡಾ. ನಾಗರಾಜು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ

ಮೈಸೂರು, ಆ.19– ಮೈಸೂರಿನ ಡಿ.ಸುಬ್ಬಯ್ಯ ರಸ್ತೆಯಲ್ಲಿರುವ ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ– ಆಪರೇಟಿವ್ ಸೊಸೈಟಿಯ 40ನೇ ವಾರ್ಷಿಕೋತ್ಸವ ಅಂಗವಾಗಿ 2021–22ನೇ ಸಾಲಿನ ಸದಸ್ಯರ ಮಕ್ಕಳಿಗೆ ಎಸ್‌ಎಸ್‌ಎಲ್‌ಸಿಯಿಂದ ಸ್ನಾತಕೋತ್ತರ ಪದವೀಧರರಿಗೆ ಉತ್ತಮ ಅಂಕ ಗಳಿಸಿದವರಿಗೆ ಆ.28ರಂದು ಮಧ್ಯಾಹ್ನ 12.30ಕ್ಕೆ ವಿಜಯನಗರ 4ನೇಹಂತದ 2ನೇ ಫೇಸ್, ನಂ.5851ರಲ್ಲಿ ಪ್ರತಿಭಾ ಪುರಸ್ಕಾರ, ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಅರ್ಹ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಆ.24ರಂದು ಸಂಜೆ 6.30ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಮೊ:97412–02595, ದೂ.ಸಂ:0821–2422–127 ಸಂಪರ್ಕಿಸಬಹುದು ಎಂದು ಕಾರ್ಯದರ್ಶಿ ರವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಿಜೆಪಿ ಸಂಸದೀಯ ಮಂಡಳಿ ಸದಸ್ಯರಾಗಿ ನೇಮಕಗೊಂಡ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ ಬೆಂಗಳೂರಿನಲ್ಲಿ ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ 7 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಜಿಟಿಡಿ ಚಾಲನೆ



ಮೈಸೂರು, ಆ.19– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿಜಯನಗರ 3ನೇ ಹಂತದ ಜಿ ಬ್ಲಾಕ್ ಹಾಗೂ ದಟ್ಟಗಳ್ಳಿಯಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ರಸ್ತೆಗಳ ಅಭಿವೃದ್ಧಿ, 1 ಕೋಟಿ 50 ಲಕ್ಷ ವೆಚ್ಚದಲ್ಲಿ ಸರ್ದಾರ್ ವಲ್ಲಬಾಯಿ ಪಟೇಲ್ ನಗರದ ಪ್ರಮುಖ ರಸ್ತೆ ಹಾಗೂ 75 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದರು.

ಮೈಸೂರು–ಚಾಮರಾಜನಗರ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ, ಮೈಮುಲ್ ನಿರ್ದೇಶಕ ಅಶೋಕ್, ಮುಡಾ ಅಧೀಕ್ಷಕ ಅಭಿಯಂತರ ಶಂಕರ್, ಪಾಲಿಕೆ ಸದಸ್ಯೆ ಲಕ್ಷ್ಮಿ ಕಿರಣ್, ಮುಖಂಡರಾದ ಹಿನಕಲ್ ರಾಜು, ದಟ್ಟಗಳ್ಳಿ ರಮೇಶ್ ಕಲ್ಲಿಪಾಳ್ಯ ಶಶಿ, ಬಾಲು, ನಾಡನಹಳ್ಳಿ ಮಧು, ಅಕ್ಷಯ, ನಂದಿನಿ ಬಡಾವಣೆಯ ನಾಗರಾಜು, ಕುಮಾರ್, ಯರಗನಹಳ್ಳಿ ರಾಜೇಂದ್ರ, ರಾಜಣ್ಣ, ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾದ ನಾಗೇಶ್, ಮರೀಗೌಡ ಹಾಗೂ ಹಲವಾರು ಮುಖಂಡರು ಭಾಗವಹಿಸಿದ್ದರು.



ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಎಂ.ಶಿವಕುಮಾರ್ ಅವರನ್ನು ಬಿಜೆಪಿ ಯುವ ಮುಖಂಡರು ಅಭಿನಂದಿಸಿದರು. ಚಿತ್ರದಲ್ಲಿ ನಗರ ರೈತ ಮೋರ್ಚಾ ಅಧ್ಯಕ್ಷ ಕೆ.ದೇವರಾಜ್, ಮೈಸೂರು ನಗರ ಕಾರ್ಯಕಾರಿಣಿ ಸದಸ್ಯ ರಘು, ಮುಖಂಡರಾದ ಕಿರಣ್, ವಿ.ಮಂಜುನಾಥ್, ಜಗದೀಶ್, ಮಂಜು, ರಮೇಶ್ ಇತರರನ್ನು ಕಾಣಬಹುದು.




ವಿಶ್ವ ಛಾಯಾಗ್ರಾಹಕರ 183ನೆಯ ದಿನಾಚರಣೆ ಅಂಗವಾಗಿ ಮೈಸೂರು ಯುವ ಬಳಗ ವತಿಯಿಂದ 30ವರ್ಷಗಳಿಂದ ಸೇವೆ ಸಲ್ಲಿಸಿದ್ದ ಛಾಯಾಗ್ರಾಹಕರಿಗೆ ಮುಡಾ ಸದಸ್ಯ ನವೀನ್ ಕುಮಾರ್ ಸನ್ಮಾನಿಸಿದರು. ಚಿತ್ರದಲ್ಲಿ ಸನ್ಮಾನಿತರಾದ ರಾಜಗೋಪಾಲ್, ರವಿಕುಮಾರ್, ಸಂಗಮೇಶ, ಅಶೋಕ್ ಬಾಬು, ಸತೀಶ್ ವಾಸವಿ, ಸುದರ್ಶನ್, ಸುಬ್ರಹ್ಮಣ್ಯ, ರಾಜೇಶ್ ಬಾಬು, ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಹರ್ಷ, ಅನ್ಯಭಾಷಾ ಸಂಚಾಲಕ ರಾಜೇಂದ್ರ, ಶ್ರೀನಿವಾಸ್, ಸುದರ್ಶನ್, ವಿಘ್ನೇಶ್ವರ್‌ಭಟ್, ಮಂಜುನಾಥ್, ನವೀನ್ ಉಪಸ್ಥಿತರಿದ್ದರು.

ಕೊಡಗು ಘಟನೆ: ಗೃಹ ಸಚಿವರ ವಜಾ, ನ್ಯಾಯಾಂಗ ತನಿಖೆಗೆ ಆಗ್ರಹಿಸಿ

ಆ.26ರಂದು ಕಾಂಗ್ರೆಸ್‌ನಿಂದ ಮಡಿಕೇರಿ ಚಲೋ

ಮೈಸೂರು, ಆ.19(ಆರ್‌ಕೆಬಿ)– ಕೊಡಗಿನಲ್ಲಿ ಉಂಟಾಗಿರುವ ಮಳೆ ಹಾನಿ ಪರಿಶೀಲನೆಗೆ ತೆರಳಿದ್ದ ವೇಳೆ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಐದು ಕಡೆ ವ್ಯವಸ್ಥಿತ ದಾಳಿ ನಡೆದಿದೆ. ಗುಪ್ತಚಾರ ಇಲಾಖೆಗೆ ಈ ಬಗ್ಗೆ ಮಾಹಿತಿ ಇದ್ದರೂ ಅದನ್ನು ತಡೆಯುವ ಕೆಲಸ ಮಾಡಿಲ್ಲ. ಹೀಗಾಗಿ ಗೃಹ ಸಚಿವ ಅರಗ ಜ್ಞಾನೇಂದ್ರ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ರಾಜ್ಯಪಾಲರು ಗೃಹ ಸಚಿವರನ್ನು ವಜಾ ಮಾಡಬೇಕು. ಘಟನೆಯ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಒತ್ತಾಯಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೊಂದು ಸರ್ಕಾರೀ ಪ್ರಾಯೋಜಿತ ದಾಳಿಯಾಗಿವೆ. ರಾಜ್ಯದಲ್ಲಿ ಕೋಮುಗಲಭೆಗಳು ಹೆಚ್ಚುತ್ತಿವೆ. ಸರ್ಕಾರ ತನ್ನ ವೈಫಲ್ಯ ಮರೆಮಾಚಲು ಇಂತಹ ಪ್ರಚೋದನೆಗೆ ಕುಮ್ಮಕ್ಕು ನೀಡುತ್ತಿದೆ. ಸರ್ಕಾರದ ವೈಫಲ್ಯ ತಿದ್ದುವ ನಿಟ್ಟಿನಲ್ಲಿ ಚಾಟೀ ಏಟು ಬೀಸಬೇಕಾದುದು ವಿರೋಧ ಪಕ್ಷದ ನಾಯಕರ ಕರ್ತವ್ಯ. ಹೀಗಾಗಿ ಅವರು ಕೊಡಗಿಗೆ ಪ್ರಯಾಣಿಸುವಾಗ ನಡೆದ ಘಟನೆ ಸೈನ್ಯಕ್ಕೆ ತಮ್ಮದೇ ಆದ ವಿಶೇಷ ಕೊಡುಗೆ ನೀಡಿದ ಕೊಡಗಿಗೆ ಕಪ್ಪು ಚುಕ್ಕೆಯಾಗಿದೆ. ಈ ಘಟನೆಗೂ ಬಿಜೆಪಿಗೂ ಸಂಬಂಧವಿಲ್ಲ ಎಂಬ ಮಾತು ಸರಿಯಲ್ಲ. ಏಕೆಂದರೆ ಅಲ್ಲಿನ ಯುವ ಮೋರ್ಚಾ ಅಧ್ಯಕ್ಷರು ಸೇರಿ ಆ ಪಕ್ಷದ ಪದಾಧಿಕಾರಿಗಳೇ ಪಾಲ್ಗೊಂಡಿದ್ದಾರೆ ಎಂದು ಆರೋಪಿಸಿದರು.



ಮೊಟ್ಟೆ ಎಸೆತ ಘಟನೆ ಸೈನಿಕರ ನಾಡಿನಲ್ಲಿ ಮಾಡಿದ ಹೇಡಿತನ. ಕೊಡಗಿನ ವೀರ ಸಂಸ್ಕೃತಿಗೆ ತಲೆ ತಗ್ಗಿಸುವ ಕೆಲಸ ಬಿಜೆಪಿಗರು ಮಾಡಿದ್ದಾರೆ. ಹೀಗಾಗಿ ಆ.26ರಂದು ಮಡಿಕೇರಿ ಚಲೋ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗುತ್ತಿದೆ ಮೈಸೂರು ಜಿಲ್ಲೆಯಿಂದ ಸಹಸ್ರಾರು ಕಾಂಗ್ರೆಸ್ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಇದು ಹೇಡಿಗಳ ಕೃತ್ಯ ಸೈದ್ಧಾಂತಿಕ, ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿ ಯಾಗಿದೆ. ಬಿಜೆಪಿಯವರು ಹಿಂಸಾಚಾರಕ್ಕೆ ಇಳಿದಿದ್ದಾರೆ. ಯಾರಲ್ಲಿ ಸೈದ್ಧಾಂತಿಕವಾಗಿ ಗಟ್ಟಿತನ ಇಲ್ಲವೋ ಅಲ್ಲಿ ಹಿಂಸಾಚಾರ ವಾಗುತ್ತದೆ. ವಿರೋಧಪಕ್ಷದ ನಾಯಕ ಎಂದರೆ ಮುಖ್ಯಮಂತ್ರಿಗೆ ಸಮಾನ. ಅಂತಹ ನಾಯಕನಿಗೆ ರಕ್ಷಣೆ ಇಲ್ಲದಿದ್ದರೆ ಸಾಮಾನ್ಯರ ರಕ್ಷಣೆಯನ್ನು ಈ ಸರ್ಕಾರದಿಂದ ನಿರೀಕ್ಷಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಹೋರಾಟದ ಹಿನ್ನೆಲೆಯಿಂದ ಬಂದಿರುವ ಸಿದ್ದರಾಮಯ್ಯ ಅವರು ಇಂತಹ ಘಟನೆಗಳಿಂದ ಹೆದರುವುದಿಲ್ಲ. ಮತ್ತಷ್ಟು ಗಟ್ಟಿಯಾಗುತ್ತಾರೆ ಎಂದು ಹೇಳಿದರು.

ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ ಬಿಜೆಪಿಯಿಂದ ಅಭಿವೃದ್ಧಿ ಬದಲಿಗೆ ಕೋಮು ಗಲಭೆಗಳು ಹೆಚ್ಚುತ್ತಿವೆ. ಇದಕ್ಕೆ ಕಡಿವಾಣ ಹಾಕಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಮಾರುತಿ ಉಪಸ್ಥಿತರಿದ್ದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಖಂಡಿಸಿ

ತಿ.ನರಸೀಪುರ, ನಂ.ಗೂಡು, ಪಿ.ಪಟ್ಟಣದಲ್ಲಿ ಪ್ರತಿಭಟನೆ

ತಿ.ನರಸೀಪುರ, ಆ.19– ಕೊಡಗಿನಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದಿರುವ ಕೃತ್ಯ ಖಂಡಿಸಿ ತಿ.ನರಸೀಪುರ, ನಂಜನಗೂಡು ಹಾಗೂ ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಸ್ತೆ ತಡೆದು ಬೃಹತ್ ಪ್ರತಿಭಟನೆ ನಡೆಸಿದರು.



ತಿ.ನರಸೀಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ



ನಂಜನಗೂಡಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ತಿ.ನರಸೀಪುರ: ಪಟ್ಟಣದ ಖಾಸಗಿ ಬಸ್ ನಿಲ್ದಾಣದ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ಟೈರ್‌ಗಳಿಗೆ ಬೆಂಕಿ ಹಚ್ಚಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಘಟನೆಯ ಹೊಣೆ ಹೊತ್ತು ಗೃಹ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಲೆ ಏರಿಕೆ, ಉದ್ಯೋಗ ಸೃಷ್ಟಿ ವಿಫಲ, ಸರ್ಕಾರದ ಹಗರಣಗಳನ್ನು ಮರೆಮಾಚಲು ಹಾಗೂ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಜನರ ಮನಸ್ಸನ್ನು ಬೇರೆಡೆ ಸೆಳೆಯುತ್ತಿವೆ. ಮುಂಬರುವ ಚುನಾವಣೆ ಬಗ್ಗೆ ಆಂತರಿಕ ಸಮೀಕ್ಷೆ ನಡೆಸಿರುವ ಬಿಜೆಪಿ ಅಧಿಕಾರ ಕಳೆದುಕೊಳ್ಳುವ ಹತಾಶೆಯಲ್ಲಿದೆ. ಹಾಗಾಗಿ ಹಿಂದೂ ಧರ್ಮದ ಹೆಸರಿನಲ್ಲಿ ಮತ ಕ್ರೋಢೀಕರಣಕ್ಕೆ ಮುಂದಾಗಿದೆ. ಮತದಾರರು ಕೇಂದ್ರದ 8 ವರ್ಷ ಮತ್ತು ರಾಜ್ಯದ 3 ವರ್ಷಗಳ ಆಡಳಿತ ಕಂಡು ಭ್ರಮನಿರಶನರಾದ್ದಾರೆ. ಹಾಗಾಗಿ ಬಿಜೆಪಿ ಸರ್ಕಾರ ಹತಾಶ ಭಾವದಿಂದ ಹಿಂಸಾ ಕೃತ್ಯಗಳನ್ನು ಪ್ರಚೋದಿಸುತ್ತಿದ್ದು, ಮತದಾರರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಘಟನೆಯ ಹೊಣೆಹೊತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಮುಖ್ಯಮಂತ್ರಿಗಳು ಭಾನುವಾರ ಮೂಗೂರಿಗೆ ಆಗಮಿಸಲಿದ್ದು, ಘಟನೆ ಖಂಡಿಸಿ ಕಪ್ಪು ಬಾವುಟ ಪ್ರದರ್ಶಿಸಲು ಕಾರ್ಯತಂತ್ರ ರೂಪಿಸಲಾಗುತ್ತದೆ ಎಂದರು.

ಪ್ರತಿಭಟನೆಯಲ್ಲಿ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಪುರಸಭಾಧ್ಯಕ್ಷ ಎಸ್.ಮದನ್‌ರಾಜ್, ಮಾಜಿ ಅಧ್ಯಕ್ಷ ಎನ್.ಸೋಮು, ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸೈಯದ್, ಉಪಾಧ್ಯಕ್ಷೆ ನಾಗರತ್ನ, ಸದಸ್ಯರಾದ ಬಾದಾಮಿ ಮಂಜು, ಟಿ.ಎಂ.ನಂಜುಂಡಸ್ವಾಮಿ, ತುಂಬಲ ಪ್ರಕಾಶ್, ಮೆಡಿಕಲ್ ನಾಗರಾಜು, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಗುತ್ತಿಗೆದಾರ ಮಾಧು, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ. ವೆಂಕಟೇಶ್, ಮಾಜಿ ಉಪಾಧ್ಯಕ್ಷ ಮಹದೇವ್, ಉಪ್ಪಾರ ಮಹಾಸಭಾ ಕಾರ್ಯದರ್ಶಿ ಸಿದ್ದಶೆಟ್ಟಿ ಮಹದೇವಸ್ವಾಮಿ, ಮುಖಂಡರಾದ ಪಿ.ಸ್ವಾಮಿನಾಥಗೌಡ, ರಾಘವೇಂದ್ರ, ಗಣೇಶ್, ರಾಮಲಿಂಗಯ್ಯ, ಉಮೇಶ್, ಆಪ್ತ ಸಹಾಯಕ ಬಸವರಾಜು, ಗ್ಯಾಸ್ ಉಮೇಶ್, ಚೌಹಳ್ಳಿ ಮಲ್ಲೇಶ್, ನಾಗರಾಜು ಇತರರಿದ್ದರು.

ನಂಜನಗೂಡು: ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ಮೈಸೂರು–ಗುಂಡ್ಲುಪೇಟೆ ಹೆದ್ದಾರಿ ತಡೆದು ಮಾನವ ಸರಪಳಿ ನಿರ್ಮಿಸಿ, ಟೈರ್‌ಗಳಿಗೆ ಬೆಂಕಿ ಹಚ್ಚಿ, ಸಿಎಂ ಬೊಮ್ಮಾಯಿ ಭಾವಚಿತ್ರಕ್ಕೆ ಮೊಟ್ಟೆ ಎಸೆದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಬಿಜೆಪಿ ಕಾರ್ಯಕರ್ತರು ಮೊಟ್ಟೆ ಎಸೆದಿರುವುದು ಖಂಡನೀಯ. ಹೀಗಾಗಿ ಘಟನೆ ಖಂಡಿಸಿ ಆ.26 ರಂದು ಕಾಂಗ್ರೆಸ್‌ನಿಂದ ಮಡಿಕೇರಿ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.



ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮಿಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಕಾಂಗ್ರೆಸ್ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ, ಮಹಿಳಾ ಜಿಲ್ಲಾಧ್ಯಕ್ಷೆ ಲತಾ, ನಗರಸಭಾ ಸದಸ್ಯರಾದ ಶ್ರೀಕಂಠಸ್ವಾಮಿ, ಗಂಗಾಧರ್, ಮಹೇಶ್, ಗಾಯತ್ರಿ, ಮುಖಂಡರಾದ ಹುಂಡಿನಾಗರಾಜು, ರಾಜೇಶ್, ಶಿವಪ್ಪದೇವರು, ದೊರೆಸ್ವಾಮಿನಾಯಕ, ಕರಳಪುರ ನಾಗರಾಜು, ಮಂಜುನಾಥ್, ಶಿವಣ್ಣ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ. ನಾಗೇಶ್‌ರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಜಿಪಂ ಮಾಜಿ ಅಧ್ಯಕ್ಷ ಶಂಕರಪ್ಪ, ಯುವ ಘಟಕ ಅಧ್ಯಕ್ಷ ಅಶೋಕ್ ಸೇರಿದಂತೆ ಅನೇಕರಿದ್ದರು.

ಪಿರಿಯಾಪಟ್ಟಣ: ಪಟ್ಟಣದ ಕಾಂಗ್ರೆಸ್ ಕಚೇರಿಯಿಂದ ಪ್ರತಿಭಟನಾ ರ್‍ಯಾಲಿ ನಡೆಸಿದ ಕಾರ್ಯಕರ್ತರು ಬೆಟ್ಟದಪುರ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಟೈರ್ ಸುಡಲು ಮುಂದಾದಾಗ ಪೊಲೀಸರು ಮತ್ತು ಕಾರ್ಯಕರ್ತರ ನಡುವೆ ಕೆಲಕಾಲ ಮಾತಿನ ಚಕಮಕಿ ನಡೆಯಿತಾದರೂ, ಪ್ರತಿಭಟನಾಕಾರರು ಟೈರ್ ಸುಟ್ಟು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರ ವಿರುದ್ಧ ಧಿಕ್ಕಾರ ಕೂಗಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಮಾಜಿ ಸದಸ್ಯ ಹೆಚ್.ಡಿ.ಗಣೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ಮುಖಂಡರಾದ ನಿತಿನ್, ರವಿ, ಚಾಮರಾಜು, ಅಶೋಕ್ ಕುಮಾರ್ ಗೌಡ, ರಘು, ಹರೀಶ್, ಮೋದೇಶ್, ಕಲ್ಯಾಣಪ್ಪ ನಾಗಣ್ಣ, ಸಮೀವುಲ್ಲಾ, ಪುಟ್ಟರಾಜು, ಪಿ.ಮಹದೇವ್, ರಾಮಚಂದ್ರು, ಪುಟ್ಟಯ್ಯ, ಲೋಕೇಶ್, ಸುರೇಶ್, ರಕ್ಷಿತ್, ಮಂಜು, ಮಹೇಂದ್ರ, ಮಲ್ಲಣ್ಣ, ಮುರುಳಿ, ನಂದೀಶ್, ಪದ್ಮಲತಾ, ಲೋಹಿತ್, ಪುರುಷೋತ್ತಮ್ ಹಾಗೂ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು. ಇನ್ಸ್‌ಪೆಕ್ಟರ್ ಜಗದೀಶ್, ಎಸ್‌ಐ ಪುಟ್ಟರಾಜು ಹಾಗೂ ಸಿಬ್ಬಂದಿ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಗೃಹ ಸಚಿವರು ರಾಜೀನಾಮೆ ನೀಡಲಿ

ತಿ.ನರಸೀಪುರ, ಆ.19– ವಿಪಕ್ಷ ನಾಯಕ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಪ್ರಕರಣ ಸಂಬಂಧ ನೈತಿಕ ಹೊಣೆ ಹೊತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪುರಸಭಾ ಅಧ್ಯಕ್ಷ ಎಸ್.ಮದನ್ ರಾಜ್ ಆಗ್ರಹಿಸಿದ್ದಾರೆ.



ಪಟ್ಟಣದ ಚಿಕ್ಕಮ್ಮತಾಯಿ ಯಾತ್ರಿ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಡಿಕೇರಿಯಲ್ಲಿ ಮಳೆ ಹಾನಿ ಪ್ರದೇಶ ಭೇಟಿಗೆ ತೆರಳಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ, ಕಪ್ಪು ಬಾವುಟ ಪ್ರದರ್ಶನ ಸರ್ಕಾರದ ಪ್ರಾಯೋಜಿತ ಕೃತ್ಯ. ಸಿದ್ದರಾಮಯ್ಯರಿಗಿರುವ ಜನಪ್ರಿಯತೆ ಸಹಿಸಲಾಗದೇ ಕೆಲ ಪುಂಡರು ಸರ್ಕಾರಿ ಕುಮ್ಮಕ್ಕಿನಿಂದಲೇ ಅವರನ್ನು ಟಾರ್ಗೆಟ್ ಮಾಡಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಬಹುದಿತ್ತು. ಆದರೆ ಉದ್ದೇಶಪೂರ್ವಕವಾಗಿಯೇ ಸಿದ್ದರಾಮಯ್ಯ ಅವರಿಗೆ ಅಪಮಾನ ಮಾಡಲಾಗಿದೆ ಎಂದರು.

ಸಿದ್ದರಾಮಯ್ಯ ಅವರ ಕಾರಿನ ಮೇಲಿನ ಮೊಟ್ಟೆ ಎಸೆತ ಪ್ರಕರಣ ಖಂಡಿಸಿ ಆಗಸ್ಟ್ 26 ರಂದು ಮಡಿಕೇರಿ ಚಲೋ ನಡೆಸಲಾಗುತ್ತದೆ. ಅಂದು 2 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರು ಭಾಗವಹಿಸಲಿದ್ದು, ಯಾವುದೇ ಅಹಿತಕರ ಘಟನೆ ನಡೆದರೆ ಅದಕ್ಕೆ ಬಿಜೆಪಿ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು. ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಮುರುಳಿ, ಮಹೇಶ್, ಆಲಗೂಡು ಸಂತೋಷ್, ರಾಶಿ, ಮಹದೇವ ಮತ್ತಿತರರಿದ್ದರು.

ನೂತನ ಆಟೋ ನಿಲ್ದಾಣಕ್ಕೆ ಭೂಮಿ ಪೂಜೆ

ಕೆ.ಆರ್.ನಗರ, ಆ.19– ಪ್ರಯಾಣಿಕರನ್ನು ಸುರಕ್ಷಿತವಾಗಿ ಅವರ ಸ್ಥಳಕ್ಕೆ ತಲುಪಿಸುವ ಕಾರ್ಯ ಶ್ಲಾಘನೀಯ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ವಿವಿ ರಸ್ತೆಯ ಸ್ನೇಹ ಎಂಟರ್‌ಪ್ರೈಸೆಸ್ ಮುಂಭಾಗ ನೂತನ ಆಟೋ ನಿಲ್ದಾಣಕ್ಕೆ ಭೂಮಿ ಪೂಜೆ ನೇರವೇರಿಸಿ ಮಾತನಾಡಿದ ಅವರು, ಅತಿ ಆಸೆಯಿಂದ ವಿಶ್ರಾಂತಿ ಪಡೆಯದೇ ದುಡಿಯಬೇಡಿ. ದುಷ್ಚಟಗಳಿಂದ ದೂರವಿದ್ದು ಬಂದ ಹಣದಲ್ಲಿ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಿ ಎಂದು ಸಲಹೆ ನೀಡಿದರು.



ನೂತನ ನಿಲ್ದಾಣಕ್ಕೆ ಸರ್ಕಾರದ ಅನುದಾನದ ಜೊತೆಗೆ ವೈಯಕ್ತಿಕ ಧನಸಹಾಯ ಮಾಡುತ್ತೇನೆ. ಕಡಿಮೆ ವೆಚ್ಚದಲ್ಲಿ ಸುಸಜ್ಜಿತ ನಿಲ್ದಾಣ ನಿರ್ಮಿಸಿಕೊಳ್ಳುವ ಜೊತೆಗೆ ಆಟೋ ಚಾಲಕರು ಮತ್ತು ಮಾಲೀಕರು ಉತ್ತಮ ಭಾಂದವ್ಯದಿಂದ ಸೋದರರಂತೆ ಇರುವಂತೆ ಕರೆ ನೀಡಿದರು. ಕೃಷ್ಣರಾಜೇಂದ್ರ ಒಡೆಯರು ನಿರ್ಮಿಸಿದ ಮಾದರಿ ನಗರ ಸ್ವಚ್ಛ ಮತ್ತು ಶುಚಿಯಾಗಿರುವಂತೆ ನೋಡಿಕೊಳ್ಳಿ, ನಾನು ಸಹ ಪಟ್ಟಣಕ್ಕೆ 10 ಕೋಟಿ ವಿಶೇಷ ಅನುದಾನ ತಂದಿದ್ದು, ಈಗಾಗಲೇ ರಸ್ತೆ, ಒಳಚರಂಡಿ ಕಾಮಗಾರಿ ಪ್ರಾರಂಭವಾಗಿದೆ. ಮುಂದಿನ ದಿನಗಳಲ್ಲಿ ಆಟೋ ಚಾಲಕರು ನಿರ್ಭೀತಿಯಿಂದ ಆಟೋಗಳನ್ನು ಓಡಿಸಬಹುದು ಎಂದರು.

ಈ ವೇಳೆ ವರ್ತಕರ ಸಂಘದ ಅಧ್ಯಕ್ಷ ಕೆ.ಟಿ.ರಮೇಶ್, ಪುರಸಭಾ ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಮಾಜಿ ಸದಸ್ಯ ಸಿರಾಜ್, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ನಿವೃತ್ತಿ ಶಿಕ್ಷಕ ಸಂಪತ್, ಮುಖಂಡರಾದ ಹೆಚ್.ಪಿ.ಶಿವಣ್ಣ, ಕುಮಾರ್, ಧರ್ಮರಾಜು, ನಗರಧ್ಯಕ್ಷ ಹರ್ಷಿತ್ ಕುಮಾರ್, ಕುಚೇಲ, ಪುಟ್ಟರಾಜು, ಬಿ.ಎಂ.ನಾಗರಾಜ್, ಅಂಗಡಿ ಶಿವಣ್ಣ, ಆಟೋ ಚಾಲಕರ ಸಂಘದ ಅಧ್ಯಕ್ಷ ಕಾಂತ್‌ರಾಜ್, ಉಪಾಧ್ಯಕ್ಷ ಹರೀಶ್, ವೆಂಕಟರಾಂ, ಮೋಹನ್ ಕುಮಾರ್, ಚಂದ್ರ, ಗುರುನಾಥ್, ಮೋಹನ್ ರಾಜ್ ಸೇರಿದಂತೆ ಉಪಸ್ಥಿತರಿದ್ದರು.

ಇಬ್ಬರು ಜಾನುವಾರು ಕಳ್ಳರ ಬಂಧನ

6 ಹಸುಗಳು, ಬೊಲೆರೋ ಪಿಕ್‌ಅಪ್ ವಾಹನ ವಶ



ಹುಣಸೂರು, ಆ.19– ಇಬ್ಬರು ಜಾನುವಾರು ಕಳ್ಳರನ್ನು ಬಂಧಿಸುವಲ್ಲಿ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ. ತಾಲೂಕಿನ ರತ್ನಪುರಿ ಗ್ರಾಮದ ಮಾರುತಿ ಬಡಾವಣೆ ನಿವಾಸಿ ಮಹಮ್ಮದ್ ರಫೀಕ್(22) ಹಾಗೂ ಮುಸ್ಲಿಂ ಬ್ಲಾಕ್ ನಿವಾಸಿ ಮಹಮ್ಮದ್ ನಿಷಾದ್(22) ಬಂಧಿತ ಆರೋಪಿಗಳು.

ವಿವರ: ಆ.16ರಂದು ರಾತ್ರಿ ಸುಮಾರು ಲಕ್ಷ ರೂ. ಬೆಲೆಬಾಳುವ 2 ಹೆಚ್‌ಎಫ್ ಹಸುಗಳನ್ನು ದುಷ್ಕರ್ಮಿಗಳು ಕಳ್ಳತನ ಮಾಡಿದ್ದಾರೆ ಎಂದು ತಾಲೂಕಿನ ಕೂಡ್ಲೂರು ಗ್ರಾಮದ ನಿವಾಸಿ ಹಾಗೂ ಹಸು ಮಾಲೀಕರಾದ ತೋಮಸ್ ಅವರು ಇಲ್ಲಿನ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಜಿಲ್ಲಾ ಎಸ್ಪಿ ಮಾರ್ಗದರ್ಶನದಲ್ಲಿ, ಡಿವೈಎಸ್ಪಿ ರವಿ ಪ್ರಸಾದ್ ಅವರ ಆದೇಶದ ಮೇರೆಗೆ ಗ್ರಾಮಾಂತರ ಠಾಣಾ ಇನ್ಸ್‌ಪೆಕ್ಟರ್ ಸಿ.ವಿ.ರವಿ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ತನಿಖೆ ಕೈಗೊಂಡಿದ್ದರು. ಆ.18 ರಂದು ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ರತ್ನಪುರಿ ಗ್ರಾಮದ ಸ್ಮಶಾನದ ಬಳಿ ಆರೋಪಿಗಳನ್ನು ವಶಕ್ಕೆ ಪಡೆದು, ಅವರಿಂದ ಹುಣಸೂರು ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಕಾಣೆಯಾಗಿದ್ದ 2 ಹೆಚ್‌ಎಫ್ ಹಸು, ಪಟ್ಟಣ ಠಾಣಾ ವ್ಯಾಪ್ತಿಯಲ್ಲಿ ಕಳುವಾಗಿದ್ದ 2 ಹಸುಗಳು ಹಾಗೂ ಬಿಳಿಕೆರೆ ಠಾಣೆ ವ್ಯಾಪ್ತಿಯಲ್ಲಿ ಕಳುವಾಗಿದ್ದ 2 ಹೆಚ್‌ಎಫ್ ಹಸು ಸೇರಿದಂತೆ 6 ಹಸುಗಳು ಹಾಗೂ ಹಸುಗಳನ್ನು ಸಾಗಿಸಲು ಬಳಸುತ್ತಿದ್ದ ಬೊಲೆರೋ ಪಿಕ್‌ಅಪ್ (ಕೆಎ.13, ಸಿ.2087) ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಹುಣಸೂರು ಗ್ರಾಮಾಂತರ ಠಾಣೆ ಎಸ್‌ಐ ಜಮೀರ್ ಅಹಮ್ಮದ್, ಎಸ್‌ಐ ಸಿದ್ದರಾಜು, ಎಎಸ್‌ಐ ಅಂತೋಣಿ ಕ್ರೂಸ್, ಸಿಬ್ಬಂದಿಗಳಾದ ವಿಜಯರಘು, ಪ್ರಸನ್ನಕುಮಾರ್, ಲಿಖಿತ್, ವಸಂತ, ಸುಂದರ್ ಸೇರಿದಂತೆ ಮತ್ತಿತರರಿದ್ದರು.



ಮೈಸೂರು ತಾಲೂಕಿನ ಗೆಜ್ಜಗಳ್ಳಿ ಡೈರಿ ನೂತನ ಕಟ್ಟಡವನ್ನು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು. ಈ ವೇಳೆ ಮೈಮುಲ್ ನಿರ್ದೇಶಕರಾದ ಕೆ.ಉಮಾಶಂಕರ್, ಅಶೋಕ್, ಲೀಲಾ ನಾಗರಾಜು, ಜಿಪಂ ಮಾಜಿ ಸದಸ್ಯರಾದ ರೂಪ, ಗ್ರಾಪಂ ಮಾಜಿ ಉಪಾಧ್ಯಕ್ಷ ನಂಜಪ್ಪ, ಗೆಜ್ಜಗಳ್ಳಿ ಡೈರಿ ಅಧ್ಯಕ್ಷ ಪ್ರಭುಸ್ವಾಮಿ, ಉಪಾಧ್ಯಕ್ಷ ನಟರಾಜು, ಮೈಮುಲ್ ಉಪ ವ್ಯವಸ್ಥಾಪಕ ಡಾ. ದಿವಾಕರ್, ವಿಸ್ತರಣಾಧಿಕಾರಿ ಪರಮೇಶ್, ಎಂ.ಪ್ರವೀಣ್, ಮುಖ್ಯ ಕಾರ್ಯದರ್ಶಿ ನಾಗೇಂದ್ರ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಬನ್ನೂರು, ಆ.19– ಲಯನ್ಸ್ ಕ್ಲಬ್ ಆಫ್ ಬನ್ನೂರು, ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಕಣ್ಣಿನ ಆಸ್ಪತ್ರೆ, ಮೈಸೂರು ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಬನ್ನೂರಿನ ಲಯನ್ಸ್ ವಿದ್ಯಾಸಂಸ್ಥೆಯಲ್ಲಿ ಆ.22ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತದಾರರ ಆಶೀರ್ವಾದ



ಮಲ್ಕುಂಡಿ, ಆ.19– ಕ್ಷೇತ್ರದಲ್ಲಿ ಜನರ ಸಮಸ್ಯೆ ಆಲಿಸುವವರು ಇಲ್ಲದ ಕಾರಣ ಮತದಾರರು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ನಂಜನಗೂಡು ತಾಲೂಕಿನ ಹೆಗ್ಗಡಹಳ್ಳಿ, ಶಿರಮಳ್ಳಿ, ಮೊಬಳ್ಳಿ ಗ್ರಾಮಗಳಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಎಐಸಿಸಿ ಆದೇಶದ ಮೇರೆಗೆ ಕೈಗೊಂಡಿರುವ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ತ್ಯಾಗ ಬಲಿದಾನದ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಹಲವು ಮಹನೀಯರನ್ನು ನೆನಪಿಸಿಕೊಳ್ಳುವ ನಿಟ್ಟಿನಲ್ಲಿ ಪಾದಯಾತ್ರೆ ಆಯೋಜಿಸಲಾಗಿದ್ದು, ಪ್ರತಿ ಗ್ರಾಮಗಳಲ್ಲೂ ಕಾರ್ಯಕ್ರಮಕ್ಕೆ ಅಭೂತಪೂರ್ವ ಬೆಂಬಲ ಸಿಗುತ್ತಿದೆ ಎಂದರು.

ಪಾದಯಾತ್ರೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕೆ.ಜಿ.ಮಹೇಶ್, ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಅಭಿನಂದನ್ ಪಾಟೀಲ್, ವಕೀಲ ನಾಗರಾಜ್ ಸೇರಿದಂತೆ ಹಲವರಿದ್ದರು.

ಮುಖ್ಯಮಂತ್ರಿಗಳಿಗೆ ಬೆದರಿಕೆ ಒಡ್ಡಿದ ಆರೋಪ

ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ದೂರು ದಾಖಲು

ತಿ.ನರಸೀಪುರ, ಆ.19– ಕಾಂಗ್ರೆಸ್ ಕಾರ್ಯಕರ್ತರು ಬೀದಿಗಳಿದರೆ ಮುಖ್ಯಮಂತ್ರಿಗಳು ಓಡಾಡದಂತಾಗುತ್ತದೆ ಎಂದು ಹೇಳಿಕೆ ನೀಡುವ ಮೂಲಕ ಬೆದರಿಕೆವೊಡ್ಡಿದ್ದಾರೆ ಎಂದು ಆರೋಪಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೊಡಗಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡುವ ಭರದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ನಮ್ಮ ಕಾರ್ಯಕರ್ತರು ಬೀದಿಗಿಳಿದರೆ ಮುಖ್ಯಮಂತ್ರಿಗಳು ಓಡಾಡದಂತೆ ಆಗುತ್ತದೆ ಎಂದು ಮುಖ್ಯಮಂತ್ರಿಗಳಿಗೆ ಬೆದರಿಕೆ ಒಡ್ಡಿದ್ದಾರೆ. ಹಾಗಾಗಿ ಅವರನ್ನು ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಅಧಿಕಾರ ಹಿಡಿಯುವ ಹಗಲು ಗನಸು ಕಾಣುತ್ತಿದೆ. ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿರುವ ಸಿದ್ದರಾಮಯ್ಯ ಅವರು ಸಮಾಜದ ಸ್ವಾಸ್ಥ್ಯ ಕೆಡಿಸುವ ಹೇಳಿಕೆಗಳನ್ನು ನೀಡುತ್ತಿದ್ದಾರೆ. ದೇಶ ವಿಂಗಡಣೆಯಲ್ಲಿ ಕಾಂಗ್ರೆಸ್ ಪಕ್ಷ ಎತ್ತಿದ ಕೈ. ಧರ್ಮವಾರು ಜನರನ್ನು ಎತ್ತಿಕಟ್ಟುವ ಕೆಲಸ ಮಾಡಿ ಅಧಿಕಾರ ಹಿಡಿಯಲು ಕಾಂಗ್ರೆಸ್ ಹವಣಿಸುತ್ತಿದೆ. ಹಾಗಾಗಿ ಸಮಾಜದ ಹಿತ ಕದಡುವ ಹೇಳಿಕೆಗಳನ್ನು ಕಾಂಗ್ರೆಸ್ ನಾಯಕರು ನೀಡುತ್ತಿದ್ದಾರೆ. ಮುಸ್ಲಿಂರನ್ನು ಒಲೈಸಿಕೊಳ್ಳಲು ಯಾವುದೇ ತ್ಯಾಗಕ್ಕಾದರೂ ಸಿದ್ದರಾಮಯ್ಯ ಸಿದ್ಧರಿರುವಂತೆ ಕಾಣುತ್ತಿದೆ ಎಂದು ಕಿಡಿಕಾರಿದರು.



ಶಿವಮೊಗ್ಗದಲ್ಲಿ ನಡೆದ ಘಟನೆಯ ಆರೋಪಿಗಳ ಬಂಧನಕ್ಕೆ ಒತ್ತಾಯಿಸುವುದನ್ನು ಬಿಟ್ಟು ಸಾವರ್ಕರ್ ಫೋಟೋವನ್ನು ಮುಸ್ಲಿಮರ ಏರಿಯಾದಲ್ಲಿ ಏಕೆ ಹಾಕಕಬೇಕಿತ್ತು ಎಂಬ ಅವರ ಹೇಳಿಕೆ ಖಂಡನೀಯ. ಇವರ ಹೇಳಿಕೆ ಕೋಮು ಗಲಭೆಗೆ ಅವಕಾಶ ಮಾಡಿಕೊಡುವುದಿಲ್ಲವೇ ಎಂದು ಕಿಡಿಕಾರಿದರು. ಈ ವೇಳೆ ರಂಗೂನಾಯಕ್, ವೆಂಕಟರಮಣಶೆಟ್ಟಿ, ಮಂಜು, ಮಣಿಕಂಠ ಇದ್ದರು.

ಇಂದು ವಿದ್ಯುತ್ ಅದಾಲತ್

ಹೆಚ್.ಡಿ.ಕೋಟೆ, ಆ.19– ತಾಲೂಕಿನ ಮೊತ್ತ ಗ್ರಾಮದಲ್ಲಿ ಆ.20 ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಭಾಗದ ಜನತೆ ವಿದ್ಯುತ್ ಸಮಸ್ಯೆಗಳ ಬಗ್ಗೆ ದೂರುಗಳಿದ್ದರೇ ಸಭೆಯಲ್ಲಿ ಭಾಗವಹಿಸಿ ಪರಿಹರಿಸಿಕೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೀಡೆಯಿಂದ ದೈಹಿಕ, ಮಾನಸಿಕ ಬೆಳವಣಿಗೆ ಸಾಧ್ಯ



ಸರಗೂರು, ಆ. 19– ದೈಹಿಕ, ಮಾನಸಿಕ ಬೆಳವಣಿಗೆಗೆ ವಿದ್ಯಾರ್ಥಿಗಳು ಓದಿನೊಂದಿಗೆ ಕ್ರೀಡಾ ಚಟುವಟಿಕೆಯಲ್ಲಿಯೂ ಭಾಗಿಯಾಗಬೇಕು ಎಂದು ಬಿಜೆಪಿ ಮುಖಂಡ ಡಾ.ಕೃಷ್ಣಸ್ವಾಮಿ ತಿಳಿಸಿದರು. ತಾಲೂಕಿನ ಮುಳ್ಳೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಅಭಿವೃದ್ಧಿ ಸಮಿತಿಯಿಂದ ನಡೆದ ಸರಗೂರು ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ಹೆಚ್ಚಿನ ಒತ್ತು ನೀಡಬೇಕು. ಅಂಕಗಳ ಹಿಂದೆ ಬೀಳದೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಂಡು ದೈಹಿಕ, ಮಾನಸಿಕವಾಗಿ ಬೆಳವಣಿಗೆ ಹೊಂದಬೇಕು. ಪ್ರಪಂಚದ ಜ್ಞಾನ ಬೆಳೆಸಿಕೊಳ್ಳಲು ಮುಂದಾಗಬೇಕು ಎಂದರು.

ಈ ವೇಳೆ ಸಮಾಜ ಸೇವಕ ಬಾಬುನಾಯಕ, ಗ್ರಾಪಂ ಅಧ್ಯಕ್ಷ ಗೋವಿಂದಾಚಾರ್, ಎಸ್‌ಡಿಎಂಸಿ ಅಧ್ಯಕ್ಷ ರವಿಕುಮಾರ್, ನಿವೃತ್ತ ಎಎಸ್‌ಐ ದೊರೆಸ್ವಾಮಿ, ಶಾಲಾ ಮುಖ್ಯ ಶಿಕ್ಷಕ ವೆಂಕಟೇಶ್, ಗ್ರಾಪಂ ಉಪಾಧ್ಯಕ್ಷೆ ಚೆನ್ನಮ್ಮ, ಸದಸ್ಯರಾದ ಚಿಕ್ಕನಾಯ್ಕ, ಭಾಗ್ಯ ಸಿದ್ದರಾಜು, ಪವಿತ್ರಾ, ಪಿಡಿಓ ಹನುಮಯ್ಯ, ಎಸ್‌ಡಿಎಂಸಿ ಉಪಾಧ್ಯಕ್ಷ ಪ್ರಸಾದ್, ಸದಸ್ಯರಾದ ಶಿವಚೆನ್ನಪ್ಪ, ಕಾಳಿಂಗನಾಯಕ, ಮಹದೇವಸ್ವಾಮಿ, ಕೆಂಡಗಣ್ಣಸ್ವಾಮಿ, ಚೆನ್ನನಾಯಕ, ಯಶೋಧ, ನಿರ್ಮಲ, ಶಿವಕುಮಾರ್ ಸೇರಿದಂತೆ ಇನ್ನಿತರರಿದ್ದರು.



ಬನ್ನೂರು ಸಮೀಪದ ಪ್ರಜ್ಞಾ ಗುರುಕುಲ ಶಾಲೆಯಲ್ಲಿ 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಾಜಿ ಶಾಸಕ ಡಾ.ಎಲ್.ಎನ್.ಭಾರತೀಶಂಕರ್ ಧ್ವಜಾರೋಹಣ ನೆರವೇರಿಸಿದರು. ರಾಜ್ಯ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಜೈ ಶಂಕರ್, ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಸಿದ್ದೇಗೌಡ, ಪ್ರಾಂಶುಪಾಲ ಮುತ್ತುರಾಜ್ ಸೇರಿದಂತೆ ವಿದ್ಯಾರ್ಥಿಗಳಿದ್ದರು.



ಮೈಸೂರು ಚಾಮರಾಜ ಜೋಡಿ ರಸ್ತೆಯಲ್ಲಿರುವ ನಾಡಪ್ರಭು ಕೆಂಪೇಗೌಡರ ಅಭಿವೃದ್ಧಿ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಜಿ.ಗಂಗಾಧರ್ ಮತ್ತು ಉಪಾಧ್ಯಕ್ಷರಾಗಿ ಎನ್.ಬೆಟ್ಟಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಲ್ಲದೆ, ನಿರ್ದೇಶಕರಾಗಿ ಚಂದ್ರಶೇಖರ್, ಇ.ಸಿ.ನಿಂಗರಾಜೇ ಗೌಡ, ಗಣೇಶ್, ಚಂದ್ರು, ಪ್ರಕಾಶ್, ರಮೇಶ್ ನಾಯಕ್, ರಾಮು, ಶ್ರೀಮತಿ ನಮೃತಾ ರಮೇಶ್, ಶ್ರೀಮತಿ ಲಕ್ಷ್ಮೀದೇವಿ, ಕುಮಾರಿ ಪೂರ್ಣಿಮಾ ಆಯ್ಕೆಯಾಗಿದ್ದಾರೆ.

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನಂದರೆ ನನ್ನ ಕಕ್ಷಿದಾರರಾದ ಶ್ರೀ ಅಮಿತ್, ಬಿನ್ ಶೇಷಗಿರಿ, ವಿಜಯನಗರ, ಬೆಂಗಳೂರು ರವರು ಈ ಕೆಳಗೆ ಅನುಸೂಚಿಯಲ್ಲಿ ನಮೂದು ಮಾಡಿರುವ ಸ್ವತ್ತನ್ನು ಶ್ರೀಮತಿ ಆಶಾನಂದ, ಕೋಂ ಮಂಜುನಾಥ.ಎನ್, ನಂ. 38, 1ನೇ ಮಹಡಿ, ಭೀಮ ಭರಣಿ ಲೇಔಟ್,ರೈನ್‌ಬೋ ಶಾಲೆ ಹತ್ತಿರ, ಮರಟಿಕ್ಯಾತನಹಳ್ಳಿ, ಮೈಸೂರು -26, ಪುನೀತ್ ಕುಮಾರ್.ಎನ್, ಬಿನ್.ನಾಗರಾಜು, ನಂ.1914/308, 4ನೇ ಕ್ರಾಸ್, ಎಂ.ಜಿ.ಲೇಔಟ್, ರಾಮಮಂದಿರ ಹತ್ತಿರ, ಚನ್ನಪಟ್ಟಣ ಟೌನ್,ರಾಮನಗರ ಜಿಲ್ಲೆ, ಮತ್ತು ಅಮೋಘವರ್ಷ.ಹೆಚ್.ಎಂ. ಬಿನ್ ಹೆಚ್.ಮಲ್ಲಿಕಾರ್ಜುನ, ನಂ.398, ಬ್ಯಾಂಕ್‌ಕಾಲೋನಿ ರಸ್ತೆ, ಬೋಗಾದಿ, ಮೈಸೂರು- 570026 ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಸದರಿ ಅನುಸೂಚಿ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿಗಳು, ಸಂಘ-ಸಂಸ್ಥೆಗಳು, ಹಣಕಾಸು ಸಂಸ್ಥೆಗಳು ಹಾಗೂ ಇನ್ನಿತರರು ಯಾವುದೇ ರೀತಿಯ ತಂಟೆ ತಕರಾರು, ಹಕ್ಕುಬಾಧ್ಯತೆ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ಸೂಚನೆ ಪ್ರಕಟಣೆಯಾದ 15 ದಿನಗಳ ಒಳಗಾಗಿ ಕೆಳಕಂಡ ಸಹಿದಾರರನ್ನು ಲಿಖಿತ ರೂಪದಲ್ಲಿ ಮತ್ತು ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಸ್ವತ್ತಿನ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ, ಖರೀದಿ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆ. 15 ದಿನಗಳ ನಂತರಬರುವ ಯಾವುದೇ ತಕರಾರುಗಳನ್ನು ಮಾನ್ಯ ಮಾಡುವುದಿಲ್ಲ.

ಅನುಸೂಚಿ ವಿವರ:

1.ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕಣಿಯನ ಹುಂಡಿ ಗ್ರಾಮದಲ್ಲಿರುವ ಬಾಗಾಯ್ತು ಸರ್ವೆ ನಂಬರ್ ಒಂದು ನೂರ ಐವತ್ತೇಳು, ಹಿಸ್ಸಾ ನಂಬರು ಒಂದು (ಸ.ನಂ.157/1, ವಿಸ್ತೀರ್ಣ 2 ಎಕರೆ 15 ಗುಂಟೆ ಪೈಕಿ 0-31 ಗುಂಟೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ ಬ್ಲಾಕ್ 1 ರ ಜಮೀನು, ಪಶ್ಚಿಮಕ್ಕೆ ; ಲಾ. ನಂ.136 ರ ಜಮೀನು, ಉತ್ತರಕ್ಕೆ ; ಹಳ್ಳ, ದಕ್ಷಿಣಕ್ಕೆ : ಲಾ. ನಂ.156 ರ ಜಮೀನು.

2. ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕಣಿಯನಹುಂಡಿ ಗ್ರಾಮದಲ್ಲಿರುವ ಬಾಗಾಯ್ತು ಸರ್ವೆ ನಂಬರ್ ಒಂದು ನೂರ ಐವತ್ತೇಳು, ಹಿಸ್ಸಾ ನಂಬರು ಮೂರು (ಸ.ನಂ.157/3), ವಿಸ್ತೀರ್ಣ 2 ಎಕರೆ 15 ಗುಂಟೆ ಪೈಕಿ 0-32 ಗುಂಟೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಬ್ಲಾಕ್ 3 ರ ಜಮೀನು, ಪಶ್ಚಿಮಕ್ಕೆ ಬ್ಲಾಕ್ 1 ರ ಜಮೀನು, ಉತ್ತರಕ್ಕೆ ; ಹಳ್ಳ, ದಕ್ಷಿಣಕ್ಕೆ ; ಲಾ. ನಂ.156 ರ ಜಮೀನು.

3, ಮೈಸೂರು ಜಿಲ್ಲೆ, ಹೆಗ್ಗಡದೇವನಹಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕಣಿಯನಹುಂಡಿ ಗ್ರಾಮದಲ್ಲಿರುವ ಬಾಗಾಯ್ತು ಸರ್ವೆ ನಂಬರ್ ಒಂದು ನೂರ ಐವತ್ತೇಳು, ಹಿಸ್ಸಾ ನಂಬರು ನಾಲ್ಕು(ಸ.ನಂ.157/4), ವಿಸ್ತೀರ್ಣ 2 ಎಕರೆ 15 ಗುಂಟೆ ಪೈಕಿ 0-32 ಗುಂಟೆ' ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ ; ಲಾ. ಹಿ. 2 ರ ಜಮೀನು, ಪಶ್ಚಿಮಕ್ಕೆ ಬ್ಲಾಕ್ 1 ರ ಜಮೀನು, ಉತ್ತರಕ್ಕೆ ; ಹಳ್ಳ, ದಕ್ಷಿಣಕ್ಕೆ ; ಲಾ. ನಂ.156 ರ ಜಮೀನು.

ಸಹಿ/- ಹೆಚ್.ಟಿ.ಜಗನ್ನಾಥ, ವಕೀಲರು
ನಂ.89, 3ನೇ ಮಹಡಿ, ಶ್ರೀ ಕಾಂಪ್ಲೆಕ್ಸ್, ಅವಿನ್ಯೂ ರಸ್ತೆ ಬೆಂಗಳೂರು - 560 053ಮೊಬೈಲ್ ನಂ. 9845811181

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1
ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಟೆಂಡರ್ ಮುಂದೂಡಿಕೆ ದಿನಾಂಕ 18.08.2022

ಉಲ್ಲೇಖ: 1.ಮೂಲ ಟೆಂಡರ್ ಪ್ರಕಟಣೆ ಸಂಖ್ಯೆ 13/2022-23 ದಿನಾಂಕ 06.08.2022 2.ಈ ಕಛೇರಿ ಟೆಂಡರ್ ಮುಂದೂಡಿಕೆ ದಿನಾಂಕ 11-08-2022. ಈ ಕಛೇರಿಯ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 13/2022-23 ದಿನಾಂಕ 06.08.2022 ರ ಟೆಂಡರ್ ಪ್ರಕ್ರಿಯೆ ಮುಂದೂಡಿಕೆ ದಿನಾಂಕಗಳನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿದೆ. ಉಳಿದಂತೆ ಟೆಂಡರ್ ನ ಎಲ್ಲಾ ನಿಬಂಧನೆಗಳು ಹಾಗೆಯೇ ಮುಂದುವರಿಯುತ್ತವೆ. ಟೆಂಡರ್ ಮುಂದೂಡಿಕೆ ದಿನಾಂಕ ಟೆಂಡರ್ ಪ್ರಕಟಣೆ ಸಂಖ್ಯೆ 13/2022-23 ದಿನಾಂಕ: 06.08.22 ಹಿಂದೆ ಉಲ್ಲೇಖ (2) ರಲ್ಲಿ ನಿಗದಿಪಡಿಸಿದಂತೆ ಗುತ್ತಿಗೆದಾರರು ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ.29.08.2022 ಸಂಜೆ 4:00 ಗಂಟೆ. ಮುಂದೂಡಿದ ಪ್ರಕಟಣೆ ಯಂತೆ ಗುತ್ತಿಗೆದಾರರು ಇ-ಟೆಂಡರ್ ಸಲ್ಲಿಸಲು ದಿನಾಂಕ ಮತ್ತು ಸಮಯ: 24.08.22 ಸಮಯ: 11.30 ರಿಂದ 02.09.2022 ಸಮಯ: 17:00 ವರೆಗೆ. ಭರ್ತಿ ಮಾಡಿದ ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ: 03.09.2022 ಸಂಜೆ 5:00 ಗಂಟೆ

ಸಹಿ/- ಎಕ್ಸಿಕ್ಯೂಟಿವ್ ಇಂಜಿನಿಯರ್, ನಂ.1 ಹೇಮಾವತಿ, ಬಲ ಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/430/2022-23

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು